Janab J. MOHAMED IMAM.—It is not the quantity that counts, it is the quality that counts. (Laughter)

Mr. SPEAKER.—The Hon'ble Member has taken one hour by which time four members would have spoken and yet he is complaining! That is not right. Two members of his party have also spoken.

Janab J. MOHAMED IMAM.—I am not complaining.

ಶ್ರೀ ಎಂ. ಮಾದಯ್ಯನವರು (ಮೈಸೂರು ನಿಮ್ನ ಪಂಗಡ).—ಅಧ್ಯಕ್ಷರೇ, ಈಗ ನಮ್ಮ ಮುಂದಿರುವ ಬಡ್ಜೆಟ್ ಏನೋ ಸ್ವಾಗತಾರ್ಹವಾಗಿದೆ. ಆದರೂ ಅದರಲ್ಲಿರುವ ಕೆಲವು ಲೋಪದೋಷಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅಕ್ಸಿಡೆಂಟಲ್ ಫೈರ್‌ಗೆ ಇನ್ನೂ ಹೆಚ್ಚಿಗೆ ಹಣ ಒದಗಿಸಬೇಕೆಂದು ನಾನು ಅನೇಕ ಸಾರಿ ಹೇಳಿದ್ದೇನೆ. ಆದರೂ ಸಾಕಷ್ಟು ಮೊಬಲಗನ್ನು ಈ ಸಾರಿ ಕೊಟ್ಟಿಲ್ಲ. ಕೇವಲ ಒಂದು ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ. ನಮ್ಮ ಸಂಸ್ಥಾನದಿಂದ ಅಸ್ಸಾಂ ರಿಲೀಫ್ ಫಂಡಿಗೆ ಹಣ ಕೊಡಬೇಕು, ಇದಕ್ಕೊದಗಿಸಬೇಕೆಂದು ಹೇಳಿ ನಾನಾ ರೀತಿಯಲ್ಲಿ ಹೇಳುತ್ತಿರುತ್ತೇವೆ. ಆದರೆ ನಮ್ಮ ಗ್ರಾಮಾಂತರಗಳಲ್ಲೇ ಪ್ರತಿಯೊಂದು ದಿವಸವೂ ಅನೇಕ ಕಡೆಗಳಿಂದ ರಿಪೋರ್ಟುಗಳು ಬರುತ್ತಲೇ ಇರುತ್ತವೆ. ಅನೇಕ ಹಳ್ಳಿಗಳಲ್ಲಿ ಮನೆಮಠಗಳೆಲ್ಲಾ ಸುಟ್ಟುಹೋಗಿ ನೂರಾರು ಜನರು ಆಸ್ತಿಪಾಸ್ತಿಗಳಿಲ್ಲದೆ ಹೋಗಿದ್ದಾರೆಂದು ಕೇಳಿ ಬರುತ್ತಿರುತ್ತವೆ. ಇಷ್ಟಾದರೂ ಇಂಥಾದ್ದಕ್ಕಾಗಿ ಹೆಚ್ಚಿಗೆ ಹಣ ಕೊಡದಿರುವುದು ವಿಷಾದಕರ. 5 ಲಕ್ಷ ರೂಪಾಯಿಗಳನ್ನಾದರೂ ಕೊಟ್ಟು ಸಹಾಯಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯವೇನೆಂದರೆ, ಆದಿಕರ್ಣಾಟಕರ ಮತ್ತು ಹಿಂದುಳಿದ ಪಂಗಡಗಳ ವಿದ್ಯಾಭ್ಯಾಸದ ವಿಚಾರದಲ್ಲಿ ಪ್ರಗತಿದಾಯಕವಾದ ನೀತಿಯನ್ನಿಟ್ಟುಕೊಳ್ಳಬೇಕು. ಈ ಬಾಬಿಗೆ ಎಂದರೆ, ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ವಿದ್ಯಾರ್ಥಿವೇತನಕ್ಕೆ ಕಳೆದ ಸಾಲಿನಲ್ಲಿ ಸಾಕಾದಷ್ಟು ಹಣವನ್ನೊದಗಿಸಿದ್ದರು. ಅದನ್ನು ಈ ಸಾರಿ ಮುಂದುವರಿಸಲಿಲ್ಲ. ಏನೋ ಕೈತಪ್ಪಿ ಬಿಟ್ಟಿರಬಹುದೆಂದು ಭಾವಿಸುತ್ತೇನೆ. ಮುಂದಿನ ಸಾಲಿನಲ್ಲಿಯೂ ಅದನ್ನು ಸೇರಿಸಬೇಕೆಂದು ಸೂಚಿಸುತ್ತೇನೆ.

ನಿಮ್ನ ವರ್ಗದವರಿಗೆ ಗೃಹವಸತಿ ಸೌಕರ್ಯವನ್ನೊದಗಿಸುವ ವಿಚಾರದಲ್ಲಿ ಕೆಲವು ರಚನಾತ್ಮಕವಾದ ಸಲಹೆಗಳನ್ನು ಕೊಡಬೇಕೆಂದಿಚ್ಛಿಸುತ್ತೇನೆ. ಈ ವಿಷಯವನ್ನು ನಾನು ಮೂರುನಾಲ್ಕು ವರ್ಷಗಳಿಂದ ಪ್ರಸ್ತಾಪವಮಾಡಲಿಲ್ಲ. ಇತ್ತೀಚೆಗೆ ದೇಶದಲ್ಲಿ ಕೇಳಿಬರುತ್ತಿರುವ ಕೂಗುಗಳನ್ನು ಕೇಳಿದರೆ ಇದನ್ನು ಪ್ರಸ್ತಾಪಿಸುವುದು ಅತ್ಯಾವಶ್ಯಕವಾದ ವಿಚಾರವೆಂದು ನನಗನ್ನಿಸುತ್ತದೆ.

ನಿಮ್ಮ ವರ್ಗದವರ ಅಭಿವೃದ್ಧಿ ಯೋಜನೆಗೆ ಸರ್ಕಾರದವರು ಹಣವನ್ನೊದಗಿಸುತ್ತಿದ್ದಾರೆ. ಆದರೆ ಆದರ ಹಂಚಿಕೆ ಸಮರ್ಪಕವಾಗಿಲ್ಲವೆಂದು ಹೇಳಬೇಕಾಗಿದೆ. ಇದಕ್ಕೆ ಸರ್ಕಾರದವರು ಕೆಲವು ನಿಯಮಗಳನ್ನು ಮಾಡಿದ್ದಾರೆ. ಆ ನಿಯಮಗಳಪ್ರಕಾರ ಈ ವಿಚಾರದಲ್ಲಿ ನಿರ್ದಿಷ್ಟವಾದ ಕೆಲವು ರೀತಿ ನೀತಿಗಳನ್ನನುಸರಿಸಬೇಕೆಂದು ವಿಧಾಯಕವಾಗಿದೆ. ಅವುಗಳನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಿಲ್ಲವೆಂದು ಹೇಳುತ್ತೇನೆ. ಕಳೆದ ಸಾಲಿನಲ್ಲಿ 19 ಲಕ್ಷ ರೂಪಾಯಿ ಒದಗಿಸಿದ್ದರು; ಈ ಸಲವೂ ಇಟ್ಟಿದ್ದಾರೆ. ಇದರಲ್ಲಿ ಯಾವ ಒಂದು ಪ್ರಗತಿದಾಯಕ ನೀತಿ ಇಲ್ಲ. ದೇಶಾಭ್ಯುದಯ ಕಾರ್ಯಗಳಿಗೆ ಇದೂ ಒಂದು ಅಂಗವಾಗಿರುವುದರಿಂದ ಮುಂದಿನ ಸಾಲಿನಲ್ಲಾದರೂ ಈ ಹಣವನ್ನು ಹಂಚಿಕೆ ಮಾಡುವ ಕಾರ್ಯವನ್ನು ಸಮರ್ಪಕವಾಗಿ ಮಾಡಬೇಕೆಂದು ಸೂಚಿಸುತ್ತೇನೆ. ಮಂತ್ರಿಮಂಡಲಕ್ಕೆ ಜಂಟಿ ಜವಾಬ್ದಾರಿಯಿರುವುದರಿಂದ ಈ ಹಣದ ಹಂಚಿಕೆಯ ವಿಚಾರದಲ್ಲಿ ಒಂದು ಕಟ್ಟುಪಾಡಿಗೆ ಅಂದರೆ, ಎಲ್ಲರ ಅಭಿಪ್ರಾಯಕ್ಕೆ ಒಳಪಟ್ಟಿರಬೇಕೆಂದು ಸೂಚಿಸುತ್ತೇನೆ. ಆಯಾ ಜಿಲ್ಲೆಗಳ ಆವಶ್ಯಕತೆಗಳನ್ನು ನೋಡಿಕೊಂಡು ಅದನ್ನು ಆಧಾರವಾಗಿಟ್ಟುಕೊಂಡು ಆದರ ಮೇಲೆ ಕೆಲವು ತತ್ವಗಳನ್ನಿಟ್ಟುಕೊಂಡು ಹಂಚಿಕೆ ಮಾಡಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು.—ಯಾವ ತತ್ವಗಳು ?

ಶ್ರೀ ಎಂ. ಮಾದಯ್ಯನವರು.—ಯಾವ ರೀತಿ ಹಂಚಿಕೆ ಮಾಡಬೇಕೆಂಬುದು ನಿಬಂಧನೆಗಳಲ್ಲಿ ನಮೂದಾಗಿದೆ. ಪ್ರತಿಯೊಂದು ಜಿಲ್ಲೆಯ ಅವಶ್ಯಕತೆಗಳನ್ನು ಆಯಾ ಡೆಪ್ಯುಟೀ ಕಮಿಷನರುಗಳಿಂದ ತರಿಸಿಕೊಂಡು ಹಂಚಿಕೆ ಮಾಡುವಾಗ ಒಂದು ನೀತಿಯನ್ನಿಟ್ಟುಕೊಂಡು ಇಂತಿಂಥಾ ಜಿಲ್ಲೆಯಲ್ಲಿ ಇಷ್ಟಿಷ್ಟು ಪ್ರಜಾಸಂಖ್ಯೆ ಇದೆ, ಇದಕ್ಕೆ ಇಷ್ಟು ಬೇಕಾಗುತ್ತವೆಂದು ನಿರ್ಧಾರ ಮಾಡಿ ಹಂಚಬೇಕು. ಈ ನಿಯಮವನ್ನು ಈಗ ಸರಿಯಾಗಿ ಅನುಸರಿಸುತ್ತಿಲ್ಲ. 1950ನೆಯ ಇಸವಿ ಜನವರಿ 4ನೆಯ ತಾರೀಖು ಒಂದು ಸರ್ಕಾರಿ ಆಜ್ಞೆಯಾಗಿದೆ. ಅದರಲ್ಲಿ ಒಂದು ಭಾಗ ಈ ರೀತಿ ಇದೆ.

III. Conditions of grant.

(b) "In cases where large colonies are proposed to be built, the entire lay out should be approved by the District Health Officer. Where the cost of the colony does not exceed Rs. 10,000 final approval may be accorded by the Deputy Commissioner. For colonies costing more than this amount the approval of the Commissioner for Depressed Classes will be necessary. However schemes involving an expenditure of more than Rs. 50,000 should be submitted to Government for approval."

ನನಗೆ ತಿಳಿದಮಟ್ಟಿಗೆ ಇದನ್ನು ಅನುಸರಿಸುತ್ತಿಲ್ಲ, subject to correction ಇದು ತಪ್ಪಾಗಿದ್ದರೆ ನನ್ನ ಅಭಿಪ್ರಾಯವನ್ನು ಬದಲಾವಣೆ ಮಾಡಿಕೊಳ್ಳುವುದಕ್ಕೆ ಹಿಂತೆಗೆಯುವುದಿಲ್ಲ. ಹರಿಜನರ ಪ್ರಜಾಸಂಖ್ಯೆ 1941ನೆಯ ಇಸವಿಯ ಜನಗಣತಿಯ ಪ್ರಕಾರ 14 ಲಕ್ಷ ಈಗಿನ ಜನಗಣತಿಯಲ್ಲಿ ನನ್ನ ಲೆಕ್ಕದ ಪ್ರಕಾರ 16 ಲಕ್ಷ, 78 ಸಾವಿರ ಆಗುತ್ತದೆ. ಕೇವಲ ಕೆಲವರು ವಿನಾ ಉಳಿದವರೆಲ್ಲರೂ ಈ ಸಹಾಯ ಪಡೆಯಲು ಅರ್ಹತೆಯುಳ್ಳವರಾಗಿದ್ದಾರೆ. ಒಂದೊಂದು ಜಿಲ್ಲೆಯನ್ನೂ ಆಧಾರವಾಗಿಟ್ಟುಕೊಂಡು, ಹರಿಜನರ ಜನಸಂಖ್ಯೆಯನ್ನು ತೆಗೆದುಕೊಂಡರೆ ಪ್ರತಿ ಜಿಲ್ಲೆಯಲ್ಲಿಯೂ ಹರಿಜನರಿದ್ದಾರೆ. 1941ನೆಯ ಇಸವಿ ಜನಗಣತಿ ಪ್ರಕಾರ ಬೆಂಗಳೂರು ಜಿಲ್ಲೆಯಲ್ಲಿ 2 ಲಕ್ಷದ 29 ಸಾವಿರ, ಕೋಲಾರ ಜಿಲ್ಲೆಯಲ್ಲಿ 1,96,000, ತುಮಕೂರು ಜಿಲ್ಲೆಯಲ್ಲಿ 1,62,000, ಮೈಸೂರು ಜಿಲ್ಲೆಯಲ್ಲಿ 1,77,000, ಮಂಡ್ಯ ಜಿಲ್ಲೆಯಲ್ಲಿ 86,000, ಚಿತ್ರದುರ್ಗ ಜಿಲ್ಲೆಯಲ್ಲಿ 1,42,000, ಹಾಸನ ಜಿಲ್ಲೆಯಲ್ಲಿ 1,11,000, ಚಿಕ್ಕಮಗಳೂರು ಜಿಲ್ಲೆಯಲ್ಲಿ 78,000, ಶಿವಮೊಗ್ಗ ಜಿಲ್ಲೆಯಲ್ಲಿ 94,000, ಬೆಂಗಳೂರು ಕಾರ್ಪೊರೇಷನ್ನಲ್ಲಿ 54,000, ಕೋಲಾರ ಚಿನ್ನದಗಣಿ ಪ್ರದೇಶದಲ್ಲಿ 57,000, ಮೈಸೂರು ಸಿಟಿಯಲ್ಲಿ 14,000 ಹರಿಜನರಿದ್ದಾರೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಸಹಾಯಕ್ಕೆ ಅರ್ಹತೆಯುಳ್ಳವರಿರುತ್ತಾರೆ. ಆದುದರಿಂದ ಈ ಹಣವನ್ನು ಜನಸಂಖ್ಯೆಯ ಮೇಲೆ ಹಂಚಬೇಕು. ಆಯಾ ಜಿಲ್ಲೆಯ ಹರಿಜನರ ಸಂಖ್ಯೆಯ ಮೇಲೆ ಹಂಚಿಕೆ ಮಾಡಿ ಆಯಾ ಜಿಲ್ಲಾ ಡೆವಲಪ್‌ಮೆಂಟ್ ಸಮಿತಿಗಳು ತಾಲ್ಲೂಕು ಡೆವಲಪ್‌ಮೆಂಟ್ ಸಮಿತಿಗಳೂ ಹಂಚಬೇಕೆಂದು ನಿಬಂಧನೆಗಳಲ್ಲಿದೆ, ಅಲ್ಲದೆ ಅಮಲ್ದಾರರುಗಳ ಅಭಿಪ್ರಾಯ ಕೇಳಿ ಹಂಚಬೇಕೆಂದಿದೆ. ಈ ರೀತಿ ಮಾಡಬಹುದು ಆದರೆ ಈಗ ಬಡ್ಜೆಟ್ಟಿನಲ್ಲಿ ಒದಗಿಸಿರುವ ಹಣವನ್ನು ನೋಡಿದರೆ ಇಷ್ಟು ಸಾಕಾಗುವುದಿಲ್ಲವೆಂದು ಹೇಳುತ್ತೇನೆ. 1951-52ನೇ ಸಾಲಿಗೆ ಸುಮಾರು 25 ಲಕ್ಷ ರೂಪಾಯಿಗಳನ್ನಾದರೂ ಇಡಬೇಕಾಗಿತ್ತು.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಜನ ಸಂಖ್ಯೆಯ ಮೇಲೆ ಹಂಚಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಈಗ ಆಯಾ ಜಿಲ್ಲೆಯ ಅವಶ್ಯಕತೆಗಳನ್ನು ಡೆಪ್ಯುಟಿ ಕಮಿಷನರು ಮತ್ತು ಡಿಪ್ರೆಸ್ಡ್ ಕ್ಲಾಸ್ ಕಮಿಷನರನ್ನು ಕೇಳಿ ಅದರ ಆಧಾರದ ಮೇಲೆ ಕೊಡುತ್ತೇವೆ. ಹಾಗಿಲ್ಲದೆ ಅವರು ಹೇಳಿದಂತೆ ಜನ ಸಂಖ್ಯೆಯ ಮೇಲೆ ಕೊಟ್ಟರೆ ಹೇಗೆ? ಒಂದು ಜಿಲ್ಲೆಯಲ್ಲಿ ಜನಸಂಖ್ಯೆ ಹೆಚ್ಚಾಗಿರಬಹುದು, ಅವಶ್ಯಕತೆ ಇರಬಹುದು, ಇನ್ನೊಂದು ಜಿಲ್ಲೆಯಲ್ಲಿ ಜನಸಂಖ್ಯೆ ಕಡಿಮೆಯಿದ್ದರೂ ಅವಶ್ಯಕತೆ ಹೆಚ್ಚಿರಬಹುದು. ಉದಾಹರಣೆಗೆ ಒಂದು ಜಿಲ್ಲೆಯಲ್ಲಿ ಜನ ಸಂಖ್ಯೆ ಹೆಚ್ಚಾಗಿರಬಹುದು. ಮನೆಗಳಿಲ್ಲದವರ ಸಂಖ್ಯೆ ಕಡಿಮೆಯಿರಬಹುದು, ಇನ್ನೊಂದರಲ್ಲಿ ಕಡಿಮೆ ಜನವಿದ್ದರೆ ಮನೆಗಳಿಲ್ಲದವರ ಸಂಖ್ಯೆ ಜಾಸ್ತಿ ಇರಬಹುದು. ಆದಕಾರಣ ಬರೀ ಜನಸಂಖ್ಯೆ ಮೇಲೆ ಕೊಟ್ಟರೆ ಸರಿಯಾಗುತ್ತದೆಯೆ !

ಶ್ರೀ ಎಂ. ಮಾದಯ್ಯನವರು.—ಅವಶ್ಯಕತೆಗಳನ್ನು ಗಣನೆಗೆ ತೆಗೆದುಕೊಳ್ಳುವುದು ಬೇಡವೆಂದು ನಾನು ಹೇಳುವುದಿಲ್ಲ. ಎಲ್ಲ ಜಿಲ್ಲೆಗಳಲ್ಲಿಯೂ ಹೇರಳವಾಗಿ ಅವಶ್ಯಕತೆ ಇರುವುದರಿಂದ, ಅವಶ್ಯಕತೆ ನೋಡಿಕೊಡಬೇಕೆಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಸಾಮಾನ್ಯವಾಗಿ ಮಲೆನಾಡಿಗೆ ಸ್ವಲ್ಪ ಹೆಚ್ಚು ಕೊಡಬಹುದು. ಬಾಕಿ ಜಿಲ್ಲೆಗಳಿಗೆ ಹಂಚುವುದರಲ್ಲಿ ಒಂದೇ ವಿಧವಾದ ನೀತಿಯನ್ನನುಸರಿಸಬೇಕೆಂದು ನನ್ನ ಸೂಚನೆ.

ಇನ್ನು ಸಹಾಯ ಕೋರಿ ಹಾಕಿಕೊಳ್ಳುವ ಅರ್ಜಿ ಫಾರಂ ಯಾವ ರೀತಿ ಇರಬೇಕೆಂದು ವಿಧಾಯಕವಾಗಿದೆ. ಅದರಲ್ಲಿ ನಿಮ್ಮ ತರಗತಿಯಲ್ಲಿ ಯಾವ ಪಂಗಡಕ್ಕೆ ಸೇರಿದವರೆಂಬುದನ್ನು ನಮೂದಿಸಬೇಕೆಂದಿದೆ. ಹೀಗೆ ಮಾಡಿರುವುದರಲ್ಲಿ ನಿಮ್ಮ ಪಂಗಡಕ್ಕೆ ಸೇರಿದ ಎಲ್ಲರಿಗೂ ಸಮನಾಗಿ ಹಂಚಬೇಕೆಂಬ ಉದ್ದೇಶವಿರುವಂತೆ ಕಾಣುತ್ತದೆ. ಆದರೆ ಇದನ್ನು ಸರಿಯಾಗಿ ಅನುಸರಿಸುತ್ತಿಲ್ಲ. ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ನಿಮ್ಮ ಪಂಗಡದವರಿಗೆ ವಿದ್ಯಾರ್ಥಿ ವೇತನಗಳಿಗಾಗಿ ಹಣವನ್ನೊದಗಿಸಿದ ಮೇಲೆ ಅವುಗಳ ಹಂಚಿಕೆಗಾಗಿ ನಿಮ್ಮ ಪಂಗಡದಲ್ಲಿ ಕೆಲವು ಗ್ರೂಪ್‌ಗಳನ್ನು ಮಾಡಿದ್ದಾರೆ,

(ಶ್ರೀ ಎಂ. ಮಾದಯ್ಯನವರು).

(a) ಆದಿಕರ್ಣಾಟಕರು (b) ಲಂಬಾಣಿಗಳು ಮತ್ತು (c) ಬೋಯಿಗಳು ಹೀಗೆಲ್ಲಾ ಇವೆ. ಹೀಗೆ ಮಾಡಿರುವ ಉದ್ದೇಶ ಎಲ್ಲಾ ಒಳಪಂಗಡಗಳಿಗೂ ಸಮನಾಗಿ ಹಂಚಿಕೆಯಾಗಲೆಂದು. ಹಾಗೆಯೇ ನಿಮ್ನ ಪಂಗಡದವರಲ್ಲಿ ಮನೆಗಳಿಲ್ಲದಿರುವವರು ಲಕ್ಷಾಂತರ ಜನರಿದ್ದಾರೆ. ಅವರು ಬಹುಮಟ್ಟಿಗೆ ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ. ಅವರಿಗೆ ಮನೆಗಳನ್ನೊದಗಿಸಲು ನಿಮ್ನ ಪಂಗಡದವರ ಪೈಕಿ ಒಳಪಂಗಡಗಳ ಪೈಕಿ ಪ್ರಜಾಸಂಖ್ಯೆಗನುಗುಣವಾಗಿ ಸರಿಯಾಗಿ ಹಣ ಹಂಚಿಕೆಯಾಗಬೇಕು. ಹಾಗೆಯೇ ಎಲ್ಲೆಲ್ಲಿ ಬಾಕಿಯವರಿದ್ದಾರೆಯೋ ಅವರಿಗೆಲ್ಲ ತೃಪ್ತಿಕರವಾಗಿ ಹಂಚಿಕೆಯಾಗಲು ಸರಿಯಾದ ಏರ್ಪಾಡು ಮಾಡಬೇಕೆಂದು ಹೇಳಲು ಬಯಸುತ್ತೇನೆ.

ಹೀಗೆ ಪ್ರತಿಯೊಂದು ಜಿಲ್ಲೆಯ ವಿವರಗಳನ್ನು ತೆಗೆದುಕೊಂಡು ನೋಡಿದರೆ ಹರಿಜನರಾದ ನಾವು 11,19,402 ಜನರಿದ್ದೇವೆ. ಆದರೆ ನಾನೀಗ ಅಷ್ಟು ಹೆಚ್ಚಿನ ವಿವರಗಳಿಗೆ ಹೋಗಲು ಕಾಲಾವಕಾಶವಿಲ್ಲ.

ನಾನೀಗ ನಿಮ್ನ ಪಂಗಡದವರ ಅಭಿವೃದ್ಧಿಗಾಗಿ ಒದಗಿಸಿರತಕ್ಕ ಗ್ರಾಂಟಿನ ಬಗ್ಗೆ ಕೆಲವು ಮಾತುಗಳನ್ನಾಡಬೇಕೆಂದಿದ್ದೇನೆ. ಈ ಮೊಬಲಗನ್ನು ಒಳ ಜಿಲ್ಲಾವಾರು ಹಂಚತಕ್ಕ ವ್ಯವಸ್ಥೆಯನ್ನು ಆಯಾಯ ಜಿಲ್ಲೆಯ ಡೆಪ್ಯುಟಿ ಕಮಿಷನರ್ ಮತ್ತೂ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕಮಿಟಿಗಳವರಿಗೆ ಬಿಟ್ಟುಕೊಡತಕ್ಕದ್ದು ಸೂಕ್ತವಾಗಿದೆಯೆಂದು ಸೂಚಿಸಬಿಚ್ಛಿಸುತ್ತೇನೆ. ಆದರೆ ಈಗ ಆ ರೀತಿ ಮಾಡದೆ ಸರ್ಕಾರದವರೇ ನೇರವಾಗಿ ಈ ಹಂಚಿಕೆಯನ್ನು ಮಾಡುತ್ತಿರುವುದರಿಂದ ಹೆಚ್ಚಿನ ಅನುಕೂಲತೆಗಳೆಲ್ಲಾ ಕೇವಲ ಕೆಲವು ಗ್ರಾಮಗಳವರಿಗೆ ಅದರಲ್ಲೂ ಒಂದೇ ಕೋಮಿನವರಿಗೆ ದೊರೆತು, ಅನೇಕ ಗ್ರಾಮಗಳಿಗೆ ಅನ್ಯಾಯವಾಗುತ್ತಿದೆ. ಮತ್ತೂ ಈ ಹಂಚಿಕೆಯಾಗುತ್ತಿರುವ ರೀತಿ ನೀತಿಗಳು ನ್ಯಾಯಕ್ಕೆ ಬಹಳ ದೂರವಾಗಿವೆ. ಆದುದರಿಂದ ಈ ರೀತಿ ಹಂಚುವುದನ್ನು ದಯವಿಟ್ಟು ಮನ್ನಾ ಮಾಡಬೇಕೆಂದು ಸೂಚಿಸುತ್ತೇನೆ. ಈಗ ತಾವು ಹಂಚಿಕೆ ಮಾಡಿರುವುದು ಮೈಸೂರು ಜಿಲ್ಲೆಯಲ್ಲಿ—ನಂಜನಗೂಡಿಗೆ 15,000 ರೂ. ಸಂತೇಮರಹಳ್ಳಿಗೆ 4,500 ರೂ. ಸಿದ್ದನಹುಂಡಿಗೆ 6,000 ರೂ. ಜೀಯಾರಕ್ಕೆ 15,000 ರೂ. ಹಾಸನ ಜಿಲ್ಲೆಯಲ್ಲಿ—ಕೆರೋಡಿಗೆ 7,500 ರೂ ಮಾಗೂರು ಗ್ರಾಮಕ್ಕೆ 9,000 ರೂ. ಶಿವಮೊಗ್ಗ ಜಿಲ್ಲೆಯಲ್ಲಿ—ಒಡ್ಡಗೆರೆಗೆ 5,000 ರೂ. ಚನ್ನಗಿರಿ ತಾಲ್ಲೂಕಿನಲ್ಲಿರುವ ಚಿಕ್ಕಬಾಸೂರಿಗೆ 12,000 ರೂ. ತುಮಕೂರು ಜಿಲ್ಲೆಯಲ್ಲಿ—ಗುಬ್ಬಿ ಟೌನ್ ಒಂದಕ್ಕೆ 15,000 ರೂ. ಶಿರಾ ಟೌನಿಗೆ 9,000 ರೂ. ಕೊರಟಗೆರೆಗೆ 6,000 ರೂ. ಕ್ಯಾತಸಂದ್ರಕ್ಕೆ 7,500 ರೂ. ಬೆಳ್ಳಾವಿಗೆ 3,000 ರೂ. ಕೋಲಾರ ಜಿಲ್ಲೆಯಲ್ಲಿ—ನಾಯಿಂದನಹಳ್ಳಿಗೆ 6,000 ರೂ. ಅಲ್ಲಾನಹಳ್ಳಿಗೆ 7,500 ರೂ, ಕಲ್ಲಹಳ್ಳಿಗೆ 3,000 ರೂ. ದೊಡ್ಡಗಂಜೂರು ಗ್ರಾಮಕ್ಕೆ 3,000 ರೂ. ಗೋರಿಬಿದನೂರು ಟೌನಿಗೆ 7,080 ರೂ. ಹೀಗೆ ಕೊಡಲಾಗಿದೆ. ಇದರಲ್ಲಿ ಯಾವ ತತ್ವವೂ ಅಡಕವಾಗಿಲ್ಲ. ಈ ವಿಧವಾದ ಹಂಚಿಕೆಯಿಂದ ಜನರೆಲ್ಲರೂ ಬೇಸತ್ತು ನಿರುತ್ಸಾಹಿಗಳಾಗಿದ್ದಾರೆ. ಆಯಾಯ ಪ್ರದೇಶದಲ್ಲಿ ಜನರು ಹೆಚ್ಚಾಗಿರಲೀ ಅಥವಾ ಕಮ್ಮಿಯಾಗೇ ಇರಲಿ, ಅದನ್ನು ಪರಿಶೀಲಿಸದೆ ಮತ್ತು ಆವಶ್ಯಕತೆ ಎಲ್ಲಿ ಹೆಚ್ಚಾಗಿದೆಯೋ ಅಲ್ಲಿಗೆ ಹೆಚ್ಚು ಹಣ ಒದಗಿಸದೆ ಹೀಗೆ ಒಂದು ಯಾವುದೋ ರೀತಿ ನೀತಿ ಅನುಸರಿಸುವುದು ಸೂಕ್ತವಲ್ಲ. ಇದನ್ನು ಆಯಾಯ ಜಿಲ್ಲೆಯ ಜಿಲ್ಲಾಧಿಕಾರಿಗಳ ಮತ್ತು ಜಿಲ್ಲಾಭಿವೃದ್ಧಿ ಸಮಿತಿಯ ಅಭಿಪ್ರಾಯಕ್ಕೆ ಬಿಟ್ಟುಕೊಟ್ಟರೆ ಅನುಕೂಲವಾಗಿರುತ್ತದೆಂದು ತಿಳಿಸುತ್ತೇನೆ. ಈಗ ನಡೆಯುತ್ತಿರುವ ಕ್ರಮದಲ್ಲಿ ಯಾವುದೋ ಒಂದು ಗ್ರಾಮದಲ್ಲಿ ಈ ನಿಮ್ನ ತರಗತಿಗಳ ಪಂಗಡಗಳು 3-4 ಇದ್ದಾಗ ಆ ಪೈಕಿ ಯಾವುದೋ ಒಂದು ಪಂಗಡದವರಿಗೆ ಮಾತ್ರ ಈ ಅನುಕೂಲ ದೊರೆತು ಇತರೇ ಪಂಗಡಗಳವರಿಗೆ ಏನೂ ಸಹಾಯ ದೊರೆಯದೆ ನಿರಾಶೆಹೊಂದಿರುವಂಥ ನಿದರ್ಶನಗಳು ಬಹಳವಾಗಿವೆ. ಆದ್ದರಿಂದ ಹೀಗೆ ಮಾಡತಕ್ಕದ್ದು. Fair distribution ಆಗದೆ ಪಕ್ಷಪಾತವಾದ ಹಂಚಿಕೆಯಾಗುತ್ತದೆ. ಈ ಎಲ್ಲಾ ಕಾರಣಗಳಿಂದಲೂ ಸರ್ಕಾರದವರು ಈ ಅಂಶವನ್ನು ತಮ್ಮ ಗಮನದಲ್ಲಿಟ್ಟುಕೊಂಡಿದ್ದು ಮುಂದಿನ ಸಾಲಿನ ಅಂದರೆ 1951-52ನೇ ಸಾಲಿನ ಹಣವನ್ನು ಹಂಚುವಾಗ ಆಯಾ ಡಿಸ್ಟ್ರಿಕ್ಟಿನ ಪ್ರಜಾಸಂಖ್ಯೆಗನುಗುಣವಾಗಿ ಹಂಚಿ ಆಯಾ ಜಿಲ್ಲೆಯಲ್ಲಿರುವ ನಿಮ್ನ ತರಗತಿಗೆ ಸೇರಿದ ಕೋಮುಗಳ ಪ್ರಜಾಸಂಖ್ಯೆ ಪ್ರಕಾರ ಹಂಚಬೇಕೆಂದು ಸೂಚಿಸುತ್ತೇನೆ.

ಇನ್ನು ಜಮೀನು ಕೊಡತಕ್ಕ ರೀತಿ ನೀತಿಯ ವಿಚಾರ ಈಗಾಗಲೇ ಮಾತನಾಡಿದ ಕೆಲವು ಮಾನ್ಯ ಸದಸ್ಯರು ಹೇಳಿದ ಹಾಗೆ ಭೂಮಿಯನ್ನು Tillers of the soil ಗೇ ಹೆಚ್ಚಾಗಿ ಕೊಡಬೇಕೆಂದು ನಾನು ಒತ್ತಿ ಒತ್ತಿ ಹೇಳುತ್ತೇನೆ ಬೇಸಾಯವನ್ನು ಬಲ್ಲ ಜನಸಾಮಾನ್ಯರಲ್ಲಿ ಈ ದಿವಸ ಯಾರಿಗೆ ಯಾವ ಕೋಮಿಗೆ ಸೇರಿದವರೇ ಆಗಿರಲಿ, ಭೂಮಿಯನ್ನುಳುವುದಕ್ಕೆ ಹೆಚ್ಚಿನ ಆಸಕ್ತಿಯಿರುತ್ತದೆಯೋ ಅಂಥವರಿಗೆ ಈ ದಿವಸ ಉಳಲಿಕ್ಕೆ ಭೂಮಿ ಸಿಕ್ಕುತ್ತಿಲ್ಲ. ಮಾನ್ಯ ಸದಸ್ಯರಾದ ಶ್ರೀಮಾನ್ ಕಡಿದಾಳ್ ಮಂಜಪ್ಪನವರೂ ಮತ್ತು ಶ್ರೀಮಾನ್ ಎಚ್. ಎಂ. ಚನ್ನಬಸಪ್ಪನವರೂ ತಿಳಿಸಿರುವ ಹಾಗೆ ಈಗ ಭೂಮಿಯೇನಿದ್ದರೂ ಆಬ್ಸೆಂಟಿ ಲ್ಯಾಂಡ್ ಲಾರ್ಡ್ ಆಗಿರತಕ್ಕವರಿಗೆ ಸಿಕ್ಕುತ್ತಿದೆಯೇ ವಿನಾ Tillers of the soil ಯಾರು ಇದ್ದಾರೋ ಅವರಿಗೆ ಹೆಚ್ಚಾಗಿ ಸಿಕ್ಕುತ್ತಿಲ್ಲ. ಆದುದರಿಂದ ಈ ಪದ್ಧತಿಯನ್ನು ಕೂಡಲೇ ಬದಲಾಯಿಸಿ ಯಾರಿಗೆ ವ್ಯವಸಾಯದಲ್ಲಿ ವಿಶೇಷ ಅಭಿರುಚಿಯಿದೆಯೋ ಮತ್ತು ಹೆಚ್ಚಿನ ಉತ್ಸಾಹವಿದೆಯೋ ಅಂಥವರಿಗೆ ಅವರು ಯಾವ ಕೋಮಿನವರೇ ಆಗಲಿ, ಯಾವ ಪಕ್ಷಪಾತವೂ ಇಲ್ಲದಂತೆ ಹಂಚಿದರೆ ಇದರಿಂದ ಬಹಳ ಅನುಕೂಲವಾಗಿ ಕೆಲಸ ಕಾರ್ಯಗಳು ಚೆನ್ನಾಗಿ ನಡೆಯುತ್ತವೆ. ನನ್ನ ಅಭಿಪ್ರಾಯದ ಪ್ರಕಾರ ಒಂದೊಂದು ಸಂಸಾರಕ್ಕೂ 5 ರಿಂದ 10 ಎಕರೆಗಳವರಿಗೆ ಜಮೀನಿರುವಂತೆ ಮಾಡಿದರೆ ನಮ್ಮ ಆಹಾರ ಕೊರತೆಯನ್ನು ತಪ್ಪಿಸಲು ಸಾಧ್ಯವಾಗುತ್ತದೆ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎಲ್ಲಿ ಜಮೀನಿದ್ದವರಿಗೆ ಪುನಃ ಜಮೀನು ಮಾಡಲಾಗಿದೆ ಎಂಬುದರ ಬಗ್ಗೆ ತಾವು ಒಂದೆರಡು ನಿದರ್ಶನಗಳನ್ನಾದರೂ ಕೊಡಬಲ್ಲಿರಾ ? I will be very thankful to you.

ಎಂ. ಮಾದಯ್ಯನವರು.—ಅನೇಕ ನಿದರ್ಶನಗಳಿವೆ. ಆದರೆ ಹಾಗೆ ಜಮೀನನ್ನು ಸರ್ಕಾರದವರು ಕೊಡತಕ್ಕ ಉದ್ದೇಶವಾದರೋ ಬಹಳ ಘನವಾದದ್ದೆ. ಸರ್ಕಾರದವರ ದೃಷ್ಟಿಯಲ್ಲೇನೋ ಒಂದು ನೀತಿ ನ್ಯಾಯದ ಪ್ರಕಾರ ಕೆಲಸಕಾರ್ಯಗಳು ನಡೆಯುವಂತೆ ಏರ್ಪಾಡು ಮಾಡಿದ್ದರೂ ಕಾರ್ಯತಃ ನಡೆಯುವುದರಲ್ಲಿ ಅನೇಕ ಲೋಪ ದೋಷಗಳೂ, ತೊಂದರೆಗಳೂ ಉಂಟಾಗುತ್ತಿವೆ. ನಿಮ್ನ ತರಗತಿಯವರಿಗೆ ಎಕರೆಯೊಂದಕ್ಕೆ 150 ರೂಪಾಯಿಗಳ ಬೆಲೆಗಿಂತಲೂ ಹೆಚ್ಚಿನ ಜಮೀನನ್ನು ಮುಫತ್ತಾಗಿ ಕೊಡಕೂಡ

ವೆಂದು ಸರ್ಕಾರಿ ಆಜ್ಞೆ ಇದೆ. ಆದರೆ ಇಂಥಾ ಪಕ್ಷಪಾತವಿರಬಾರದು.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೇಗೆ ?

ಶ್ರೀ ಎಂ. ಮಾದಯ್ಯನವರು.—ಕಷ್ಟಪಟ್ಟು ಕೆಲಸ ಮಾಡಿ, ಚೆನ್ನಾಗಿ ಬೆಳೆದು ತಾನೂ ಜೀವನಮಾಡಿಕೊಂಡು ತನಗೆ ಹೆಚ್ಚಾದ್ದನ್ನು ದೇಶದಲ್ಲಿರತಕ್ಕ ಜನರಿಗೆ ಕೊಡತಕ್ಕಂಥವರಿಗೆ ಸಹಾಯ ಮಾಡದೆ ಸ್ವತಃ ವ್ಯವಸಾಯ ಮಾಡುವುದಕ್ಕೆ ಕೈಲಾಗದ ಮತ್ತು ಜಮೀನು ಹೆಚ್ಚಾಗಿರುವವರಿಗೇ ಹೆಚ್ಚಾಗಿ ಜಮೀನು ಸಿಕ್ಕುತ್ತದೆ. ಇದರಿಂದ ಹೊಟ್ಟೆ ತುಂಬಿದವರಿಗೆ ಅನ್ನ ಕೊಟ್ಟಂತಾಗುತ್ತದೆ. ಹಸಿದವರಿಗೆ ಅನ್ನ ಕೊಟ್ಟಂತಾಗಬೇಕು; ದೇಶದಲ್ಲಿರತಕ್ಕ ಪ್ರಜೆಗಳಿಗೆಲ್ಲಾ ಒಂದೇ ಸಮನಾದ ಅವಕಾಶಗಳಿರಬೇಕೆಂದು ಹೇಳುತ್ತಿರುವಾಗ ತಾವು ಈ ಎಲ್ಲಾ ನಿರ್ಬಂಧಗಳನ್ನೂ ಅಂದರೆ irrespective of the value of the land ತೆಗೆದುಬಿಡಬೇಕು. There is some restriction in the way of granting lands to the Candidates of the scheduled castes. The restriction is that lands whose value is above Rs. 100 or 150 should not be given. Please remove that restriction. ಮೊದಲು ಇದ್ದ ವಿಧಿ ಪ್ರಕಾರ ನೂರು ರೂಪಾಯಿಗಳ ಬೆಲೆ ಬಾಳುವ ಜಮೀನುಗಳನ್ನು ಮಾತ್ರ ಎಂದಿತ್ತು. ಆದರೆ ಈಚೆಗೆ ಅದನ್ನು 150 ರೂಪಾಯಿಗಳಿಗೆ ಹೆಚ್ಚು ಮಾಡಿದ್ದಾರೆ. With great difficulty the rule was amended. ಹಾಗೊಂದು ವೇಳೆ ಹೆಚ್ಚು ವರಮಾನದ ದೃಷ್ಟಿಯಿಂದ ಇಂಥಾ ಹೆಚ್ಚು ಬೆಲೆ ಬಾಳುವ ಜಮೀನುಗಳನ್ನು ಇವರಿಗೆ ಕೊಡಬಾರದೆಂದಿದ್ದರೆ ತಮಗೆ ವರಮಾನ ಹೊಂದಲಿಕ್ಕಿರುವುದು ಇದೊಂದೇ ಮಾರ್ಗವಲ್ಲ. ಈ ಒಂದು ಅಭಿಪ್ರಾಯವನ್ನಿಟ್ಟುಕೊಂಡು ತಾವು ಕೆಲಸಕ್ಕೆ ಬಾರದ ಮತ್ತೂ ಫಲವತ್ತಾಗಿಲ್ಲದ ಭೂಮಿಗಳನ್ನು ಕೊಡುವುದಕ್ಕೆ ಬದಲು ಇಲ್ಲಾ ಎಂದು ಹೇಳುವುದು ಲೇಸು. ಆದರೆ ನಾನು ಈಗ ಕೇಳಿಕೊಳ್ಳತಕ್ಕದ್ದು ಇಷ್ಟು. ಈ ಪಕ್ಷಪಾತದ ನೀತಿಯಿರಬಾರದು ಎಲ್ಲರಿಗೂ ಒಂದೇ ಸಮನಾಗಿ ಕೊಡಿ.

ಇನ್ನು ನಾನು ಗೃಹಕೈಗಾರಿಕೆಗಳ ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾಪಿಸುತ್ತಾ ಒಂದೆರಡು ಸಲಹೆಗಳನ್ನು ನೀಡಬೇಕೆಂದಿದ್ದೇನೆ. ಈಗ ಸರ್ಕಾರದವರು ಈ ಕೈಗಾರಿಕೆಗಳ ಪರವಾಗಿ ಕೈಗೊಂಡಿರತಕ್ಕ ನೀತಿಯ ಪ್ರಕಾರ ತಮ್ಮ ಉದ್ದೇಶವು ಸಫಲಗೊಳ್ಳಲಾರದು ದೇಶದ ಆರ್ಥಿಕ ಸ್ಥಿತಿಯೂ ಕೂಡ ಉತ್ತಮಗೊಳ್ಳಲು ಈ ನೀತಿ ಅಷ್ಟು ಸಮರ್ಪಕವಾಗಿರುತ್ತೆಂದು ಹೇಳುವುದಕ್ಕಾಗುವುದಿಲ್ಲ. ಈ ಬಗ್ಗೆ ಶತ್ರಾಪಿ ಹಿಂದುಗಳ ಪಂಗಡದವರಿಗೆ ಸಾಕಷ್ಟು ಸಹಾಯ ದೊರೆಯುತ್ತಿಲ್ಲ. ಒಂದು ಸಂದರ್ಭದಲ್ಲಿ ಮಾತನಾಡುವಾಗ ಮಾನ್ಯ ಆರ್ಥಿಕ ಸಚಿವರು ಜೋಡು ಹೊಲಿಯುವ ಕೆಲಸಕ್ಕೆ ಯಾರು ಬರುತ್ತಾರೆ ಎಂದು ಹೇಳಿದರು. ಅವರೇನಾದರೂ ಈ ಕೆಲಸ ಉತ್ತಮವಾದ ಕೆಲಸವಲ್ಲ ಎಂದು ತಿಳಿದುಕೊಂಡಿದ್ದರೆ ಅವರು ಆ ಅಭಿಪ್ರಾಯವನ್ನು ಬಿಟ್ಟು dignity of labour ಎಂಬುದರ ಅರ್ಥವನ್ನು ಚೆನ್ನಾಗಿ ತಿಳಿದುಕೊಳ್ಳಬೇಕು.

ಅಧ್ಯಕ್ಷರು.—ಬಡವರೆ ಹೆಚ್ಚಾಗಿ ತೆಗೆದುಕೊಳ್ಳುತ್ತಿದ್ದಾರೆ ಈ ಕೈಗಾರಿಕೆಗಳನ್ನು, ಎಂಬುದಾಗಿ ಹೇಳಿದ್ದಾರೆ ಅಷ್ಟೆ.

ಶ್ರೀ ಎಂ. ಮಾದಯ್ಯನವರು.—ಈಗ High Schools and Colleges ಗಳಲ್ಲಿ ವಿದ್ಯಾಭ್ಯಾಸ ಜನಸಾಮಾನ್ಯರಿಗೆ ದೊರೆಯುವಂತೆ ಅವಕಾಶ ಕಲ್ಪಿಸಿಲ್ಲ. ಇದರಿಂದ a particular section of the people will go without education. ಹೀಗಾಗಿ ಈ ವಿದ್ಯಾಭ್ಯಾಸದ ಸೌಲಭ್ಯ ಎಲ್ಲರಿಗೂ ಒಂದೇ ಸಮನಾಗಿ ದೊರೆಯುತ್ತಿಲ್ಲ. ಇದು ಈಗಿನ ವಿದ್ಯಾಭ್ಯಾಸದಲ್ಲಿರತಕ್ಕ ಒಂದು ಲೋಪ. ಇದನ್ನು ಸರಿಪಡಿಸಿ ವಿದ್ಯಾಭ್ಯಾಸವು ಎಲ್ಲರಿಗೂ ಒಂದೇ ರೀತಿಯಲ್ಲಿ ದೊರೆಯುವಂತೆ ಮಾಡಬೇಕು. ಆದರೆ ತಾವು ಈ ಯೂನಿವರ್ಸಿಟಿ ವಿದ್ಯಾಭ್ಯಾಸದ ಬಗ್ಗೆ 45 ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೀರಿ. ಆದರೆ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕಾಗಿ ಹೆಚ್ಚಿನ ಮೊಬಲಗನ್ನು ಕೊಟ್ಟಿಲ್ಲ. ಇದನ್ನು ಕೂಡಲೇ ಸರಿಪಡಿಸಿ ಹೆಚ್ಚಿಸಬೇಕು.

ಗ್ರಾಮ ಕೈಗಾರಿಕೆಗಳ ಪೈಕಿ ನೂಲುವುದು, ಚಾಪೆ ಹೆಣೆಯುವುದು, ಮತ್ತು ಕೋಳಿಸಾಕುವುದು, (though poultry forming is a good industry) ನಮಗೆ ಸಾಕಷ್ಟು ಈ ಬಗ್ಗೆ ದ್ರವ್ಯಸಹಾಯ ಒದಗುತ್ತಿಲ್ಲ. ನಮ್ಮ ಹರಿಜನರ ಮನೆಗಳಲ್ಲಿ ಹೆಂಗಸರಿಗೆ ಬಹಳ ವಿರಾಮವಿರುತ್ತದೆ. ಆಗ ಅವರು ಚಾಪೆ ಇತ್ಯಾದಿ ಹೆಣೆಯಲು ಸಾಕಷ್ಟು ಪ್ರೋತ್ಸಾಹ ದೊರೆಯುತ್ತಿಲ್ಲ. ಈಗ ಅವರಿಗೆ ಸಿಕ್ಕಿರತಕ್ಕ ಅವಕಾಶವೆಲ್ಲ ಕೇವಲ ನಾಲ್ಕಾರು ಚಾಪೆಗಳನ್ನು ಹೆಣೆದರೆ ಹೆಚ್ಚಾಯಿತು. ಹೀಗೆ ನಾಲ್ಕಾರು ಕೋಳಿ ಸಾಕುವುದರಿಂದಾಗಲೀ ಅಥವಾ ನಾಲ್ಕಾರು ಚಾಪೆ ಹೆಣೆಯುವುದರಿಂದಾಗಲೀ ಈ ಗೃಹ ಕೈಗಾರಿಕೆಗಳು ಮುಂದುವರಿದಂತಾಯಿತೆಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಈ ಬಗ್ಗೆ ತಾವು ಹೆಚ್ಚಿನ ಗ್ರಾಂಟನ್ನು ಕೊಟ್ಟು ಈ ಕೈಗಾರಿಕೆಗಳು ಮುಂದುವರಿಯುವಂತೆ ಮಾಡಬೇಕೆಂದು ಹೇಳಿ ನಾನು ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

Srimathi RATNAMMA ISAAC (Kolar District—General).—Mr. Speaker, Sir, yesterday being Good Friday, in conformity with the Centre, we ought to have observed it as a holiday. It is a very important day for us, if we remember the great sacrifice Christ made in order to bring redemption to the world. No doubt we are a minority but the magnanimity of the majority should be seen in such act of graciousness towards the minorities.

We are indeed thankful to the Finance Minister for re-arranging our budget according to the instructions from the Centre in line with the budgets of all other States. Certainly, he must have taken a good deal of pains to re-arrange it and we are thankful to him and the Financial Secretary and to his Department for their strenuous work.

We do appreciate greatly that nation building activities in the State like Education, Medicine and Public Health and Grow More Food Campaign have received priorities in the Budget.

(SRIMATHI RATNAMMA ISAAC.)

I feel as a doctor, that there has been a steady progress in connection with health and medicine. When I joined the Mysore Medical Service 31 years ago, there was hardly one Maternity Home in the City. Medical help in rural parts was practically nil and special help for women was meagerly done by men doctors. There was just a handful of lady doctors, but to-day through the encouragement given by the Government, the Medical Department is literally flooded with doctors and nurses, and private practitioners are practicing in almost every street in the cities. But we want more doctors and nurses according to the population basis which has increased to a large extent during this decade from 1929. Our Government had started Birth Control clinics in the three Big Hospitals in Bangalore and Mysore Cities and allotted a fair amount for buying contraceptive materials. When I attended the All India Women's Conference at Trivandrum, Mysore State was pointed out as the first State to start clinics to give advice on Birth Control. But, Sir, it is now felt by all that work in hospitals had increased tremendously and there is no time for Lady Doctors to listen to the histories of women and give suitable advice. Also the cost of the Birth Control materials has gone up so much that it is not po sible to help the poor who only need this advice so much ; as the western countries have led the way in this limiting of families, I would urge the Government to send one elderly and experienced Lady Doctor to the West to learn the modern methods of Birth Control and give the benefit of the knowledge derived to our women. (Sri K. Puttaswamy.—Hear, Hear.) In one of our All India Women's Conference we decided to call these "Health Clinics" where not only Birth Control—that word is a stumbling block to many—but Cancer Control—Cancer prevention clinics and advice on the general health of omen may be given. Ame ica leads in this. Women, particularly between the ages of 45 and 55 are prone to many kinds of diseases, which come on insidiously like Cancer, High blood-pressure, diabetes, allumi-nurea, etc. If these clinics are established they will detect these early and prevent them and thus serve all these purposes.

Sir, I find that the Government have not set apart any money for the construction of a habitation for Abhay-ashram (Central Training and Rescue Homes). This is a definite requirement for the implementation of the Act passed for the suppression of immoral traffic. Both the Finance Minister and the Chief Minister were kind enough to preside in the annual Public meeting of the Association for Moral and Social Hygiene and they encouraged us with their kind words to go ahead and commence the building work of the Rescue Home and help will be given. When the question of building this Rescue Home was first mooted by the Association, Sir Mirza Ismail had promised us 4 acres of land on the Bannerghatta Road. Now our Government have given us less than 2 acres in the Wilson Gardens extension and we are thankful to them for it. His Highness graciously laid the foundation stone year before last. Now I press that the Government may be pleased to give us a moiety of the building expenses as has been indicated by the Government authorities all along. This is one urgent public service which the Government are to undertake. This is a noble work of not only saving our unfortunate sisters from degradation and vice but also removing a menace which the youth of the city and villages round about are facing to the detriment of their health and their future. I find also, Sir, the annual grant for Abhayashram for maintenace of these unfortunate girls as well as the usual lumpsum grant for this useful work has been omitted in the budget, which I hope is just a mistake and it will soon be corrected.

There is a great need for a Nurses Club which is at present run in the Tippu Sultan's palace in a suit of rooms in the verandah, which has been kindly given by the Government to the Y. W. C. A. for this work. It is a very desirable service to the nurses who work for such long hours standing on their legs

all the time. This recreation provided in this Branch is a great need to keep up the spirit of these hard-worked nurses. Although this work is going on for 10 years, the Association which began this work is not able to provide the necessary funds to maintain it in an efficient state. If a full time Secretary is appointed, the work may be strengthened to the great benefit of the nurses and other young women in the area. We do need very badly a sum of Rs. 1,500 annually for the work from the Government. I appeal to you that the Government may be pleased to grant this as an annual subsidy to the City Y. W. C. A., Fort Branch. They need much more than a similar amount to carry on the work. They will raise it themselves through membership fees and subscriptions.

Cretche for Ayahs and maid servant's Children: The Maternity and Child Welfare Sub-Committee of the Indian Red Cross Society, Mysore Branch have been requesting that a Creche for the children of the working classes in the three Hospitals be opened. It was the members of the Board of Visitors who are appointed by Government to look into the interests of the employed staff and others connected with the 3 Hospitals who first suggested the need for serving the young children of the Ayahs and menials wandering about in the Hospital premises uncared for by any one. It is not only a need, but their roaming in the premises of the Hospitals which is undesirable, will be prevented by the establishment of a Creche for them in the vicinity. May I request that the ground floor right wing of the Tippoo Sultan's Palace, which is lying vacant, without being used for anything, be given for this purpose and the initial expenditure of buying cots, cradles, linen, etc., be also granted. An initial start has already been made by a gift of 50 bed sheets by the Red Cross Society, Mysore State Branch. The initial cost and salaries of Nurses to be employed should be met by the Government. No doubt in course of time this will become a nucleus of a nursery school for these uncared for children. The Y.W.C.A., which is having its Ladies Club in the Upper floor have already started a club called "Lotus Club" for the benefit of these children in conducting games and amusements for these children. I may mention here that the collections for the Children's Day for which the Director of Public Instruction was the President, have amounted to nearly Rs. 45,000.

Sri M. V. KRISHNAPPA.—All about Bangalore City only.

Srimathi RATNAMMA ISAAC.—The amount was collected from all the nine districts. So it must be distributed to the other districts also. I think Bangalore has collected most and I am suggesting that a major portion of this money may be utilised for the Creche for the children of these poor Ayahs and menials.

Sir, I have been pressing for the establishment of a maternity ward in Kengeri dispensary for the last two years for the benefit of the women there. I am told, Sir, that the maternal mortality is high in that locality. In view of this urgent need a charitable gentleman has come forward with a donation of Rs. 3,000 and the local people have subscribed another Rs. 3,000. The Swamiji in Kengeri Ashram has told me about the great need, time after time, and we do request the Government to establish a maternity ward added to the dispensary there which will be a boon to the rural area.

I am grateful to the Government for the continuance of the grant of Rs. 5,000 to the Girl Guide Association which is engaged in developing all-round character of children and young women in schools, colleges and ashrams, etc. The work is so useful to develop resourcefulness and helpfulness to others as well as to the virile womanhood of the State.

I take this opportunity to thank the Government for the continuance of the grant to the Zenana Mission Hospital in the Civil Station which is doing a notable service in the true missionary spirit.

I also thank the Government for sending a lady doctor to the Institute of Hygiene, Calcutta, for being trained

(SRIMATHI RATNAMMA ISAAC.)

in maternity and child welfare work and now appointing her as the Organising Secretary of the Mysore Red Cross Society. The honorary members from districts may avail themselves of the use of this experienced and is well trained lady doctor to look after the maternity and welfare centres in various villages and also other milk centres. The maternity homes that were built but were not functioning, can all be availed of by all suffering women if the Health Department would revive the post of the Superintendent of Maternity and Child Welfare Bureau and utilise the services of this lady doctor.

With these words I commend the Budget.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಸ್ವಾಮಿ, ಮುಂದಿನ ವರ್ಷದ ಆಯವ್ಯಯಗಳ ಪಟ್ಟಿಯನ್ನು ನಾನು ಸ್ವಾಗತಿಸುತ್ತೇನೆ. ಈ ಸಂಬಂಧವಾಗಿ ಮೊದಲು ಈ ಆಯವ್ಯಯ ಪಟ್ಟಿಯನ್ನು ಯಾವ ದೃಷ್ಟಿಯಿಂದ ನೋಡಬೇಕೆಂಬ ವಿಷಯದಲ್ಲಿ ಒಂದು ಮಾತು ಹೇಳಬೇಕೆಂದು ಅಪೇಕ್ಷಿಸುತ್ತೇನೆ. ಜನರಿಗೆ ರಕ್ಷಣೆ, ಸೌಕರ್ಯ, ಅನುಕೂಲ ಇತ್ಯಾದಿಗಳನ್ನು ಒದಗಿಸಿಕೊಡುವುದು ಸರ್ಕಾರದ ಮೊದಲನೆಯ ಕರ್ತವ್ಯವಾಗಿದೆ ಅದಕ್ಕೆಲ್ಲ ಹಣ ಬೇಕು. ಯಾವ ಯಾವ ಖರ್ಚು ಆಗಬೇಕೋ ಆಯಾ ಖರ್ಚಿಗೆ ಹಣವನ್ನು ಸರ್ಕಾರದವರು ಒದಗಿಸಿಕೊಳ್ಳಬೇಕು. ಅದನ್ನು ಆಯಾಯಾ ದೇಶದ ಜನರಿಂದಲೇ ಒದಗಿಸಿಕೊಳ್ಳಬೇಕು ಹಾಗೆ ಒದಗಿಸಿಕೊಳ್ಳುವಾಗ ನಮ್ಮ ದೇಶದ ಖರ್ಚಿನ ಅಗತ್ಯತೆ ಎಷ್ಟಿದೆ, ಅದನ್ನು ಯಾವ ರೀತಿ ಒದಗಿಸಿಕೊಳ್ಳಬೇಕೆಂಬ ವಿಚಾರದಲ್ಲಿ ಸರ್ಕಾರದವರು ದೀರ್ಘಾಲೋಚನೆ ಮಾಡಬೇಕು. ಈಗ ತಾನೆ ಹಿಂದೆ ಮಾತನಾಡಿದ ಸದಸ್ಯರ ಭಾಷಣದಿಂದ ಒಂದು ಅಂಶ ಹೊರಪಟ್ಟಿದೆ. ಅದೇನೆಂದರೆ ಕೆಲವರ ಮೇಲೆ ಹಾಕಿರತಕ್ಕ ತೆರಿಗೆ ಭಾರ ಹೆಚ್ಚು ಹೆಚ್ಚಾಗಿ ಅವರು ಪ್ರತ್ಯಕ್ಷವಾಗಿ ಕೊಡುತ್ತಾರೆ. ಕೆಲವರ ಮೇಲೆ ಆ ಭಾರ ಹೆಚ್ಚು ಬೀಳುತ್ತಾ ಇಲ್ಲ. ಕೆಲವರ ಮೇಲಂತೂ ಬೀಳುತ್ತಲೇ ಇಲ್ಲವೆಂದೂ ಶ್ರೀಮಾನ್ ಗುಂಡಪ್ಪಗೌಡರು ಒಂದು ವಿಧವಾಗಿ ಸೂಚಿಸಿದ್ದಾರೆ. ಇದರಲ್ಲಿ ಯೋಚನೆ ಮಾಡಬೇಕಾದ್ದು ಇಷ್ಟೆ. ಯಾರು ಹೆಚ್ಚು ಸಂಪಾದಿಸುತ್ತಾರೋ ಅವರು ಸರ್ಕಾರಕ್ಕೆ ಹೆಚ್ಚಾಗಿ ತೆರಿಗೆ ಕೊಡಬೇಕು, ಯಾರು ಎಷ್ಟು ಮಟ್ಟಿಗೆ ತಡೆಯಬಲ್ಲರೋ ಅಷ್ಟು ಮಟ್ಟಿಗೆ ಅವರ ಮೇಲೆ ಭಾರ ಹಾಕಬೇಕು. ಅದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ತೆರಿಗೆ ಸುಂಕ ಇತ್ಯಾದಿಗಳನ್ನು ವಿಧಿಸಬೇಕಾದ್ದು ತೀರಾ ಅಗತ್ಯವಾಗಿದೆ. ಹೀಗೆ ನಮ್ಮ ದೇಶಕ್ಕೆ ಅಗತ್ಯವಾಗಿ ಖರ್ಚಿಗೆ ಬೇಕಾದಂಥ ಮೊಬಲಗುಗಳನ್ನು ಸರ್ಕಾರದವರು ಹುಟ್ಟುವಳಿ ಮಾಡಿಕೊಳ್ಳಬೇಕಾಗಿದೆ. ಈ ವರ್ಷದ ಆಯವ್ಯಯಗಳ ಅಂದಾಜು ಪಟ್ಟಿಯಲ್ಲಿ ಮೊದಲು ಎದ್ದು ಕಾಣುತ್ತಾ ಇರುವುದು ಶಿರೋನಾಮೆಗಳ ಪುನರ್ ವಿಂಗಡಣೆ. ಇದು ಕೆಲವು ಸದಸ್ಯರು, ಮತ್ತೆ ವಿರೋಧ ಪಕ್ಷದ ನಾಯಕರಾದ ಜನಾಬ್ ಇಮಾಂರವರು ಅರ್ಥವಾಗುವುದಿಲ್ಲ, ಗೊಂದಲವಾಗಿ ಕಾಣುತ್ತದೆ ಎಂದು ಹೇಳಿದರು. ಶ್ರೀಮಾನ್ ಗೋವಿಂದರೆಡ್ಡಿಯವರು ನೋಡಿದ ಕೂಡಲೇ ಗೊಂದಲವಾಗಿ ಕಂಡರೂ ಕ್ರಮೇಣ ಅಭ್ಯಾಸವಾಗುತ್ತದೆ ಎಂದು ಹೇಳಿದರು. ಇದನ್ನು ನೋಡಿದ್ದರಲ್ಲಿ ನವೀನತೆ ಏನೂ ಇಲ್ಲ. ಸ್ವಲ್ಪ ಸಾವಧಾನವಾಗಿ ಅವಲೋಕಿಸಿದರೆ ಹಿಂದೆ ಇದ್ದುದಕ್ಕಿಂತ ಈ ಏರ್ಪಾಡು ಉತ್ತಮವಾಗಿ ಕಾಣುತ್ತದೆ. ಸಾಮಾನ್ಯವಾಗಿ ಹೊಸದಾಗಿರುವುದರಿಂದ ಹಾಗೆ ಕಾಣಬಹುದು. ಒಂದು ಉದಾಹರಣೆ ಹೇಳುವುದಾದರೆ ಹಿಂದೆ ರೆವಿನ್ಯೂ ಕಮಿಷನರ ಖರ್ಚೆಲ್ಲಾ ಲ್ಯಾಂಡ್ ರೆವಿನ್ಯೂ ಮೇಲೆ ಬೀಳುತ್ತಿತ್ತು. ಸಾಮಾನ್ಯವಾಗಿ ರೆವೆನ್ಯೂ ಕಮಿಷನರು, ಡೆಪ್ಯುಟಿ ಕಮಿಷನರು, ತಾಲ್ಲೂಕು ಅಧಿಕಾರಿಗಳ ಇವರೆಲ್ಲರೂ ಕಂದಾಯ ವಸೂಲು ಮಾಡುವವರು, ಕಂದಾಯ ಖರ್ಚುಮಾಡುವವರು ಮಾತ್ರವಲ್ಲ; ಅವರು ತಮ್ಮ ತಮ್ಮ ಸರಹದ್ದಿನ ಎಲ್ಲಾ ಆಡಳಿತವನ್ನೂ ನೋಡಿಕೊಳ್ಳುತ್ತಾರೆ. ಆದ್ದರಿಂದ ಈ ಖರ್ಚು ಜನರಲ್ ಅಡ್ಮಿನಿಸ್ಟ್ರೇಷನ್ ಬಿಟ್ಟು ಲ್ಯಾಂಡ್ ರೆವಿನ್ಯೂನಲ್ಲಿ ಬರಬೇಕಾದ್ದಿಲ್ಲ. ಈ ಹೊಸ ವ್ಯವಸ್ಥೆಯಲ್ಲಿ ಆ ರೀತಿ ಆಗಿದೆ. ಹೀಗೆ ಅನೇಕ ಉದಾಹರಣೆಗಳನ್ನು ಹೇಳಬಹುದು. ಇದು ಅಭ್ಯಾಸವಾದರೆ ಮುಂದಿನ ವರ್ಷ ಸರಿಹೋಗುತ್ತದೆ ಎಂದು ನನ್ನ ಭಾವನೆ. ಬೇರೆ ಬೇರೆ ಇಲಾಖೆಗಳಿಗೆ ಬರತಕ್ಕ ಆದಾಯವೇನು, ಬೇರೆ ಬೇರೆ ಇಲಾಖೆಗಳಿಗೆ ಒದಗಿಸಿರತಕ್ಕ ಮೊಬಲಗೇನು, ಅದರ ಪೈಕಿ ಯಾವುದನ್ನು ಕಡಿಮೆ ಮಾಡಬೇಕು, ಯಾವುದನ್ನು ಹೆಚ್ಚು ಮಾಡಬೇಕು ಎಂಬ ವಿಷಯಗಳಿಗೆ ನಾನು ಈಗ ಕೈಹಾಕುವುದಿಲ್ಲ. ಮುಂದಿನ ಸೋಮವಾರದಿಂದ ಅನೇಕ ಖೋತಾ ನಿರ್ಣಯಗಳು ಬರುತ್ತವೆ. ಎಲ್ಲಾ ಇಲಾಖೆಗಳ ಮೇಲೆ ಖೋತಾ ನಿರ್ಣಯಗಳನ್ನು ಕಳುಹಿಸಿದ್ದಾರೆ. ನಾನೂ ಕೆಲವನ್ನು ಕಳುಹಿಸಿದ್ದೇನೆ. ಅವಕಾಶ ದೊರೆತರೆ ಆಗ ಅವುಗಳನ್ನು ಸ್ವಲ್ಪ ಕೂಲಂಕಷವಾಗಿ ವಿಮರ್ಶೆ ಮಾಡುವುದಕ್ಕೆ ಆಸ್ಪದವಿದೆ. ನಾವು ಎಷ್ಟು ಮಟ್ಟಿಗೆ ಖರ್ಚು ಹಿಡಿತಮಾಡಬೇಕು ಎಷ್ಟು ಮಟ್ಟಿಗೆ ಕೈ ಧಾರಾಳ ಮಾಡಬೇಕು ಎನ್ನುವ ವಿಚಾರದಲ್ಲೂ ಬೇರೆ ಬೇರೆ ಇಲಾಖೆಗಳಿಗೆ ಒದಗಿಸಿರತಕ್ಕ ಮೊಬಲಗುಗಳನ್ನು ನೋಡಿಕೊಳ್ಳುವುದಕ್ಕೂ ಇಲ್ಲಿಂದ ಮುಂದೆ ಎಸ್ಟಿಮೇಟ್ ಸಮಿತಿ ಇದೆ. ಅವರು ಆಯಾಯ ಕಾಲದಲ್ಲಿ ಸೇರಿ ಯಾವ ಯಾವ ಖರ್ಚು ಎಷ್ಟು ಮಟ್ಟಿಗೆ ಹಿಡಿತ ಮಾಡಬಹುದು ಎಂಬ ಬಗ್ಗೆ ಸರ್ಕಾರದವರಿಗೆ ಸಲಹೆ ಕೊಡುತ್ತಾರೆ. ಆದ್ದರಿಂದ ನಮ್ಮ ಆರ್ಥಿಕ ಸಚಿವರು ತಮ್ಮದು ಹಿಡಿತದ ಕೈ ಎಂದು ಅವರೇ ಹೇಳಿಕೊಂಡಿದ್ದರೂ, ಹಿಡಿತಮಾಡುವುದನ್ನು ಅವರಿಗೂ ಹೇಳಿಕೊಡುವುದಕ್ಕೆ ಎಸ್ಟಿಮೇಟ್ ಸಮಿತಿ ಸಹಾಯವಾಗುತ್ತದೆ. ಈ ಏರ್ಪಾಡಿನಿಂದ ನಾವು ಆಯಾಯ ಇಲಾಖೆಯ ಆಯವ್ಯಯದ ಮುಖ್ಯವಾದ ಖರ್ಚಿನ ಪ್ರಮಾಣವನ್ನು ನಿಗದಿಮಾಡಬಹುದಾಗಿದೆ. ಈ ವರ್ಷದ ಆಯವ್ಯಯ ಪಟ್ಟಿಯಲ್ಲಿ ಒಂದು ಸಂತೋಷಕರವಾದ ವಿಚಾರವೆಂದರೆ, ನಮಗೆ ಹಣದ ಅಭಾವವಿದೆ ಎಂಬುದು ಎಷ್ಟೇ ಮನದಟ್ಟಾದರೂ ರಾಷ್ಟ್ರ ನಿರ್ಮಾಣ ಕಾರ್ಯಗಳಿಗೆ ವಿಪುಲವಾಗಿ ಹಣ ಒದಗಿಸಿದ್ದಾರೆ. ಇದು ಬಹಳ ಸಂತೋಷದ ವಿಚಾರ. ಇದಕ್ಕಾಗಿ ಸರ್ಕಾರದವರನ್ನು ಅಭಿನಂದಿಸಬೇಕಾಗಿದೆ ಧಾರಾಳವಾಗಿ ಹಣಒದಗಿಸಿದ್ದರಿಂದಲೇ ಸಂತೋಷಪಟ್ಟುಕೊಳ್ಳುವುದು ಸ್ವಾಭಾವಿಕವಾದರೂ ಅದು ಯಾವ ರೀತಿ ವಿನಿಯೋಗವಾಗಬೇಕು ಎಂಬುದನ್ನು ಮುಖ್ಯವಾಗಿ ನೋಡಬೇಕಾಗುತ್ತದೆ. ಈ ಸಂದರ್ಭದಲ್ಲಿ ನನಗೆ ಒಂದು ಮಾತು ಜ್ಞಾಪಕಕ್ಕೆ ಬರುತ್ತದೆ. ಮಹಾತ್ಮಾ ಗಾಂಧಿಯವರು ದೈವಾಧೀನರಾಗುವುದಕ್ಕೆ 20-22 ದಿನಗಳ ಹಿಂದೆ ಅವರನ್ನು ಭೇಟಿ

ಮಾಡುವ ಸುಯೋಗ ನನಗೆ ದೊರೆತಿತ್ತು. ದಕ್ಷಿಣ ಸಂಸ್ಥಾನಗಳ ವಿಲೀನೀಕರಣದ ಸಂಬಂಧವಾಗಿ ಒಂದು ಡೆಪ್ಯುಟೇಷನ್ ಹೋದಾಗ ಆ ಡೆಪ್ಯುಟೇಷನ್ ನಾಯಕನಾಗಿ ನಾನು ಬಾಪೂಜಿಯವರ ಸಂಗಡ ಮಾತನಾಡಿದ ಮೇಲೆ ಎದ್ದು ಬರುವಾಗ ಒಂದು ಸಂದೇಶ ದಯಪಾಲಿಸಬೇಕೆಂದು ಅವರನ್ನು ಕೇಳಿಕೊಂಡೆ. ಆಗ ಇನ್ನೂ ಕಾಂಗ್ರೆಸ್ ಸರ್ಕಾರ ನಮ್ಮ ಸಂಸ್ಥಾನದಲ್ಲಿ ಆಡಳಿತ ವಹಿಸಿರಲಿಲ್ಲ. ಆಗ ಅವರು ಭವಿಷ್ಯ ನುಡಿದ ಹಾಗೆ ಹೇಳಿದರು. ರಾಜ್ಯಾಡಳಿತ ಕಾಂಗ್ರೆಸ್‌ನವರ ಕೈಗೆ ಬರುತ್ತದೆ. ಜನರ ಕಷ್ಟಪಟ್ಟು ಸಂಪಾದಿಸತಕ್ಕ ಲಕ್ಷಾಂತರ ಕೋಟ್ಯಾಂತರ ರೂಪಾಯಿ ಅವರ ಕೈಗೆ ಸಿಕ್ಕುತ್ತದೆ, ಒಂದೊಂದು ಕಾಸನ್ನೂ ಒಂದೊಂದು ರೂಪಾಯಿನ ಬೆಲೆ ಎಂದು ತಿಳಿದುಕೊಂಡು ಖರ್ಚುಮಾಡ ಬೇಕಾದ್ದು ಕಾಂಗ್ರೆಸ್‌ನವರ ಕರ್ತವ್ಯ. ಹಾಗೆ ಮಾಡುವಾಗ ಪ್ರತಿಯೊಂದು ಕಾಸೂ ಸಹ ಜನಗಳ ಹಿತಕ್ಕೆ ಅನುಕೂಲಕ್ಕೆ ಖರ್ಚಾಗುತ್ತಿದೆ, ವಿನಿಯೋಗವಾಗುತ್ತಿದೆ ಎಂಬ ಭರವಸೆ ಮಾಡಿಕೊಂಡು ಹಣ ಖರ್ಚು ಮಾಡಬೇಕು. ಅಷ್ಟು ಮಾಡಿದರೆ ದೇಶಕ್ಕೆ ಹಿತವಾಗುತ್ತದೆ. ಅದೇ ನನ್ನ ಸಂದೇಶ ಎಂದು ಹೇಳಿದರು. ಮಹಾತ್ಮಾ ಗಾಂಧಿಯವರ ಆ ಕಡೆಯ ಸಂದೇಶ ಏನಿತ್ತೋ ಅದನ್ನು ಸರ್ಕಾರದವರು ಮತ್ತು ಎಸ್ಟಿಮೇಟ್ಸ್ ಸಮಿತಿಯವರ ಮನಸ್ಸಿನಲ್ಲಿಟ್ಟುಕೊಂಡು ನಮ್ಮ ದೇಶದ ಅನೇಕ ಕಾರ್ಯಗಳಿಗೆ ಬಹಳ ಧಾರಾಳವಾಗಿ ಒದಗಿಸಿರತಕ್ಕ ಹಣವನ್ನು ಖರ್ಚು ಮಾಡುವುದು ಮತ್ತು ವೆಚ್ಚವನ್ನು ನಿರ್ಧರಿಸತಕ್ಕದ್ದು ಅಗತ್ಯವಾಗಿದೆ.

ಈಗ ಅನೇಕ ಮಾನ್ಯ ಸದಸ್ಯರು ಭಾಷಣ ಮಾಡಿದ್ದರಲ್ಲಿ ಒಂದಂಶವನ್ನು, ಒಂದು ಕಳಂಕವನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ದೇಶದ ವೆಚ್ಚ ದಿನೇ ದಿನೇ ಹೆಚ್ಚುತ್ತಿದೆಯೆಂದು ಹೇಳಿದ್ದಾರೆ. ಇದೇನೋ ಸ್ವಾಭಾವಿಕವೇ. ಜನಸಂಖ್ಯೆ ಹೆಚ್ಚಿದ್ದು ಹಾಗೆಲ್ಲಾ ವೆಚ್ಚವೂ ಹೆಚ್ಚಲೇ ಬೇಕು. ಏಕೆಂದರೆ ಜನಸಂಖ್ಯೆ ಹೆಚ್ಚಾದ್ದಕ್ಕನುಗುಣವಾಗಿ ಅವರೆಲ್ಲರಿಗೂ ಸೌಕರ್ಯಗಳನ್ನು ಕಲ್ಪಿಸಬೇಕಾದರೆ ಹೆಚ್ಚಿಗೆ ಹಣವೂ ಬೇಕು. ಆದ್ದರಿಂದ ವೆಚ್ಚ ಆಗಲೇ ಬೇಕು. ಆದರೆ, ಕಳವಳಕ್ಕೆ ಕಾರಣ ಯಾವುದೆಂದರೆ ದೇಶದ ಆದಾಯದ ಬಾಬುಗಳು ಕಡಿಮೆಯಾಗುತ್ತಾ ಇವೆ. ಮುಖ್ಯವಾಗಿ ನಮ್ಮ ದೇಶದ ಅನೇಕ ಆದಾಯದ ಬಾಬುಗಳು ಕೇಂದ್ರಕ್ಕೆ ಹೋದದ್ದರಿಂದ, ಅದರಲ್ಲೂ ನಿರ್ದಿಷ್ಟವಾಗಿ ಹೆಚ್ಚಿಗೆ ಲಾಭ ತರುತ್ತಿದ್ದ ಇಲಾಖೆಗಳು ಕೇಂದ್ರಕ್ಕೆ ಹೋದದ್ದರಿಂದ ನಮ್ಮ ಆದಾಯ ಕಮ್ಮಿಯಾಗಿದೆ. ಜನರ ಮೇಲೆ ಹೆಚ್ಚಿಗೆ ತೆರಿಗೆಗಳನ್ನು ಹೊರಿಸುವುದಕ್ಕೂ ಸಾಧ್ಯವಿಲ್ಲ. ಹೀಗಾದರೆ ನಮ್ಮ ದೇಶದ ಭವಿಷ್ಯದ ಬಗ್ಗೆ ಸ್ವಲ್ಪ ಕಳವಳ ವ್ಯಕ್ತಪಡಿಸಿರುವುದು ಸಹಜ. ಇದು ಮುಖ್ಯವಾಗಿ ಎಲ್ಲರೂ ಯೋಚನೆ ಮಾಡಬೇಕಾದ ವಿಚಾರ. ಇಲ್ಲಿ ಒಂದು ಸಲಹೆ ಕೊಡಬಹುದು. ಈಗ ನಮ್ಮ ಸಂಸ್ಥಾನದ ಉತ್ಪತ್ತಿ ಬಾಬುಗಳು ಅನೇಕವು ಕೇಂದ್ರಕ್ಕೆ ಹೋದದ್ದರಿಂದ, ಕೇಂದ್ರ ಸರ್ಕಾರದವರು ನಮ್ಮ ದೇಣಿಗಳ ವಿಚಾರದಲ್ಲಿಯೂ ಸ್ವಲ್ಪ ಗಮನಕೊಡುವುದು ಅಗತ್ಯ. ಎದುರು ಪಕ್ಷದ ನಾಯಕರಾದ ಜನಾಬ್ ಇಮಾಂರವರೂ ಮತ್ತು ಶ್ರೀ ಗೋವಿಂದರೆಡ್ಡಿಯವರೂ ಸಹ ಇದನ್ನೇ ಸೂಚಿಸಿದ್ದಾರೆ. ನಮ್ಮ ದೇಣಿಗಳೇನಿವೆಯೋ ಅವುಗಳನ್ನೆಲ್ಲಾ ಪೂರ್ತಿಯಾಗಿ ಕೇಂದ್ರ ಸರ್ಕಾರದವರೇ ವಹಿಸಿಕೊಳ್ಳಬೇಕೆಂದು ಅವರು ಹೇಳಿದ್ದಾರೆ. ಅಷ್ಟಿಲ್ಲದಿದ್ದರೆ, ಯಾವ್ಯಾವ ಇಲಾಖೆಗಳು ಕೇಂದ್ರಕ್ಕೆ ಸೇರಿವೆಯೋ ಅವುಗಳ ಆದಾಯದ ದಾಮಾಷಾ ಪ್ರಕಾರವಾದರೂ ಕೇಂದ್ರ ಸರ್ಕಾರದವರು ನಮ್ಮ ದೇಣಿಯನ್ನು ವಹಿಸಿಕೊಳ್ಳುವಂತೆ ಒತ್ತಾಯ ಪಡಿಸಬೇಕೆಂದು ನಾನು ಸೂಚಿಸುತ್ತೇನೆ. ಇನ್ನೊಂದು ದೃಷ್ಟಿಯಿಂದಲೂ ನಾವು ಅವರನ್ನು ಕೇಳಬೇಕಾಗಿದೆ. ಈಗ ಕೇಂದ್ರಕ್ಕೆ ಹೋಗಿರುವ ರೈಲ್ವೆ ಇಲಾಖೆಯಿಂದ ನಮಗೆ ಒಟ್ಟು ವರಮಾನ 2 ಕೋಟಿ ರೂಪಾಯಿ (ನಿವ್ವಳ ಸುಮಾರು 80 ಲಕ್ಷ) ಗಳವರೆಗೂ ಬರುತ್ತಿತ್ತು. ಈಗ ಅವರು ರೈಲ್ವೆ ದರವನ್ನು ಹೆಚ್ಚಿಸಿದ್ದಾರೆ. ಇದರಿಂದ ಅವರಿಗೆ ಇನ್ನೂ ಹೆಚ್ಚಿಗೆ ಆದಾಯ ಬರುವಂತಾಗಿದೆ. ಹಾಗೆಯೇ ಆದಾಯ ತೆರಿಗೆ, ನಮ್ಮಿಂದ ಕೇಂದ್ರಕ್ಕೆ ಹೋದ ಮೇಲೆ ಅವರು ದರವನ್ನು ಹೆಚ್ಚಿಸಿದ್ದಾರೆ. ಈಗ ನಮ್ಮಲ್ಲಿ ಉಳಿದಿರುವುದೆಲ್ಲಾ ಕೆಲವು ಕೈಗಾರಿಕೆಗಳು ಕೃಷ್ಣರಾಜಸಾಗರ, ಭದ್ರಾವತಿ ಕಾರ್ಖಾನೆ ಮುಂತಾದುವುಗಳು. ಇವುಗಳಿಂದೇನೂ ಹೆಚ್ಚಿಗೆ ಉತ್ಪತ್ತಿ ಬರುತ್ತಿಲ್ಲ. ಹೀಗೆ ಕ್ರಮಕ್ರಮೇಣ ಹೆಚ್ಚಿಗೆ ಉತ್ಪತ್ತಿ ಬರಮಾಡಿಕೊಳ್ಳಬಹುದಾದ ಆದಾಯ ತೆರಿಗೆ, ರೈಲ್ವೆಗಳು, ಎಕ್ಸೈಸ್ ತೆರಿಗೆಗಳು ಮುಂತಾದುವೆಲ್ಲಾ ಕೇಂದ್ರಕ್ಕೆ ಹೊರಟು ಹೋಗಿರುವುದರಿಂದ, ಅವರು ನಮಗಿರುವ 14 ಕೋಟಿ ರೂಪಾಯಿಗಳಷ್ಟು ದೇಣಿಯಲ್ಲಿ ಹೆಚ್ಚಿಗೆ ಭಾಗವನ್ನಾದರೂ ವಹಿಸಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯ : ಶ್ರೀ ಗುಂಡಪ್ಪಗೌಡರು ಹೇಳಿದ ಕೋಲಾರದ ಚಿನ್ನದ ಗಣಿ ವಿಷಯ. ನಾವು Gold duty Actನ್ನು repeal ಮಾಡಕೂಡದಾಗಿತ್ತು. ಇದರಿಂದ ಹೆಚ್ಚಿಗೆ ಹಣ ಬರುವುದಿತ್ತು. ಈಗ ಆ ಆಕ್ಟ್ repeal ಆಗಿ ಹೋಗಿ ಅದೂ ಕಡಿಮೆಯಾಯಿತು. ಜೊತೆಗೆ ಆದಾಯ ತೆರಿಗೆ ಕೇಂದ್ರಕ್ಕೆ ಸೇರಿ ಹೋದದ್ದರಿಂದ ಚಿನ್ನದ ಗಣಿಗೆ ಸಂಬಂಧಪಟ್ಟ ಹಾಗೆ ಹೆಚ್ಚಿಗೆ ಆದಾಯ ತೆರಿಗೆ ಬರುವುದೂ ನಿಂತಿತು. ಆದ್ದರಿಂದ ಕಂಪೆನಿಯವರು ಕೊಡಬೇಕಾದ ರಾಯಲ್ಟಿಯನ್ನಾದರೂ ಏಕೆ ಹೆಚ್ಚಿಸಕೂಡದೆಂದು ಅವರು ಸೂಚಿಸಿದರು. ಈ ವಿಚಾರದಲ್ಲಿ ತಾವು ಚಿನ್ನದ ಗಣಿ ಕಂಪೆನಿಯವರೊಡನೆ ಮಾತುಕತೆ ನಡೆಸುವುದು ಸೂಕ್ತ. ಹೀಗೆ ಬೇಸಿಕ್ ರಾಯಲ್ಟಿ ಜಾಸ್ತಿ ಮಾಡಿದರೆ ಕಂಪೆನಿಯವರ ಆದಾಯ ಕಡಿಮೆಯಾಗಿ ಅದರಿಂದ ಕೇಂದ್ರಕ್ಕೆ ಆದಾಯ ತೆರಿಗೆ ಮೂಲಕ ಬರಬಹುದಾದ ಆದಾಯಕ್ಕೆ ಖೋತಾ ಬರಬಹುದಾದ ಕಾರಣ ಕೇಂದ್ರಸರ್ಕಾರದವರು ಒಪ್ಪಿಗೆ ಕೊಡದಿರಬಹುದು. ಆದ್ದರಿಂದ ಅವರನ್ನೂ ಕೇಳಿ ಕಂಪೆನಿಯವರನ್ನೂ ವಿಚಾರಿಸಿ ಸೂಕ್ತ ಕಾರ್ಯಕ್ರಮ ಕೈಕೊಂಡು ಚಿನ್ನದ ಗಣಿಗಳಿಂದಲೂ ಹೆಚ್ಚಿಗೆ ಹಣ ಬರಮಾಡಿಕೊಳ್ಳುವ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಅಗತ್ಯವಿದ್ದರೆ ಈ ಸಭೆಯವರು ತಮಗೆ ಸಹಕಾರ ನೀಡುವವರಾಗಿದ್ದಾರೆ. ಆದ್ದರಿಂದ ಈ ವಿಷಯದಲ್ಲಿ ಹೆಚ್ಚಿಗೆ ಪ್ರಯತ್ನಪಟ್ಟು ನಮ್ಮ ಉತ್ಪತ್ತಿ ಹೆಚ್ಚು ಮಾಡಿಕೊಳ್ಳುವ ಯೋಚನೆ ಮಾಡುವುದು ಅವಶ್ಯಕವೆಂದು ನಾನೂ ಕೂಡ ಸರ್ಕಾರದವರಿಗೆ ಸೂಚನೆ ಕೊಡುವವನಾಗಿದ್ದೇನೆ.

ಇನ್ನೊಂದು ವಿಚಾರದಲ್ಲಿಯೂ ಸಹ ಕೇಂದ್ರ ಸರ್ಕಾರದವರು ನಮ್ಮ ಸಹಾಯಕ್ಕೆ ಬರಬೇಕೆಂದು ಹೇಳುತ್ತೇನೆ. ಕೇಂದ್ರ ಸರ್ಕಾರದವರು ನಮ್ಮಿಂದ ಮಿಲಿಟರಿಯನ್ನು ವಹಿಸಿಕೊಂಡಾಗ ಅವರಿಗೆ ಸಂಬಂಧಪಟ್ಟಂತಿದ್ದ ಖರ್ಚು ಬಾಬುಗಳನ್ನು ಕೂಡ ಅವರೇ ವಹಿಸಿಕೊಂಡರು. ಆದರೀಗ ಅನೇಕ ಮಿಲಿಟರಿಯವರನ್ನು ವಜಾಮಾಡಿದ್ದಾರೆ. ಇದರಿಂದ ತಕ್ಕಷ್ಟು ಮಟ್ಟಿಗೆ ಅವರಿಗಿದ್ದ ಖರ್ಚು ಕಡಿಮೆಯಾಗಿದೆ. ಈ ರೀತಿ ಖರ್ಚಿನಲ್ಲಿಯೂ ಕಡಿಮೆಯಾಗಿ ಇನ್ನೊಂದು ಕಡೆ ಬರುವ ಲಾಭವೂ ಹೆಚ್ಚುತ್ತಿದೆ. ನಾವು ಹಿಂದೆ ಈ ಇಲಾಖೆಗಳನ್ನು ಕೇಂದ್ರಕ್ಕೆ ವಹಿಸುವುದಕ್ಕೆ ಮುಂಚೆ ಬಹಳ

(ಶ್ರೀ ಎಚ್. ಕೆ. ವೀರಣ್ಣಗೌಡರು.)

ಮಟ್ಟಿಗೆ ಸಾಲಮಾಡಿ ಖರ್ಚುಹಾಕಿ ಅವುಗಳನ್ನು ಬೆಳೆಸಿ ಅಭಿವೃದ್ಧಿಗೆ ತಂದಿದ್ದೇವು. ಅಂಥವುಗಳೀಗ ಕೇಂದ್ರಕ್ಕೆ ಹೋಗಿರುವುದರಿಂದ, ಉತ್ಪತ್ತಿಯ ದಾವಸ್ತಾ ಪ್ರಕಾರ ಈ ಇಲಾಖೆಗಳಿಗೆ ಸಂಬಂಧಪಟ್ಟ ದೇಶೀಯ ಬಗ್ಗೆ ಅವರೂ ನಮ್ಮ ಸಹಾಯಕ್ಕೆ ಬರಬೇಕೆಂದು ಹೇಳುತ್ತೇನೆ. ಮಾನ್ಯ ಮಂತ್ರಿಗಳು ತಕ್ಕ ಕಾರ್ಯ ಕ್ರಮ ಕೈಕೊಂಡು ಈ ವಿಷಯವನ್ನು ಸಾಧಿಸುತ್ತಾರೆಂದು ನಂಬಿದ್ದೇನೆ.

ಇನ್ನು ಒಂದೆರಡು ವಿಚಾರಗಳನ್ನು ಮಾತ್ರ ಮಾತನಾಡುವುದಕ್ಕೆ ಅಪೇಕ್ಷೆಪಡುತ್ತೇನೆ. ಬಾಕಿ ವಿಚಾರಗಳೇನಿದ್ದರೂ ಕತ್ತರಿ ನಿರ್ಣಯಗಳ ಸಂಬಂಧದಲ್ಲಿ ಮಾತನಾಡುತ್ತೇನೆ. ಮೊದಲನೆಯದಾಗಿ ನಮ್ಮ ಸರ್ಕಾರದವರು ಅನುಸರಿಸುತ್ತಿರುವ ಪಾನ ನಿರೋಧದ ವಿಚಾರ. ಇದರ ಸಂಬಂಧದಲ್ಲಿ ಈ ಸಭೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳು ಹೊರಪಟ್ಟಿವೆ. ಮಾನ್ಯ ಮಿತ್ರರಾದ ಶ್ರೀ ಸುಬ್ರಹ್ಮಣ್ಯರವರು ಬಹಳ ತೀವ್ರವಾಗಿ ಪಾನ ನಿರೋಧ ನೀತಿ ಎನ್ನು ಎಲ್ಲಾ ಜಿಲ್ಲಾಗಳಲ್ಲೂ ಅನ್ವಯವಾಗುವ ಹಾಗೆ ಮಾಡಬೇಕೆಂದು ಹೇಳಿದ್ದಾರೆ. ಮುಖ್ಯವಾಗಿ ಪಾನನಿರೋಧ ತತ್ವದ ವಿಚಾರದಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಜನಗಳು ಅಮಲೇರುವ ಪದಾರ್ಥಗಳನ್ನು ತಿಂದು ಅಥವಾ ಕುಡಿದು ನೀತಿಗೆಟ್ಟು ಬುದ್ಧಿಗೆಟ್ಟು ಹೋಗಲೆಂದು ಯಾರೂ ಹೇಳುವುದಿಲ್ಲ. ಜನರನ್ನು ಉತ್ತಮ ಮಾರ್ಗಕ್ಕೆ ತರುವುದಕ್ಕೆ, ಉನ್ನತ ಸ್ಥಿತಿಗೆ ತರುವುದಕ್ಕೆ ಸಾಧಕವಾದ ನೀತಿಯನ್ನು ಸರ್ಕಾರ ಅನುಸರಿಸಬೇಕೆಂದು ಎಲ್ಲರೂ ಒಪ್ಪುತ್ತಾರೆ. ಆದರೆ ಈ ನೀತಿಯನ್ನನುಸರಿಸುವುದರಿಂದ ಬೇರೆ ವಿಧದಲ್ಲಿ ಏನು ಪರಿಣಾಮವಾಗುತ್ತಿದೆಯೆಂಬುದನ್ನೂ ಯೋಚನೆ ಮಾಡಬೇಕಾಗಿದೆ. ದುಡ್ಡಿನ ಪರಿಣಾಮವನ್ನು ನಾನು ಯೋಚನೆ ಮಾಡುತ್ತಿದ್ದೇನೆಂದು ಯಾರೂ ಭಾವಿಸಬಾರದು. ಶ್ರೀ ಗುಂಡಪ್ಪಗೌಡರು ಹೇಳಿದ ಹಾಗೆ ಚಿನ್ನದ ಗಣಿಯಿಂದ ಬರುತ್ತಿದ್ದಂಥ ಲಾಭವನ್ನೇ ಬಿಟ್ಟಿದ್ದೇವೆ. ಅದೇ ರೀತಿ ಪಾನ ನಿರೋಧದಿಂದಾಗುವ ನಷ್ಟಕ್ಕೆ ತಕ್ಷಣ ಬೇರೆ ಯಾವ ರೀತಿಯಿಂದಲಾದರೂ ನಮ್ಮ ಉತ್ಪತ್ತಿಯನ್ನು ಹೆಚ್ಚು ಮಾಡಿಕೊಳ್ಳಬಹುದು. ಏನಿದ್ದರೂ, ಪಾನ ನಿರೋಧ ಮಾಡುವುದರಿಂದ ದೇಶದ ಜನರು ಅಮಲೇರುವ ಪದಾರ್ಥಗಳನ್ನು ತಿನ್ನುವುದನ್ನು ಬಿಟ್ಟಿದ್ದಾರೆಯೇ ಎಂಬುದನ್ನು ನೋಡಬೇಕು. ಅನೇಕರಿಗೆ ಗೊತ್ತಿರುವಂತೆ ಈ ಅಮಲೇರುವ ಪದಾರ್ಥಗಳೆಂದರೆ ಕೇವಲ ಹೆಂಡ, ಸಾರಾಯಿ ಮಾತ್ರವೇ ಅಲ್ಲ. ಸಾಮಾನ್ಯ ಪದಾರ್ಥಗಳಾದ ಅಕ್ಕಿ, ಬಾಳೇಹಣ್ಣು, ಕೆಲವು ಮರಗಳ ತೊಗಟೆಯಿಂದಲೂ ಅಮಲೇರುವ ಪಾನಗಳನ್ನು ಮಾಡುತ್ತಾರೆ. ಅಷ್ಟೇಕೆ, ನಾವು ಸಾಮಾನ್ಯವಾಗಿ ನೋಡುವ ಲಾಂಟಾನಗಿಡದ ಹಣ್ಣನ್ನು ತಂದು ಎರಡು ಮೂರು ದಿನ ನೆನೆಹಾಕಿ ಅದರ ಜೊತೆಗೆ ಇನ್ನು ಕೆಲವು ಪದಾರ್ಥಗಳನ್ನು ಸೇರಿಸಿಯೂ ಇದನ್ನು ತಯಾರು ಮಾಡುತ್ತಾರೆಂದು ಕೇಳಿ ತಿಳಿದಿದ್ದೇನೆ. ಅಂದ ಮೇಲೆ, ದುಡ್ಡಿಲ್ಲ, ಕಾಸಿಲ್ಲ, ಯಾರೂ ಈ ಗಿಡಗಳನ್ನು ಬೆಳೆಸಬೇಕಾಗಿಲ್ಲ, ಸುಲಭವಾಗಿ ತಯಾರುಮಾಡಿಕೊಂಡುಬಿಡುತ್ತಾರೆ. ಆದ್ದರಿಂದ ತಾವು ಈ ರೀತಿ ಒಂದು ಕಾನೂನು ಮಾಡಿ ಹೆಂಡ ಕುಡಿಯುವುದನ್ನು ನಿಲ್ಲಿಸಿದರೂ ಈ ಕುಡಿಯುತಕ್ಕ ಜನಗಳು ತಾವು ತಾವೇ ಬೇರೆ ಬೇರೆ ಉಪಾಯಗಳನ್ನು ಕಂಡು ಹಿಡಿದು ಎಷ್ಟೋ ರೀತಿಯಲ್ಲಿ ಅಮಲೇರಿಸಿಕೊಳ್ಳುತ್ತಾರೆ. ಅಂಥ ಪದಾರ್ಥಗಳಿಂದ ಬಹಳ ಕ್ರೂರವಾದ, powerful ಆದ ಅಮಲೋತ್ಪಾದಕ ದ್ರವ್ಯಗಳು (intoxicants) ಉಂಟಾಗುತ್ತವಂತೆ. ಕಳ್ಳಭಟ್ಟಿ ಸಾರಾಯಿ ಶೇಕಡ 97 ರಷ್ಟು ಅಮಲಾಗಿರುವುದಂತೆ. ಇಂಥಾದ್ದನ್ನೆಲ್ಲಾ ಕುಡಿಯಲಿಕ್ಕೆ ಹೊರಟರೆ ಆ ಜನರ ಆರೋಗ್ಯ ಇನ್ನೂ ಕೆಟ್ಟೀತು ಅಷ್ಟೆ. ಹಾಲಿ ಪಾನ ನಿರೋಧ ಜಾರಿಯಲ್ಲಿರುವ ಕಡೆಗಳಲ್ಲಿನ ನಮ್ಮ ಅನುಭವವೇನಿದೆ? ತಮಗೆ ಗೊತ್ತಿರುವ ಹಾಗೆ ಕ್ಲೋಸ್ಪೇಟೆ, ಚನ್ನಪಟ್ಟಣ ತಾಲ್ಲೂಕುಗಳಲ್ಲಿ ಬೇಕಾದಷ್ಟು ಪ್ರಯತ್ನ ನಡೆಸಿದರು. ನಾವೇ ಕಣ್ಣಾರ ನೋಡಿದ್ದೇವೆ. ಹಿಂದೆ ಕಾಂಗ್ರೆಸ್ಸಿನವರು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಪ್ರಚಾರಕ್ಕಾಗಿ ಆ ತಾಲ್ಲೂಕುಗಳಲ್ಲಿ ಪ್ರಚಾರ ಮಾಡುವಾಗ—ಆಗ ನಿಜಲಿಂಗಪ್ಪನವರೂ ಪ್ರವಾಸ ಮಾಡಿದ್ದಾರೆ, ಶ್ರೀ ಸುಬ್ರಹ್ಮಣ್ಯರವರು ಅವರ ಜೊತೆಯಲ್ಲಿದ್ದಂತೆ ಕಾಣುತ್ತೆ—ಆಗ್ಗೆ ನಾವೇ ನೋಡಿದ್ದೇವೆ. ಎಷ್ಟೋ ಜನರು ತಲೆಯ ಮೇಲೆ ಗಡಿಗೆಗಳಲ್ಲಿ ಹೆಂಡ ಹೊತ್ತುಕೊಂಡು ಊರಿಂದ ಊರಿಗೆ ಹೋಗುತ್ತಿದ್ದರು. ಹಾಲು ಮೊಸರು ಹೇಗೆ ಮನೆ ಮನೆಗೂ ಸರಬರಾಯಿಯಾಗುತ್ತಿತ್ತೋ ಹಾಗೆ ಇದೂ ಈಗಲೂ ಸರಬರಾಯಿಯಾಗುತ್ತಿದೆ. ಈ ದಿನ ಚನ್ನಪಟ್ಟಣ ಕ್ಲೋಸ್ಪೇಟೆ ಕಡೆ ಮನೆ ಮನೆಗೂ ತಂದು ಸರಬರಾಯಿ ಮಾಡುತ್ತಿದ್ದಾರೆಂದು ಗೊತ್ತಾಗಿದೆ. ಹೀಗೆ ಏನೇ ಮಾಡಲಿ ಜನರು ಕಳ್ಳತನದಿಂದ ಕುಡಿದೇ ಕುಡಿಯುತ್ತಾರೆ. ಅನಾರೋಗ್ಯಕರ ಅಮಲು ಪದಾರ್ಥಗಳನ್ನು ಮಾಡಿಯೇ ಮಾಡುತ್ತಾರೆ; ಜನರ ಆರೋಗ್ಯ ಕೆಡುತ್ತಿದೆ; ನೀತಿ ಪತನವಾಗುತ್ತಿದೆ: ಮೊದಲು ಕೆಡುತ್ತಿದೆ. ಹೀಗಾಗಿ ಯಾವ ಉದ್ದೇಶ ಸಾಧನೆಗಾಗಿ ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ಹೇಳುತ್ತಿದ್ದೇವೋ ಆ ಉದ್ದೇಶ ಸಾಧನೆಯಾಗುತ್ತಿಲ್ಲ.

ಒಬ್ಬ ಸದಸ್ಯರು.—ಇವು ನಿಮಗೆ ಈಗ ಗೊತ್ತಾಯಿತೋ !

ಶ್ರೀ ಎಚ್. ಕೆ. ವೀರಣ್ಣಗೌಡರು.—ಮತ್ತು ಮೊದಲಿಗಿಂತಲೂ ಹೆಚ್ಚಿಗೆ ಜನರು ನೀತಿಗೆಡುತ್ತಾರೆ. ಆದ್ದರಿಂದ ಪಾನನಿರೋಧವನ್ನು ಜಾರಿಗೆ ತರುವಾಗ ಸ್ವಲ್ಪ ಯೋಚನೆ ಮಾಡಿ ಮಾಡಬೇಕು.

ಈಗ ನಮ್ಮ ದೇಶದ ಜನರು ನೀತಿಯ ಮಟ್ಟ ಇಳಿಯುತ್ತಿದೆಯೆಂಬುದನ್ನು ಯೋಚನೆಮಾಡಬೇಕು. ಆದುದರಿಂದ ಪಾನನಿರೋಧವನ್ನು ಜಾರಿಗೆ ತರುವ ವಿಚಾರವನ್ನು ಯೋಚನೆಮಾಡುವಾಗ ಅದರಿಂದ ಜನರು ಆರೋಗ್ಯವನ್ನು ಹಾಳುಮಾಡಿಕೊಳ್ಳದೇಯಿರುವಹಾಗೆ ಎಷ್ಟು ಮಟ್ಟಿಗೆ ಬಂದೋಬಸ್ತು ಮಾಡುವುದಕ್ಕೆ ನಿಮಗೆ ಅವಕಾಶ ಮತ್ತು ಶಕ್ತಿಯಿದೆಯೋ ಅದನ್ನು ನೋಡಿಕೊಂಡು ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಂಡು ಕೂಲಂಕಷವಾಗಿ ಯೋಚನೆಮಾಡಿ ಮುಂದುವರಿಯಬೇಕೇ ಹೊರತು ಸುಮ್ಮನೆ ಒಂದೇ ಒಂದು ಕಾರಣದಿಂದಲೇ ಆತುರಪಟ್ಟುಕೊಂಡು ಮುಂದುವರಿಯಬೇಕಾಗಿಲ್ಲವೆಂದು ಮಾತ್ರ ನಾನು ಹೇಳುತ್ತೇನೆ.

ಎರಡನೆಯದಾಗಿ, ಮಾನ್ಯ ಸದಸ್ಯರ ಮನಸ್ಸಿಗೆ ಕಳವಳವನ್ನುಂಟುಮಾಡುತ್ತಿರುವ ವಿಷಯವೆಂದರೆ ಆಹಾರಾಭಾವ. ಈ ಸಂಬಂಧವಾಗಿ ಈಗ ನಾವು ಒಂದು ಅಂಶವನ್ನು ಯೋಚನೆ ಮಾಡಬೇಕು. ಮೈಸೂರು ಸಂಸ್ಥಾನ ಸಾಕಾದ ಷ್ಟು ಆಹಾರಸಿಕ್ಕುತ್ತಿಲ್ಲವೆಂದು ಕೇಂದ್ರದಿಂದ ತರಿಸುತ್ತಿದ್ದೇವೆ. ನಾವು ಕೇಳಿದಷ್ಟನ್ನು ಅವರು ಕೊಡುತ್ತಿಲ್ಲವೆಂಬುದು ಎಲ್ಲರಿಗೂ ಗೊತ್ತಿದೆ. ಅಂತೂ ಒಟ್ಟಿನಲ್ಲಿ ಸರ್ಕಾರದವರು ಕೊಡುವ 9 ಔನ್ಸ್ ಆಹಾರದಿಂದ ಜನಕ್ಕೆ ತೃಪ್ತಿಯಾಗುತ್ತಿಲ್ಲ. ಆದರೂ ಯಾವ ಪ್ರದೇಶದಲ್ಲಿಯೂ ಜನರು ಆಹಾರವಿಲ್ಲದೆ ಸತ್ತಿಲ್ಲವೆಂದು ಶ್ರೀಮಾನ್ ಚನ್ನಬಸಪ್ಪನವರು ಹೇಳಿದ್ದಾರೆ.

ಇದರಿಂದ ಏನು ವ್ಯಕ್ತಪಡುತ್ತದೆಂದರೆ, ದೇಶದಲ್ಲಿ ಸಾಕಾದಷ್ಟು ಆಹಾರಪದಾರ್ಥಗಳು ಸಿಕ್ಕದೇಯಿಲ್ಲ. ಹಾಗಿದ್ದರೆ ಈ ಅಭಾವಕ್ಕೆ ಕಾರಣವೇನು? ಹಂಚಿಗೆ ಸರಿಯಾಗಿಲ್ಲದಿರುವುದೇ ಕಾರಣ. ಹೆಚ್ಚು ಬೆಳೆಯುವವರಿಂದ ತೆಗೆದುಕೊಂಡು ಕಡಿಮೆ ಬೆಳೆಯುವವರಿಗೆ ಮತ್ತು ಬೆಳೆಯದೇಯಿರುವವರಿಗೆ ಕೊಡುವ ವಿಚಾರದಲ್ಲಿ ಮಾಡಿರುವ ಏರ್ಪಾಡು ಸರಿಯಾಗಿ ನಡೆಯುತ್ತಿಲ್ಲ, ಇದರಲ್ಲಿ ಲೋಪದೋಷಗಳಿವೆ. ಇದನ್ನು ಸರಿಪಡಿಸಬೇಕಾದರೆ ಸರ್ಕಾರದವರು ಮಾತ್ರ ಪ್ರಯತ್ನಮಾಡಿದರೆ ಸಾಧ್ಯವಾಗುವುದಿಲ್ಲ. ಜನಗಳ ನೈತಿಕಮಟ್ಟ ಹೆಚ್ಚಬೇಕು. ಅಲ್ಲದೆ ಈ ಕಾರ್ಯದಲ್ಲಿ ನಿರತರಾಗಿರುವ ಅಧಿಕಾರವರ್ಗದವರೂ ತಮ್ಮ ನೈತಿಕಮಟ್ಟವನ್ನು ಹೆಚ್ಚಿಸಿಕೊಳ್ಳಬೇಕು. ದೇಶಕ್ಕೆ ಒದಗಿರುವ ವಿಪತ್ತಿನಿಂದ ಪಾರಾಗಬೇಕಾದರೆ, ದೇಶದಲ್ಲಿ ಜನ ಆಹಾರವಿಲ್ಲದೆ ಸಾಯದೇಯಿರುವಂತೆ ಮಾಡಬೇಕಾದರೆ, ಹಂಚಿಕೆಯ ವಿಚಾರದಲ್ಲಿ ಎಲ್ಲರೂ ಪ್ರಾಮಾಣಿಕತೆಯಿಂದ ನಡೆದರೆ ಮಾತ್ರ ಸಾಧ್ಯವಾಗುತ್ತದೆ. ಇದರಿಂದ ಎಲ್ಲರಿಗೂ ಅನುಕೂಲ. ಈ ಬಗ್ಗೆ ಜನರ ಸಹಕಾರ, ಅಧಿಕಾರಿಗಳ ಸಹಕಾರ ಮತ್ತು ಸರ್ಕಾರದ ನೀತಿಯನ್ನು ಪಾಲಿಸುವ ಮನೋಭಾವ ಎಲ್ಲರಲ್ಲಿಯೂ ಬಂದರೆ ಇದು ಸರಿಹೋಗುತ್ತದೆ. ಹಂಚಿಗೆ ವ್ಯವಸ್ಥೆಯನ್ನು ಸರಿಪಡಿಸುವುದರ ಜೊತೆಗೆ ವ್ಯವಸಾಯಾಭಿವೃದ್ಧಿಗೂ ಹೆಚ್ಚು ಗಮನ ಕೊಡಬೇಕು. ಯೋಜನೆಯನ್ನೇನೋ ಸರ್ಕಾರದವರು ಹಾಕಿದ್ದಾರೆ. ನಾನು ಶ್ರೀಮನ್ಮಹಾರಾಜಾವರ ಭಾಷಣದ ಸಂಬಂಧವಾಗಿ ಮಾತನಾಡುವಾಗ ತಿಳಿಸಿದಹಾಗೆ ಹೆಚ್ಚು ಬೆಳೆಯಲು ಜನರ ಮನಸ್ಸಿನಲ್ಲಿ ಉತ್ಸಾಹಹುಟ್ಟುವಂತೆ ರೈತರಿಗೆ ಹೆಚ್ಚು ಅನುಕೂಲಗಳನ್ನು ಒದಗಿಸಬೇಕು. ಅನೇಕ ಮಾನ್ಯ ಸದಸ್ಯರು ಹೇಳಿದಹಾಗೆ ಪಟ್ಟಣಗಳಲ್ಲಿ ಅನುಕೂಲಗಳು ಹೆಚ್ಚಾಗಿರುವುದರಿಂದ ರೈತರು ಪಟ್ಟಣಗಳನ್ನು ಸೇರುತ್ತಿದ್ದಾರೆ. ನಮ್ಮ ಹಿಂದಿನವರು 'ಕೆಟ್ಟು ಪಟ್ಟಣ ಸೇರು' ಎಂದು ಹೇಳುತ್ತಿದ್ದರು. ಹಾಗೆ ಹಳ್ಳಿಗಳಲ್ಲಿ ಅನುಕೂಲ ಕಡಿಮೆಯಾದರೆ ಪಟ್ಟಣಗಳಲ್ಲಿ ಅನುಕೂಲಗಳು, ಸೌಕರ್ಯಜಾಸ್ತಿಯಾಗಿರುವುದನ್ನು ತಿಳಿದು ಹಳ್ಳಿಯವರೆಲ್ಲರೂ ಪಟ್ಟಣಗಳನ್ನು ಸೇರುತ್ತಿದ್ದಾರೆ. ಇದು ತಪ್ಪಿ ವ್ಯವಸಾಯ ಅಭಿವೃದ್ಧಿಯಾಗಬೇಕಾದರೆ ಕೆರೆ, ಬಾವಿಗಳು, ನಾಲೆಗಳನ್ನು ತೋಡಿಸುವುದೂ ಅಲ್ಲದೆ ಹಳ್ಳಿಯ ಜನರು ತಮ್ಮ ಜಮೀನುಗಳ ಮೇಲೆ ನೆಲೆಸುವುದಕ್ಕೆ ಹಳ್ಳಿಗಳಲ್ಲಿ ಅನುಕೂಲಗಳನ್ನು ಪಟ್ಟಣಗಳಿಗಿಂತ ಹೆಚ್ಚಾಗಿ ಮಾಡಿಕೊಡಬೇಕಾಗಿದೆ.

ಇನ್ನೊಂದು ವಿಷಯ. ಹೋಟೆಲುಗಳ ವಿಷಯದಲ್ಲಿ ನಿರ್ಬಂಧಹಾಕಬೇಕಾದುದು ಅಗತ್ಯ. ಪಟ್ಟಣಗಳಲ್ಲಿ ಹೋಟೆಲುಗಳಿಗೆ ಅಗತ್ಯವಿರಬಹುದು. ಆದರೂ ಎರಡೆರಡು ಮನೆಗೂ ಒಂದೊಂದು ಹೋಟೆಲಿದೆ. ಇಷ್ಟು ಹೆಚ್ಚಲು ಅವಕಾಶವಿರಬಾರದು. ಯಾವಯಾವ ಊರಿಗೆ ಎಷ್ಟೆಷ್ಟು ಅಗತ್ಯವಿದೆ ಎಂಬುದನ್ನು ನಿರ್ಧಾರಮಾಡಿ, ಅಲ್ಲಿ ಇಂತಿಂಥಾ ತಿಂಡಿಗಳನ್ನೇ ಮಾಡಬೇಕು ಎಂದು ಗೊತ್ತುಮಾಡುವುದಲ್ಲದೆ ಖರೀದಿಗಳನ್ನೂ ಗೊತ್ತುಮಾಡಿ ಮಿಕ್ಕ ಹೋಟೆಲುಗಳನ್ನು ಮುಚ್ಚುವಂತೆ ಮಾಡಬೇಕು. ಅಲ್ಲದೆ ಹೋಟೆಲುಗಳನ್ನು ಹರಾಜುಹಾಕಿ ಯಾರು ಯಾರು ಹರಾಜಿನಲ್ಲಿ ತೆಗೆದುಕೊಳ್ಳುತ್ತಾರೋ ಅವರು ಮಾತ್ರ ನಡೆಸಬೇಕು ಮಿಕ್ಕವರು ನಡೆಸಬಾರದೆಂದು ಸರ್ಕಾರದವರು ನಿರ್ಬಂಧಮಾಡುವುದು ಅಗತ್ಯ.

ಇನ್ನೊಂದೆರಡು ವಿಚಾರಗಳನ್ನು ಮಾತ್ರ ಹೇಳಿ ಮುಗಿಸುತ್ತೇನೆ. ರೋಡ್ ಟ್ರಾನ್ಸ್‌ಪೋರ್ಟ್ ವಿಚಾರ ಈ ವಿಚಾರದಲ್ಲಿ ಒಂದು ಪೋತಾ ನಿರ್ಣಯವಿದೆ ಅದು ಚರ್ಚೆಗೆ ಬಂದಾಗ ಮಾತನಾಡುತ್ತೇನೆ. ಇದರ ಆಡಳಿತ ಸಡಿಲಮಾಡಿರುವಂತೆ ಕಾಣುತ್ತದೆ. ಹೋದ ವರ್ಷ ಕೇವಲ 9 ಸಾವಿರ ರೂಪಾಯಿ ಉತ್ಪತ್ತಿಯನ್ನು ಈ ಬಾಬಿನಲ್ಲಿ ತೋರಿಸಿದ್ದಾರೆ. ಇದನ್ನು ಸರ್ಕಾರದವರು ನಡೆಸುವುದರಿಂದ ಪ್ರಯೋಜನವಿಲ್ಲವೆಂದು ಕಾಣುವಂತೆ ಆಡಳಿತವನ್ನು ಸಡಿಲಿಸಿ ಇದನ್ನು ಒಂದು ಜಾಯಿಂಟ್‌ಸ್ಟಾಕ್ ಕಂಪೆನಿಗೆ ಕೊಡಬೇಕೆಂದು ಸರ್ಕಾರದ ಉದ್ದೇಶವಿರುವಂತೆ ಕಾಣುತ್ತದೆ ಎಂಬ ಮಾತು ಕೇಳಿಬರುತ್ತಿದೆ. ಹೀಗೆ ಮಾಡಬಾರದು ಇದನ್ನು ಸರ್ಕಾರದವರೇ ಇಟ್ಟುಕೊಂಡು ಮುಂದುವರಿಸಬೇಕು. ಇರುವ ತೊಂದರೆಗಳನ್ನು ತಪ್ಪಿಸಿ, ಲೋಪದೋಷಗಳನ್ನು ಪರಿಹರಿಸಿ ಮುಂದುವರಿಸಿಕೊಂಡು ಹೋಗಬೇಕೆಂಬುದು ನನ್ನ ಅಭಿಪ್ರಾಯ.

ವಿದ್ಯಾಭ್ಯಾಸದ ವಿಚಾರದಲ್ಲಿ ಒಂದು ಮಾತು ಹೇಳಿ ಮುಗಿಸಬೇಕಾಗಿದೆ. ವಿದ್ಯಾಭ್ಯಾಸಕ್ಕೆ ನಾವು ಹೆಚ್ಚು ಹಣ ಖರ್ಚುಮಾಡುತ್ತಿದ್ದೇವೆ. ಇದು ಸದ್ವಿನಿಯೋಗವಾಗುವಂತೆ ನೋಡಬೇಕು. ಕೆಲವರು ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸಕ್ಕೆ ಹೆಚ್ಚು ಖರ್ಚುಮಾಡುವುದು ಸೂಕ್ತವಲ್ಲವೆಂದು ಹೇಳಿದರು. ಇದನ್ನು ಒಪ್ಪುವುದಕ್ಕಾಗುವುದಿಲ್ಲ. ಈಗಿನ ಕಾಲದಲ್ಲಿ ಪ್ರೈಮರಿ ವಿದ್ಯಾಭ್ಯಾಸ, ಹೈಸ್ಕೂಲು ವಿದ್ಯಾಭ್ಯಾಸ ಇಷ್ಟರಿಂದ ಮಾತ್ರ ಹೆಚ್ಚು ಪ್ರಯೋಜನವಿಲ್ಲ. ಇದರಿಂದ ಎಷ್ಟು ಜ್ಞಾನಾರ್ಜನೆಯಾಗಬೇಕೋ ಅಷ್ಟಾಗುವುದಿಲ್ಲ. ಆದುದರಿಂದ ಓದುವುದಕ್ಕೆ ಇಷ್ಟಪಟ್ಟವರಿಗೆ ಮುಂದುವರಿದು ಮೇಲಿನ ಮಟ್ಟದ ವಿದ್ಯಾಭ್ಯಾಸ ಪಡೆಯುವುದಕೆ ಸರ್ಕಾರದವರು ಅನುಕೂಲಮಾಡಬೇಕು. ಅಂದಮಾತ್ರಕ್ಕೇ ಕೆಳದರ್ಜೆಯ ವಿದ್ಯಾಭ್ಯಾಸಕ್ಕೆ ಹೆಚ್ಚು ಹಣ ಕೊಡಬಾರದೆಂಬುದು ನನ್ನ ಅಭಿಪ್ರಾಯವಲ್ಲ.

ಇನ್ನು ಹೊಸ ತೆರಿಗೆಗಳ ವಿಚಾರ. ಆರೋಗ್ಯದ ತೆರಿಗೆ ರೈತರ ಮೇಲೆ ಹೆಚ್ಚಾಗಿ ಬೀಳುತ್ತದೆಂದು ಶ್ರೀಮಾನ್ ಗುಂಡಪ್ಪಗೌಡರು ಹೇಳಿದರು. ಜನರಿಗೆ ಹೆಚ್ಚು ಸೌಕರ್ಯಬೇಕಾದರೆ ಅದನ್ನೂದಗಿಸಲು ಹೆಚ್ಚು ತೆರಿಗೆಹಾಕಬೇಕು. ಆದರೆ ಅಂಥ ತೆರಿಗೆಯನ್ನು ಎಲ್ಲರೂ ಕೊಡುವಂತಿರಬೇಕು ಎಲ್ಲ ತೆರಿಗೆಗಳನ್ನೂ ಭೂಮಿಯ ಮೇಲೆ ಹಾಕುತ್ತಾಹೋದರೆ ಹೇಗೆ? ನಾನು ಇಷ್ಟು ಸೌಕರ್ಯಪಡೆಯುತ್ತೇನೆ, ಅದಕ್ಕೆ ಬದಲಾಗಿ ಇಷ್ಟು ತೆರಿಗೆ ಕೊಡುತ್ತೇನೆ ಎಂದು ನಿರ್ದಿಷ್ಟವಾಗಿ ತಿಳಿಯುವಂತಿರಬೇಕು. ಯಾರು ಸೌಕರ್ಯವನ್ನು ಪಡೆಯುತ್ತಾರೋ ಅವರೆಲ್ಲರೂ ಕೊಡಬೇಕು. ಬರೀ ಭೂಕಂದಾಯದ ಮೇಲೆ ಹಾಕಿ ರೈತರಿಗೆ ಹೊರೆ ಹೊರಿಸುವುದು ಸೂಕ್ತವಲ್ಲ. ಈ ತೆರಿಗೆ ಮೊಹತರ್ಫದ ಮೇಲೂ ಬೀಳುವಂತೆ ಏರ್ಪಾಡುಮಾಡಬೇಕು. ಇದಕ್ಕೆ ಸರ್ಕಾರದವರು ಗಮನಕೊಟ್ಟು ಸೂಕ್ತ ಏರ್ಪಾಡುಮಾಡುತ್ತಾರೆಂದು ನಂಬಿದ್ದೇನೆ.

ಕೊನೆಯದಾಗಿ ನಮ್ಮ ಸಂಸ್ಥಾನದ ಆದಾಯದಲ್ಲಿ ಶೇಕಡ 50ರಷ್ಟು ಅಧಿಕಾರಿಗಳ ಸಂಬಳಕ್ಕೇ ಹೋಗುತ್ತಿದೆ. ಇದ ನ್ಯಾಯವೆ ಎಂದು ಅನೇಕರು ಕೇಳುತ್ತಾರೆ. ಇದು ಬಹಳ ದುಬಾರಿ ವೆಚ್ಚವೆಂದು ಕಾಣುತ್ತದೆ. ಆದರೆ ಜನರಿಗೆ ಅನುಕೂಲ ಹೆಚ್ಚಬೇಕಾದರೆ ಸೇವೆಮಾಡುವ ಜನರ ಸಂಖ್ಯೆ ಹೆಚ್ಚಬೇಕು. ಅದರಿಂದ ಅವರಿಗೆ ಸಂಬಳಕ್ಕಾಗಿ ಹೆಚ್ಚು ಕೊಡಬೇಕು. ವರಮಾನದಲ್ಲಿ ಅರ್ಧದಷ್ಟು ಸಂಬಳಕ್ಕೇ ಹೋಗುವುದು ಸೂಕ್ತವೆ ಎಂಬುದನ್ನು ನೋಡಬೇಕು. ಇದಕ್ಕಾಗಿ ಎಕಾನಮಿ ಆಫೀಸರ ವರದಿಯನ್ನು ಸರ್ಕಾರದವರು ಪರಿಶೀಲನೆಮಾಡುತ್ತಿದ್ದಾರೆ. ಎಷು ಮಟ್ಟಿಗೆ ಖರ್ಚನ್ನು ತಗ್ಗಿಸಬಹುದೋ ಮತ್ತು ಆದಾಯವನ್ನು ಹೆಚ್ಚಿಸಬಹುದೋ ಅದೆಲ್ಲವನ್ನೂ ಪರಿಶೀಲಿಸಿ ತಕ್ಕ ಏರ್ಪಾಡುಮಾಡಬೇಕು.

(ಶ್ರೀ ಎಚ್. ಕೆ. ವೀರಣ್ಣಗೌಡರು).

ಇಷ್ಟು ಹೇಳಿ, ಈ ಬಜೆಟ್ಟು ನಿರಾಶಾದಾಯಕವಾಗಿಲ್ಲ ಆಶಾದಾಯಕವಾಗಿಯೇ ಇದೆ ಎಂದು ಹೇಳಿ ಇದನ್ನು ಸ್ವಾಗತಿಸುತ್ತೇನೆ.

Sri D. H. CHANDRASEKHARAIYA (Chitaldrug District—General).—Mr. Speaker, Sir, I am grateful to you for having given me an opportunity to make a few observations on the Budget estimates placed before us.

Though the Budget has adopted a new classification and new nomenclature this time, yet it is substantially similar to the Budget form we were having till now. Indeed I may mention to this House that our Budget form was revised in the year 1942-43 when I was President of the Legislative Council on the lines suggested by me. This classification apart, what is really more troublesome is the presentation of the Budget in two parts one covering general estimates and the other relating to the postwar development schemes. On account of this, unless we see the two parts and study them together it would not be possible to understand the correct position of the provisions made in the Budget. I wish that this separate presentation will be abandoned as soon as possible and our Budget in its final form will be issued as a consolidated one.

The Budget Estimates have been before this House during the past five days and I for one do not find any serious draw backs in the disposition of our finances for the next year. As we know, the country is passing through a severe financial stress and Mysore is no exception. Again, the funds and resources which had been built up in the past and which could have enabled us to tide over the difficult times have almost ceased to exist. At the same time a popular Government such as ours cannot fail to provide the necessary finances for social progress and economic betterment. And therefore, I am happy to state that our Government have taken note of the available resources and framed a Budget which may be considered to be satisfactory on the whole. I should particularly like to congratulate the Hon'ble Finance Minister on his successful achievement in a situation which is not free from anxiety.

The general position of the State Budget may be looked at from four aspects, namely Revenue Account, capital budget, ways and means estimate and lastly assets and liabilities statement. In the revenue account, normal revenue and normal expenditure have been properly adjusted though a deficit of 37½ lakhs has resulted. It is proposed to meet this deficit by resorting to fresh taxation. I am of opinion that the Government need not have thought of fresh taxation to meet this small gap. It would have been possible to cover this gap by effecting economies and retrenchments wherever possible. These are days when poverty is widely prevailing and therefore any kind of taxation is sure to hit the people very hard. Anyhow, the large provision of Rs. 926 lakhs made for development departments cannot but be a source of great satisfaction to all of us.

Regarding the capital budget which provides for an expenditure of nearly Rs 790 lakhs, I feel that the Government are entering upon an uncertain ground. As we know, the money market has not been favourable for floating new loans. As a matter of fact, even the Government of India were not able to realise their full programme of public debt during the current year and we see no signs of better prospects in the next year. I am mentioning this fact not to discourage our Government to go in for loans but to urge that their efforts should be very strong in order to secure such a large amount of money as Rs. 660 lakhs to meet the capital budget. I am of opinion that our capital programme must be carried out at all costs and should not be kept by for want of money. The large irrigation projects which have already been undertaken, *viz*, the Nugu, the Bhadra and the Tunga Projects must be pushed to further stages and completed as early as possible in order that the State might attain self-sufficiency in food. Next to irrigation, the electricity schemes for which Rs. 416 lakhs have been provided must also be carried out in order to materially help the

economic development of the State. I am sure that the Hon'ble the Law Minister with his usual enthusiasm and drive, will leave no stone unturned to implement the schemes that have been contemplated.

Referring to ways and means estimate which usually provides the necessary finance for capital works outside the Revenue Account, I am of opinion that its scope for releasing money has become very much restricted. I would however urge a closer examination of this estimate to get more money from the several sources included therein.

Lastly, the assets and liabilities statement has not been brought up-to-date to find out their exact position. It only gives the state of our assets and liabilities on 1-4-1950. It was usual to have given the state of assets and liabilities on 1-4-1951 and also on 1-4-1 52. In the absence of this information, I cannot offer any relevant remarks on it.

Before speaking about one or two Departments, I would like to make some general observations in regard to our administration. In the first place, our State has no doubt budgeted for a total expenditure of Rs. 14 crores under normal expenditure of which nearly Rs. 926 lakhs go for nation building departments. The question, however, is whether all this money that we are going to spend will give us proper return. If this huge allotment is well spent and all extravagance and waste are avoided, we may surely get a good return at the end of the year and notice substantial progress in social and economic spheres. Secondly, efficiency in service must be the watch-word of the Government. Although I am not prepared to accept the exaggerated views of my friend Sri Govinda Reddy and one or two others, I still feel that there is great room for improving the efficiency in administration. Fortunately, we have got officers who are good and devoted and are moved by a genuine desire to do their job well, but only they need some sort of encouragement to do their duties without fear or favour and appreciation of their honest service in every way possible. In this connection, I would like to refer to the subordinate service which consists of poorly paid officials. As we all know efficiency of administration depends greatly on their contentment. But the spiral of the rising prices has hit them very hard and their living has become subject to utter misery and hardship. Unless the Government come to their aid and give them living wages they will surely collapse. That is how it looks to me. I have tabled a resolution proposing that the rates of dearness allowance should be raised by not less than fifty per cent and I shall deal with that subject more fully when it comes.

The Hon'ble Sri H. C. DASAPPA.—By 50 per cent?

Sri D. H. CHANDRASEKHARAIYA.—Yes, I have suggested that the existing rates of dearness allowance may be enhanced by 50 per cent.

The Hon'ble Sri H. C. DASAPPA.—Has the Hon'ble Member calculated the cost?

Sri D. H. CHANDRASEKHARAIYA.—Whatever may be the cost it has to be done, if the poor officials are to live.

Mr. SPEAKER.—The Hon'ble Member has tabled a resolution on this matter. He may refer to it when he moves the resolution.

Sri D. H. CHANDRASEKHARAIYA.—Yes. I will not speak more on that now.

Referring to one or two Departments, the Food Department will easily be the first to speak about. Several other members who perhaps know more about the working of the Food Department than myself have already expressed their views and therefore, I will not refer to it at great length. What appears to me very surprising is that our 'Grow More Food' Campaign seems to result only in growing less year after year; otherwise the scarcity of food could not have become so acute. There must be some reasons for this state of affairs and I request the Hon'ble Minister to investigate the matter more fully and find out where exactly we are lacking. There is a general complaint that the ways and methods of the Government are not quite helpful to the ryots in growing food. Though I do not believe

(SRI D. H. CHANDRASEKHARAIYA)

it entirely, yet I urge that it is a matter for proper consideration by the Government. The Government were promising that they would enhance the scale of ration, but on the other hand they have reduced the scale. I do not know whether they have realised how hard the poorer people have been hit by enhancement of the prices and the reduction of the scale of rations. I request the Government to reconsider the matter and at least raise the scale to the level that prevailed previously.

Next to Food, Education ought to claim the foremost attention of the Government and the public. Of course we must congratulate ourselves on the fact that the Government have been able to provide something like Rs. 308 lakhs for education next year. Even there the question is whether we are getting proper return for this huge expenditure and if not, what we should do to get it. The objects and purposes of education are so well known that I need not explain them at length, but we must see that our Ed cational In-titutions are run efficiently so as really to fulfil those purposes and the objects which are approved. For this we want change of existing courses and syllabuses, provision of good text books, trained teachers, im roved methods of teaching, hostel facilities and suitable buildings for the colleges and schools.

Janab SYED ABDUR RAHMAN.—What is the legacy you left behind?

Sri D. H. CHANDRASEKHARAIYA.—I certainly did all that could be done to improve the educational prospects of the State and perhaps even the high standard that I maintained seems to have come down nowadays. Education expanded and steps were initiated to improve its quality. When steady progress was assured, I had to leave my work to be taken up by others. This is by the way. Now, regarding the construction of buildings for primary schools, a special programme was prepared and put into effect in my time. It was Sri H. M. Channabasappa who as President of the Mysore District Board engaged a special Engineering establishment and taking advantage of the new programme built a number of buildings for both Primary Schools and Middle Schools in the Mysore District. If the same interest had been taken in other Districts, perhaps we would have moved a little forward. The provision made for school buildings this time is only Rs. 7 lakhs for the whole State. How many schools could be built out of this? It is a pittance considering the number of buildings to be put up. And then in regard to College buildings, we started Intermediate Colleges in District headquarters, but then they are all run in temporary unsuitable places. Intermediate Colleges require buildings of their own as early as possible. But the provision made for buildings in the University is only Rs. 4 lakhs. We cannot afford to build even one Intermediate College out of this. I strongly urge that this sum should be suitably enhanced so that the construction of buildings for 2 or 3 Intermediate Colleges could be undertaken this year.

In regard to the introduction of vocational education in schools we have not made much progress. For instance there are something like 1,200 Middle Schools of which only 80 have got some sort of industrial or agricultural education. Then amongst the High Schools there may be about half a dozen which have some kind of technical or vocational courses, but the rest are content with only literary education. There is only a single High School for the whole State, *viz*, the one run by Sri G. A. Acharya in Goribidnur, that has provided for agricultural teaching.

Sri W. H. HANUMANTHAPPA.—We have no lands attached to the school.

Sri D. H. CHANDRASEKHARAIYA.—That has to be done. It would not be a difficult matter for the High Schools started by the District Boards in rural parts to obtain lands near them and run agricultural courses. If only Government mind it they could give necessary facilities to the District Boards to start agricultural farms very near their High schools. Such farms will not only help the students to train themselves in Agriculture but also spread agricultural

knowledge in the rural areas of the State.

In the University we have got to provide for diversion of students to professional courses. At present the only two courses which are in great demand, are the Engineering and the Medical courses. I was therefore very glad when the Hon'ble Finance Minister announced that provision had been made for the starting of an Engineering College and a Medical College. But I see from the Budget that only one lakh of rupees have been provided for both the Medical and the Engineering Colleges. What can be done with this small sum? It looks as though the Government are not very serious in starting any of these Colleges next year. I would request the Government to provide adequately to start the promised Engineering College at Davangere. The handsome donation of $1\frac{1}{2}$ lakhs given by two philanthropic-minded gentlemen at Davangere for this purpose is lying idle. It is hoped that the Government would surely take the necessary steps to open the College at Davangere.

During the time I was the Minister in charge of Education I was particularly interested in seeing that three special institutions came into existence. They are (1) the Department of Indology for study and research in Indian Culture and Civilisation, (2) the College of Fine Arts for teaching in Music, Drama, Dancing, Painting, Sculpture, etc., and (3) the College of Physical Education to provide training for teachers in games, sports and physical culture. I am glad to see that the Department of Indology has now come into existence. But steps have to be taken to bring the other two institutions into existence since they play an important part in the physical and mental education of the people.

The Hon'ble Sri H. C. DASAPPA.—Where do you want the College of Physical Education to be located?

(Mr Chairman in the Chair).

Sri D. H. CHANDRASEKHARAIYA.—It may be started anywhere in the State, in Tumkur, Mysore or in Bangalore itself. Several States like Hyderabad, Bombay and Madras have established similar Colleges within their areas. Such a College will give training to our teachers and also organise physical education.

Just a word about the position of Law and Order in the border areas. This was referred to by my Hon'ble friend Sri H. Siddaveerappa yesterday and I associate myself fully with what all he expressed. If armed dacoits raid villages, then the safety and tranquillity of the villages will be virtually at an end. The villagers will become subject to scares and the rural life will be disrupted.

I earnestly hope that prompt and effective steps will be taken to trace and put down such anti-social elements.

Concluding, Mysore has always stood in the vanguard of progress. Let us all unite and work together to make Mysore greater than in the past.

Sri H. C. LINGA REDDY.—There are a number of speakers and on Monday four or five hours may not be sufficient to cover all the speeches. In view of that, time may be restricted to ten or fifteen minutes to each speaker.

Mr. CHAIRMAN.—If the House is agreeable I have no objection.

Sri B. M. SHAMANNA GOWDA (Bangalore Retroceded Area-General).—If the time limit is reduced it would amount to showing partiality and so it should not be reduced.

ಚೇರ್ಮನ್‌ರವರು.—ಈಗ ಒಂದು ಸೂಚನೆ ಬಂದಿದೆ. ಇಲ್ಲಿಯವರೆಗೂ ನಾವು ಪ್ರತಿಯೊಬ್ಬರಿಗೂ 20 ನಿಮಿಷ ಕೊಡುತ್ತಿದ್ದೆವು. ಇನ್ನೂ ಕೆಲವು ಜನ ಸದಸ್ಯರು ಮಾತನಾಡಬೇಕೆಂದಿರುವುದರಿಂದಲೂ, ಕಾಲ ಕಡಿಮೆ ಇರುವುದರಿಂದಲೂ 20 ನಿಮಿಷ ಕೊಡುತ್ತಿರುವುದನ್ನು ಕಡಿಮೆ ಮಾಡಬೇಕೆಂದಿದೆ. ಸಭೆಯವರು ಒಪ್ಪಿದರೆ ಮಾಡಬಹುದು. 20 ನಿಮಿಷವನ್ನು 15 ನಿಮಿಷಕ್ಕೆ ಇಳಿಸಲಾಗುತ್ತದೆ. ಮುಂದೆ ಮಾತನಾಡತಕ್ಕವರು 15 ನಿಮಿಷದಲ್ಲಿ ಮಾತನಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ ನಿಮ್ನ ಪಂಗಡ).—ಅಧ್ಯಕ್ಷ ಮಹಾಶಯರೇ, ನಮ್ಮ ಮುಂದೆ ಇಟ್ಟಿರುವ ಈ ಬಡ್ಜೆಟ್ಟನ್ನು ಹಣಕಾಸಿನ ಸಚಿವರು ಬಹಳ ಚಾಣಿಕ್ಯತನದಿಂದ ತಯಾರು ಮಾಡಿರುವುದರಿಂದ ಇದಕ್ಕೆ ಸ್ವಾಗತವನ್ನು ನೀಡಬೇಕಾಗಿದೆ.

The Hon'ble Sri H. C. DASAPPA.—That expression has to be objected to.

Sri T. SUBRAMANYA.—(Tumkur District—General).—Even "ಚಾಣಿಕ್ಯ ನೀತಿ" is a compliment to the Hon'ble Minister.

Mr. CHAIRMAN.—We will take the intention of the speaker.

The Hon'ble Sri H. C. DASAPPA.—Certainly, Sir.

ಶ್ರೀ ಟಿ. ಹನುಮಯ್ಯನವರು.—ಸ್ವಾಮಿ, ಭಾರತ ದೇಶ ಸ್ವಾತಂತ್ರ್ಯವನ್ನು ಸಂಪಾದಿಸಿ ಮೂರು ವರ್ಷವಾಯಿತು. ಅಮೆರಿಕಾದಲ್ಲಿ ಆಹಾರಕ್ಕೆ ಅಜೀರ್ಣವಾಗುತ್ತಾ ಇದೆ ಭಾರತದಲ್ಲಿ ಉಪವಾಸಮಾಡುತ್ತಾ ಇದ್ದಾರೆ. ಏಕೆಂದರೆ ಭಾರತ ವ್ಯವಸಾಯದ ದೇಶ! ಅಮೆರಿಕಾ ಕೈಗಾರಿಕೆಯ ದೇಶ, ಅಲ್ಲಿ ಜನ 100ಕ್ಕೆ 80 ಭಾಗ ಕೈಗಾರಿಕೆಯಲ್ಲಿ ತೊಡಗಿದ್ದಾರೆ. 20 ಭಾಗ ವ್ಯವಸಾಯಮಾಡುತ್ತಾರೆ. ಅದೇ ಭಾರತದಲ್ಲಿ 80 ಭಾಗದ ಜನರು ವ್ಯವಸಾಯವನ್ನವಲಂಬಿಸಿ 20 ಭಾಗದ ಜನರು ಕೈಗಾರಿಕೆಯನ್ನವಲಂಬಿಸಿದ್ದಾರೆ. ಆದರೂ ಕೂಡ 20 ಭಾಗದ ಜನರಿಗೆ ಆಹಾರವನ್ನೊದಗಿಸಲು ಸಾಧ್ಯವಿಲ್ಲದೇ ಬೇರೆ ದೇಶಗಳಿಗೆ ಆಹಾರಕ್ಕಾಗಿ ಕೈ ಒಡ್ಡುತ್ತಿರುವುದು ಕೇವಲ ನಮ್ಮ ದೇಶಕ್ಕೆ ನಾಚಿಕೆಗೇಡುತನ ಎಂದು ಹೇಳಬೇಕಾಗಿದೆ. ಈ ರೀತಿ ಆಗುವುದಕ್ಕೆ ಕಾರಣ ವ್ಯವಸಾಯ ಮಾಡುವುದರಲ್ಲಿ ತಪ್ಪಿದೆ ಎಂದು ನನ್ನ ಭಾವನೆ. ಗ್ರಾಮಾಂತರಗಳಲ್ಲಿ ನಿಜವಾಗಿಯೂ ಜಮೀನಿರತಕ್ಕವರಿಗೆ ವ್ಯವಸಾಯದ ಮೇಲೆ ವ್ಯಾಮೋಹವಿಲ್ಲ ಹಳ್ಳಿ ಜನಗಳೆಲ್ಲಾ ಪಟ್ಟಣಗಳಿಗೆ ಬರುತ್ತಾರೆ. ಪಟ್ಟಣಗಳಲ್ಲಿ ಸರ್ಕಾರದವರು ದಿನದಿನಕ್ಕೆ ಹೆಚ್ಚಿನ ಒಂದು ಸೌಂದರ್ಯದ ವಾತಾವರಣವನ್ನೇರ್ಪಡಿಸಿ ಜನಗಳು ಪಟ್ಟಣವಾಸಕ್ಕೆ ಬಂದು ಪಟ್ಟಣದ ವ್ಯಾಮೋಹ ಹುಟ್ಟಿದೆ. ಇದನ್ನು ಪರಿಶೀಲನೆ ಮಾಡಿದ್ದೀರಾ? ಗ್ರಾಮಗಳಲ್ಲಿ ಜನಗಳು ನೆಲಸಿ ವ್ಯವಸಾಯ ಅಭಿವೃದ್ಧಿಯಾಗುವಂತೆ ಸರ್ಕಾರದವರ ಮಾಡದಿದ್ದರೆ ಸ್ವಲ್ಪಕಾಲದಲ್ಲೇ ಜನಗಳು ಆಹಾರವೇ ಇಲ್ಲದೆ ಸಾಯುವ ಪರಿಸ್ಥಿತಿಯೂ ಕೂಡ ಬರುತ್ತದೆಂದು ಹೇಳಬೇಕಾಗುತ್ತದೆ. ಗ್ರಾಮಾಂತರಗಳಲ್ಲಿ ಹಿಂದಿನ ಕಾಲದಲ್ಲಿ ವ್ಯವಸಾಯ ಬಹಳ ಹೆಚ್ಚಾಗಿ ನಡೆಯುತ್ತಾ ಇತ್ತು. ಈಗ ಹಳ್ಳಿಗಳಲ್ಲೂ ಕೂಡ ಹೋಟೆಲುಗಳು ಪ್ರಾರಂಭವಾಗಿ ಕಾಫಿ ಕುಡಿಯದೇ ಜನಗಳು ಜಮೀನು ಕೆಲಸಕ್ಕೆ ಹೋಗುವುದೇ ಇಲ್ಲ. ಸರ್ಕಾರದವರು ಪ್ರತಿ ಪಟ್ಟಣದಲ್ಲೂ ಪ್ರತಿಯೊಂದು ಹಳ್ಳಿಯಲ್ಲೂ ಹೋಟೆಲುಗಳಿಗೆ ಲೈಸೆನ್ಸ್ ಕೊಟ್ಟು ಜನಗಳಿಗೆ ವ್ಯವಸಾಯಮಾಡಲು ತುಂಬಾ ಅಡ್ಡಿಯಾಗಿದೆಯೆಂದು ಹೇಳಬೇಕಾಗಿದೆ. ಅಷ್ಟೇ ಅಲ್ಲದೆ ಹೆಚ್ಚು ಆಹಾರ ಬೆಳೆ ಬೆಳೆಯಲು ಲಕ್ಷಾಂತರ ರೂಪಾಯಿ ಸಿಬ್ಬಂದಿ ಮತ್ತು ಪ್ರಚಾರಕ್ಕಾಗಿ ಖರ್ಚಾಗುತ್ತಾ ಇದೆಯೇ ಹೊರತು ಅದರಿಂದ ಏನೂ ಪ್ರಯೋಜನವಾಗಿಲ್ಲ. ದೇಶದಲ್ಲಿ ದಿನದಿನಕ್ಕೆ ಜನಸಂಖ್ಯೆ ಜಾಸ್ತಿಯಾಗುತ್ತಾ ಇದೆ. 10–20–30 ವರ್ಷಗಳಲ್ಲಿ ಎಷ್ಟು ಜಮೀನಿತ್ತೋ, ಇವತ್ತೂ ಅಷ್ಟೇ ಜಮೀನಿದೆ ನವೀನ ರೀತಿಯಲ್ಲಿ ವ್ಯವಸಾಯ ಮಾಡಿ ಹೆಚ್ಚು ಆಹಾರ ಬೆಳೆ ಬೆಳೆಯಲು ಜನಗಳು ಮುಂದೆ ಬಂದರೆ ದೇಶದ ಜನರಿಗೆ ಆಹಾರ ಒದಗಿಸಲಿಕ್ಕೆ ಸಾಧ್ಯವೇ ಹೊರತು ಇಲ್ಲದೇ ಇದ್ದರೆ ಜನಗಳಿಗೆ ಆಹಾರ ಸಿಕ್ಕದೇ ತುಂಬಾ ತೊಂದರೆಯಾಗುತ್ತದೆಂದು ಮನವಿಮಾಡಿಕೊಳ್ಳುತ್ತೇನೆ. ಈಗ 17 ಲಕ್ಷ ಎಕರೆ ಜಮೀನು ಪಾಳುಬಿದ್ದಿದೆ. ಅದರಲ್ಲಿ ಯಾವ ರೀತಿ ವ್ಯವಸಾಯಮಾಡಬೇಕೆಂಬ ಬಗ್ಗೆ ನಿಗದಿಯಾದ ಒಂದು ಕಾರ್ಯಕ್ರಮ ಕೈಗೊಳ್ಳದಿದ್ದರೆ ನಮ್ಮ ದೇಶದ ಪರಿಸ್ಥಿತಿ ಖಂಡಿತವಾಗಿಯೂ ಚಿಂತಾಜನಕವಾಗಿ ಪರಿಣಮಿಸುತ್ತದೆ ಆದ್ದರಿಂದ ಈಗ ವ್ಯವಸಾಯ ಮಾಡುವುದರಲ್ಲಿ ಏನು ನ್ಯೂನತೆ ಇದೆಯೋ ಅದನ್ನು ಸರಿಪಡಿಸಿ ಹೇಗೆ ಆಹಾರದ ಬೆಳೆ ಬೆಳೆಯಬೇಕು ಎಂಬುದನ್ನೆಲ್ಲಾ ಪರಿಶೀಲಿಸಿ, ಸೂಕ್ತ ರೀತಿಯಲ್ಲಿ ಕೆಲಸಕಾರ್ಯಗಳನ್ನು ಮಾಡಲು ವ್ಯವಸಾಯಕ್ಕೆ ಒಬ್ಬ ಮಂತ್ರಿಗಳು ಪ್ರತ್ಯೇಕವಾಗಿರಬೇಕೆಂದು ಸರ್ಕಾರದವರಿಗೆ ಸಲಹೆಕೊಡುತ್ತೇನೆ. ಗ್ರಾಮಾಂತರಗಳಲ್ಲಿ ಜಮೀನಿಲ್ಲದವರಿಗೆ ಜಮೀನು ಸಿಕ್ಕುವುದಿಲ್ಲ. ಜಮೀನಿರತಕ್ಕವರು ಮುತುವರ್ಜಿ ವಹಿಸಿ ವ್ಯವಸಾಯಮಾಡುವುದಿಲ್ಲ. ಸರ್ಕಾರದವರು ಜಮೀನು ಕೊಡುವುದಿಲ್ಲ ಜಮೀನು ಕೊಟ್ಟರೂ, ಸಾಗುವಳಿ ಚೀಟಿ ಮಂಜೂರಾಗಿದ್ದರೂ ಡೆಪ್ಯುಟಿ ಕಮಿಷನರು ಮತ್ತು ರೆವಿನ್ಯೂ ಕಮಿಷನರು ಸ್ಟೇಆರ್ಡರ್ ಕೊಡುತ್ತಾರೆ. ಕಾರಣವೇನೆಂದರೆ ಅನೇಕ ಗ್ರಾಮಗಳಲ್ಲಿ ಗೋಮಾಳ ಸಾಲದೆಂದೋ ಅಥವಾ ಇನ್ನೇನೋ ಹೇಳಿ ತರಲೆ ತಂದು ಸ್ಟೇಆರ್ಡರ್ ತರುತ್ತಾರೆ. ಈ ವಿಷಯಕ್ಕೆ ಸರ್ಕಾರದವರು ನಿಗಾ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇಷ್ಟೇ ಅಲ್ಲದೆ ಜಮೀನು ಕೊಡಬೇಕಾದರೆ ಹಳ್ಳಿಯವರು ಸಲಹೆಕೊಡಬೇಕು; ಸಲಹೆ ಕೊಟ್ಟರೇ ಸರ್ಕಾರದವರು ಜಮೀನು ಕೊಡುತ್ತಾರೆ. ಇದೇನು, ಹಳ್ಳಿಯವರ ಸಲಹೆ ಏಕೆ? ಅವರು ಅನೇಕ ವೇಳೆ ಅನ್ಯಾಯವಾಗಿ ಹೇಳುತ್ತಾರೆ. ಗೋಮಾಳ ಸಾಲದು ಎಂದು ಹೇಳುತ್ತಾರೆ, ಒಪ್ಪಿಕೊಳ್ಳೋಣ. ಇವತ್ತು ಗೋಮಾಳ ಸಾಲದು ಎನ್ನುವವರು ನಾಳೆ ಸ್ವಾಮಿ, ಇದು ಬಹಳ ಒಳ್ಳೆಯ ಜಮೀನು ಇದನ್ನು ಯಾರಿಗೂ ಕೊಡಬಾರದು. ಹರಾಜು ಹಾಕಬೇಕು ಎಂದು ಹೇಳಿ ಹರಾಜಿನಲ್ಲಿ ದುಡ್ಡಿದ್ದವರು ತೆಗೆದುಕೊಳ್ಳುತ್ತಾರೆಯೇ ಹೊರತು ಆದಿಕರ್ನಾಟಕರಿಗಾಗಲೀ ನಿಮ್ನಪಂಗಡದವರಿಗಾಗಲೀ ಜಮೀನು ಸಿಕ್ಕುವುದಿಲ್ಲ. ಹೀಗಾಗುವುದರಿಂದ ಏನಾಗುತ್ತಿದೆ ಎಂದರೆ ಆ ಜಮೀನುಗಳಲ್ಲಿ ವ್ಯವಸಾಯ ಮಾಡಲು ಆಳುಗಳು ಸಿಕ್ಕುವುದಿಲ್ಲ. ಕಾರಣ 10 ವರ್ಷದ ಕೆಳಗೆ ಇದ್ದ ಕೂಲಿ ಎಂದರೆ 4 ಆಣೆ, 8 ಆಣೆ ಕೊಡುತ್ತೇವೆ ಎನ್ನುತ್ತಾರೆ. ಹೀಗಾಗಿ ಜಮೀನಿನಲ್ಲಿ ವ್ಯವಸಾಯವೂ ನಡೆಯುವುದಿಲ್ಲ, ಬಡವರ ಜೀವನಕ್ಕೂ ಕಷ್ಟವುಂಟಾಗಿದೆ. ಆದ್ದರಿಂದ ಸರ್ಕಾರದವರು ಯಾವುದಾದರೂ ಒಂದು ರೀತಿನೀತಿಯ ಕ್ರಮಗಳನ್ನು ಇಟ್ಟುಕೊಳ್ಳಬೇಕು. 'ಹಳ್ಳಿಯಿಂದ ಡೆಲ್ಲಿ' ಎನ್ನುವಹಾಗೆ ಹಳ್ಳಿಗಳ ಉದ್ಧಾರವಾದ ಹೊರತು ದೇಶ ಉದ್ಧಾರವಾಗುವುದಿಲ್ಲ. ಏಕೆಂದರೆ ಪಟ್ಟಣವಾಸದಲ್ಲಿರತಕ್ಕ ಜನಸಂಖ್ಯೆ ಶೇಕಡ 20 ಭಾಗ, ಬಾಕಿ 80 ಭಾಗದ ಜನರು ಹಳ್ಳಿಗಳಲ್ಲಿದ್ದಾರೆ. ಹಳ್ಳಿಗಾಡಿನ ಜನರ ಪುರೋಭಿವೃದ್ಧಿಯೇ ದೇಶದ ಪುರೋಭಿವೃದ್ಧಿಯೆಂದು ತಿಳಿದುಕೊಂಡು ಕೆಲಸಮಾಡಬೇಕು.

ಇನ್ನೊಂದು ಬಹಳ ಆಶ್ಚರ್ಯವಾದ ಅಂಶ. ಏನೆಂದರೆ, ನೀವು ಎಷ್ಟು ಹಣ ಅಲಾಟ್‌ಮಾಡುತ್ತೀರೋ ಅದೆಲ್ಲಾ ಪಟ್ಟಣಗಳಿಗೆ ಖರ್ಚಾಗುತ್ತಾ ಇದೆಯೇ ಹೊರತು ಹಳ್ಳಿಗಾಡುಗಳಿಗೆ ಬಹಳ ಕಮ್ಮಿ. ಅಗ್ರಿಕಲ್ಚರಲ್ ಪರ್ಪಸಸ್‌ಗೆ ಎಷ್ಟು ಲಕ್ಷ ರೂಪಾಯಿ ಅಲಾಟ್‌ಮಾಡಿದ್ದೀರಿ? ಸಿಬ್ಬಂದಿ ಖರ್ಚು ಎಷ್ಟು ಸ್ವಾಮಿ? ಅನಿಮಲ್ ಹಸ್ಬೆಂಡರಿಗೆ ಒಬ್ಬ ಡೈರೆಕ್ಟರು, ಕೋಳಿಗೆ ಒಬ್ಬ ಡೈರೆಕ್ಟರು, ಕುರಿಗೆ ಒಬ್ಬ ಡೈರೆಕ್ಟರು, ಇಷ್ಟೆಲ್ಲಾ ಇದಕ್ಕೆಲ್ಲಾ ಇಷ್ಟೊಂದು ಖರ್ಚಾದರೆ ನಿಜವಾಗಿಯೂ ಹಳ್ಳಿಗಳು ಯಾವ ರೀತಿ ಉದ್ಧಾರವಾಗಬೇಕು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ವಿಷಯದಲ್ಲಿ ಶ್ರೀ ಪುಟ್ಟಸ್ವಾಮಿಯವರ ಪ್ರಶ್ನೆಗೆ ಆಗಲೇ ಉತ್ತರ ಕೊಟ್ಟಿದ್ದೇನೆ.

ಶ್ರೀ ಟಿ. ಹನುಮಯ್ಯನವರು.—ಲಕ್ಷಾಂತರ ರೂಪಾಯಿ ಸಿಬ್ಬಂದಿಗಾಗಿ ಖರ್ಚಾಗುವುದು. ಗ್ರಾಮ ಕೈಗಾರಿಕೆಗಳಿಗೆ ಖರ್ಚಾದರೆ ಅದನ್ನು ತುಂಬಾ ಸ್ವಾಗತಿಸುತ್ತೇನೆ.

ಈಗ ನೋಡಿದರೆ, ಮಹಾತ್ಮಾ ಗಾಂಧಿಯವರು ರಚನಾತ್ಮಕ ಕಾರ್ಯಗಳೆಂದು ಹರಿಜನೋದ್ಧಾರ, ಗ್ರಾಮ ಕೈಗಾರಿಕೆ, ಗ್ರಾಮೋದ್ಧಾರ, ಮುಂತಾಗಿ ಏನೇನು ಹಾಕಿಕೊಟ್ಟಿದ್ದರೋ ಅವು ಯಾವುವೂ ಈಗ ನಡೆಯುತ್ತಿಲ್ಲವೆಂದು ಕಾಣುತ್ತದೆ. ಡೆವಲಪ್‌ಮೆಂಟ್ ಕಮಿಟಿಗಳಿಗೆ ನೀವು ಹಣ ಒದಗಿಸಿರುವುದು ನೋಡಿದರೇ ನಿಮ್ಮ ಉದ್ದೇಶ ವ್ಯಕ್ತಪಡುತ್ತದೆ. ಕೇವಲ 3 ಲಕ್ಷ ರೂಪಾಯಿಗಳನ್ನು ಅದಕ್ಕೆ ಕೊಟ್ಟಿದ್ದಾರೆ. ಇದೇನಿದ್ದರೂ ಛೇರ್ಮನ್ನರ ಸಂಬಳ, ಸದಸ್ಯರ ಭತ್ಯ ಇಷ್ಟಕ್ಕೆ ಖರ್ಚಾಗುತ್ತದೆಯೇ ಹೊರತು ಹಳ್ಳಿಗಳ ರಸ್ತೆ, ಬಾವಿ ಮತ್ತೊಂದು ಮಗದೊಂದು ಯಾವ ಕೆಲಸಕ್ಕೂ ಬರುವುದಿಲ್ಲ.

A MEMBER.—It is very much less than for Select Committees!

ಶ್ರೀ ಟಿ. ಹನುಮಯ್ಯನವರು.—ಅಂತೂ ಹಳ್ಳಿಗಳ ಉದ್ಧಾರಕ್ಕೆಂದು ಮಹಾತ್ಮಾ ಗಾಂಧಿಯವರು ಏನು ರಚನಾತ್ಮಕ ಕಾರ್ಯಗಳನ್ನು ಹಾಕಿಕೊಟ್ಟಿದ್ದರೋ ಅವೆಲ್ಲೂ ನಡೆಯುತ್ತಿಲ್ಲವೆಂದು ನನ್ನ ಭಾವನೆ.

ಈ ಸಂದರ್ಭದಲ್ಲಿ ಖಾದಿಯ ವಿಷಯವನ್ನು ನೋಡಿ ವ್ಯಸನವಾಗುತ್ತದೆ. ಗ್ರಾಮಕೈಗಾರಿಕೆಯೆಂದರೆ ಖಾದಿ, ಖಾದಿ ಎಂದು ಮಹಾತ್ಮಾ ಗಾಂಧಿಯವರು ಹೇಳುತ್ತಿದ್ದರು. ಸ್ವಾತಂತ್ರ್ಯ ಬಂದಿದೆ. ಇಂಥಾ ಕಾಲದಲ್ಲಿಯೂ ಕೂಡ ಖಾದಿಗೆ ನೀವು ಕೊಟ್ಟಿರುವುದು 20,000 ರೂಪಾಯಿ. ಯಾವುದಾದರೂ ಟೆಕ್ಸ್‌ಟೈಲ್ ಕಂಪೆನಿ ಷುರು ಮಾಡುತ್ತೇವೆಂದು ಹೇಳಿದರೆ 10 ಲಕ್ಷ, ಇಪ್ಪತ್ತು ಲಕ್ಷ ರೂಪಾಯಿಗಳನ್ನು ಬೇಕಾದರೂ ಸಾಲ ಕೊಡುತ್ತೀರಿ. ಖಾದಿಯನ್ನು ಪ್ರೋತ್ಸಾಹಿಸಬೇಕೆಂದರೆ ಪ್ರತಿಯೊಂದು ಮನೆ ಮನೆಗೂ ಕೊಡಬೇಕು, ಎಲ್ಲರಿಗೂ ಚರಕಗಳನ್ನು ಒದಗಿಸಿ ಕೊಡಬೇಕಾಗಿದೆ. ಇಂಥಾದಕ್ಕೆ ನೀವು ಕೊಟ್ಟಿರುವುದು 20,000 ರೂಪಾಯಿ, ಇದು ನಿಜವಾಗಿಯೂ ಬಹಳ ಕಡಿಮೆ. ಖಾದಿ ಧರಿಸುವವರಿಗೇ ಖಾದಿ ಸರಿಯಾಗಿ ಸಿಕ್ಕದೆ ಈಗ ಮಿಲ್ ಪಂಚೆಗಳನ್ನು ಉಡಬೇಕಾಗಿ ಬಂದಿದೆ. ಅದೂ ಸಕಾಲದಲ್ಲಿ ಖಾದಿ ಪಂಚೆ ಗಿಂತ ಮಿಲ್ ಪಂಚೆಗಳಿಗೇ ಬೆಲೆ ಕಮ್ಮಿಯಾಗಿದೆ. ಖಾದಿ ಪಂಚೆಗಳಿಗೆ 20 ರೂಪಾಯಿಗಳಾದರೆ ಮಿಲ್ ಪಂಚೆಗಳಿಗೆ 30 ರೂಪಾಯಿಯಾಗಿದೆ. ಹೀಗಾಗಿ ಅನೇಕರು ಖಾದಿಯ ಕಡೆಗೆ ತಿರುಗಿ, ಈಗ ನಿಜವಾಗಿ ಖಾದಿ ಉಡುವವರಿಗೇ ಖಾದಿ ಸಿಕ್ಕದಂತಾಗಿದೆ. ಟೆಕ್ಸ್‌ಟೈಲ್ ಕಂಪೆನಿಗಳವರಿಗೆ ಧಾರಾಳವಾಗಿ ದುಡ್ಡು ಕೊಟ್ಟು ಒಬ್ಬರನ್ನು ಐಶ್ವರ್ಯವಂತರನ್ನಾಗಿ ಮಾಡುವುದರ ಬದಲು, ಪ್ರತಿಯೊಂದು ಗ್ರಾಮಕ್ಕೂ ಗ್ರಾಂಟು ಹೆಚ್ಚಿಗೆ ಕೊಟ್ಟು ಖಾದಿ ನೂಲುವವರಿಗೆ, ನೇಯುವವರಿಗೆ ಹೆಚ್ಚಿಗೆ ಪ್ರೋತ್ಸಾಹ ಕೊಡಿ. ಇಂಥಾದ್ದಕ್ಕೆ 20 ಲಕ್ಷ ರೂಪಾಯಿಗಳಲ್ಲ, 30 ಲಕ್ಷ ರೂಪಾಯಿಗಳನ್ನು ಕೊಟ್ಟರೂ ಬೇಡವೆನ್ನುವುದಿಲ್ಲ. ಹೀಗಿರುವಲ್ಲಿ ಕೇವಲ 20,000 ರೂಪಾಯಿಗಳನ್ನು ಕೊಟ್ಟಿರುವುದು ಎಷ್ಟು ಮಾತ್ರವೂ ಆಶಾದಾಯಕವಾಗಿಲ್ಲವೆಂದು ಹೇಳಬೇಕಾಗಿದೆ.

ಎರಡನೆಯದಾಗಿ, ಈ ದೇಶದಲ್ಲಿ ಮಹಾತ್ಮಾ ಗಾಂಧಿಯವರು ಎಲ್ಲಿ ಹೋದರೂ ಹರಿಜನ ಕೇರಿಗೆ ಹೋಗಿ ನೋಡದೆ ಇರುತ್ತಿರಲಿಲ್ಲ, ಹರಿಜನೋದ್ಧಾರ ಮಾಡಬೇಕು; ದೇಶದ ಪ್ರಜೆಗಳಲ್ಲಿ ¼ ಭಾಗದಷ್ಟು ಹರಿಜನರಿದ್ದಾರೆ; ಅವರ ಉದ್ಧಾರವಾಗದೆ ಹೋದರೆ ದೇಶ ಉದ್ಧಾರವಾಗುವುದಿಲ್ಲವೆಂದು ಅವರು ಹೇಳುತ್ತಿದ್ದರು. ನೀವುಗಳೂ ಇನ್ನು ಹತ್ತು ವರ್ಷದಲ್ಲಿ ಹರಿಜನರನ್ನು ಮುಂದಕ್ಕೆ ತರಬೇಕೆಂದು ರಾಜ್ಯಾಂಗದ ಪ್ರಕಾರ ಅಭಿಪ್ರಾಯ ಪಟ್ಟಿದ್ದೀರಿ. ಈ ಹತ್ತು ವರ್ಷಗಳಲ್ಲಿ ಒಂದು ವರ್ಷ ಈಗಾಗಲೇ ಪೂರೈಸಿತು. ಇದೇ ರೀತಿಯಾದರೆ ಇನ್ನು ಒಂಭತ್ತು ವರ್ಷಗಳಲ್ಲಿ ಏನಾದೀತು? ಹರಿಜನೋದ್ಧಾರ ಮಾಡುತ್ತೇವೆ, ಹರಿಜನರನ್ನು ಮುಂದಕ್ಕೆ ತರುತ್ತೇವೆಂದು ಕಾನೂನು ಮಾಡಿ ಬಿಟ್ಟರೇ ಆಯಿತೇ? ಇವತ್ತಿಗೂ ಗ್ರಾಮಾಂತರಗಳಲ್ಲಿ ನೀವು ಮಾಡಿರುವ ಸಿವಿಲ್ ಡಿಸ್‌ಎಬಿಲಿಟೀಸ್ ಕಾನೂನು, ದೇವಸ್ಥಾನಗಳ ಮುಂದೆ ಪ್ರಾಣಿವಧೆ ಮಾಡುವುದನ್ನು ನಿರೋಧಿಸುವ ಕಾನೂನು, ಹರಿಜನರ ದೇವಾಲಯ ಪ್ರವೇಶದ ಕಾನೂನು ನಡೆಯುತ್ತಿವೆಯೇ? ಕೋಳಿ, ಕುರಿ, ಕೋಣಗಳು ಇಂದಿಗೂ ದೇವರ ಹೆಸರಿನಲ್ಲಿ ವಧೆ ಮಾಡಲ್ಪಡುತ್ತಲೇ ಇವೆ, ಸರ್ಕಾರದವರಿಗೆ ಇವು ಗೊತ್ತಾಗುತ್ತವೆಯೋ ಇಲ್ಲವೋ ಗೊತ್ತಿಲ್ಲ. ಗ್ರಾಮಾಭಿವೃದ್ಧಿ ಬಾಬಿನಲ್ಲಿ ಗ್ರಾಮಗಳಲ್ಲಿ ಕುಡಿಯುವ ನೀರಿನ ಬಾವಿಗಳಿಗಾಗಿ 12 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇವತ್ತಿಗೂ ಕೂಡ ಹರಿಜನರಿಗಾಗಿ ಎಷ್ಟು ಬಾವಿಗಳನ್ನು ತೆಗಿಸಿಕೊಟ್ಟಿದ್ದೀರಿ? ನಿಮ್ಮ ವರ್ಗದವರು ಇತರೇ ವರ್ಗದವರ ಬಾವಿಗಳಿಗೆ ಹೋಗಲು ಇವತ್ತಿಗೂ ಅವಕಾಶವಿಲ್ಲವಾಗಿದೆ. ಇತರೇ ಕೋಮಿನವರ ಬಾವಿಗಳಿಗಾದರೂ ಹೋಗುವುದಕ್ಕೆ ಅವರಿಗೆ ಅವಕಾಶ ಮಾಡಿಕೊಡಬೇಕು, ಇಲ್ಲದಿದ್ದರೆ ಅವರಿಗೇ ಬೇರೆ ಬಾವಿ ತೆಗಿಸಿಕೊಡಬೇಕು. ಮಾನ್ಯ ಮಂತ್ರಿಗಳು ಎಷ್ಟೋ ಕಡೆ ಪ್ರವಾಸ ಮಾಡಿ ನೋಡಿದ್ದೀರಲ್ಲಾ, ಎಷ್ಟು ಕಡೆ ಹರಿಜನರಿಗೆ ಮಿಕ್ಕವರ ಬಾವಿಗಳಲ್ಲಿ ನೀರನ್ನು ತೆಗೆದುಕೊಳ್ಳುವ ಸೌಲಭ್ಯ ಕಲ್ಪಿಸಿಕೊಡುವ ಏರ್ಪಾಡು ಮಾಡಿದ್ದೀರಿ? ಅಥವಾ ಬೇರೆ ಬಾವಿಗಳನ್ನಾದರೂ ಅವರಿಗೆ ತೆಗೆಸಿಕೊಟ್ಟಿದ್ದೀರಾ? ಒಂದು ಉದಾಹರಣೆ ಕೊಡುವುದಾದರೆ ನಮ್ಮ ಡಿಸ್ಟ್ರಿಕ್ಟಿನಲ್ಲಿ ಕೊಡಗನೂರು ಎಂಬಲ್ಲಿ ಒಂದು ದೊಡ್ಡ ಬಾವಿಯಿದೆ. ಒಂದು ಹೊಂಡವಿದ್ದ ಹಾಗಿದೆ. ದನ ಕುರಿಗಳನ್ನು ನೀರು ಕುಡಿಯುವುದಕ್ಕೆ ಅಲ್ಲಿಗೆ ಬಿಡುತ್ತಾರೆ, ಆದರೆ ಮಾತ್ರ ಹರಿಜನರಿಗೆ ಇಂದಿಗೂ ಅಲ್ಲಿ ಅವಕಾಶವಿಲ್ಲ. ಈ ಪ್ರಕಾರ ದೇಶದಲ್ಲಿ ಏನು ಕಾನೂನು ಮಾಡಿದರೂ ಆ ಜನರಿಗೆ ಅದರ ಸಹಾಯ ದೊರೆಯುತ್ತಿಲ್ಲ. ಈ ವಿಷಯದಲ್ಲಿ ಹೆಚ್ಚು ಪ್ರಚಾರವನ್ನಾದರೂ ಕೈಕೊಂಡು, ದೇಶದಲ್ಲಿ ಸಮಾಜದಲ್ಲಿ ಇಂಥ ಕಳಂಕವಿರಬಾರದು, ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಸಮಾನಹಕ್ಕುಗಳಿವೆ, ಎಲ್ಲರೂ ಅಭಿವೃದ್ಧಿಗೆ ಬರುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಎಲ್ಲರಿಗೂ ತಿಳಿಯಪಡಿಸಿಕೊಡಬೇಕು. ಹಾಗಿಲ್ಲದೆ ಸುಮ್ಮನೆ ಕಾನೂನು ಮಾಡಿಬಿಟ್ಟರೆ ಹರಿಜನರಿಗೆ ಏನೂ ಸಹಾಯ ಮಾಡಿದಂತಾಗುವುದಿಲ್ಲ. ಆದ್ದರಿಂದ ಹರಿಜನರಿಗೆ ಪ್ರತ್ಯೇಕವಾಗಿ ಬಾವಿಗಳನ್ನು ತೋಡಿಸಿಕೊಡುವುದಕ್ಕಾಗಿ ಹೆಚ್ಚಿಗೆ ಹಣ ಒದಗಿಸುವ ಏರ್ಪಾಡು ಮಾಡಬೇಕು. ಇಲ್ಲದಿದ್ದರೆ ಸಾಕಾದಷ್ಟು ಪ್ರಚಾರ ನಡೆಸಿ ಎಲ್ಲಾ ಕಡೆಗಳಲ್ಲಿಯೂ ಹರಿಜನರಿಗೆ ಮಿಕ್ಕ ಕೋಮಿನವರ ಬಾವಿಗಳಿಗೆ ಅವಕಾಶವಿರುವಂತಾದರೂ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಪಾನನಿರೋಧದ ವಿಚಾರ. ಶ್ರೀ ಎಚ್. ಕೆ. ವೀರಣ್ಣಗೌಡರು ಮಾತನಾಡುತ್ತಾ ಪಾನನಿರೋಧವನ್ನು ನಿಧಾನವಾಗಿ ಮಾಡಬೇಕೆಂದು ಹೇಳಿದರು. ನಾನಿದನ್ನು ಎಷ್ಟು ಮಾತ್ರವೂ ಒಪ್ಪುವುದಿಲ್ಲ. ಈಗ ನೀವು ಜಾರಿಗೆ ತಂದಿರುವ 4-5 ಡಿಸ್ಟ್ರಿಕ್ಟ್‌ಗಳಲ್ಲಿ ಪಾನನಿರೋಧ ಜಾರಿಗೆ ಬಂದು ಒಳ್ಳೆಯ ಪರಿಣಾಮವನ್ನೇ ಉಂಟುಮಾಡಿದೆ. ಅಲ್ಲಿ ಈಗ ಹರಿಜನರೇ ಆಗಲಿ, ಕೂಲಿಗಾರರೇ ಆಗಲಿ ವ್ಯವಸಾಯಗಾರರೇ ಆಗಲೀ ಯಾರೂ ಕುಡಿಯುತ್ತಿಲ್ಲ. ಕುಡಿತ ಬಹಳಮಟ್ಟಿಗೆ ತಪ್ಪಿ ಆ ಬಡ ಜನರು ಸುಖದಿಂದ, ಆನಂದದಿಂದಿದ್ದಾರೆ. ಅವರಾರೂ ಸೇಂದಿ ಮತ್ತೆ ಬರಬೇಕೆಂದು ಕೇಳುವುದಿಲ್ಲ.

(ಶ್ರೀ ಟಿ. ಹನುಮಯ್ಯನವರು).

ಆದ್ದರಿಂದ ನೀವು ಒಂದು ಹೆಜ್ಜೆ ಮುಂದಿಟ್ಟವರು ಈಗ ಪುನಃ ಹಿಂದಕ್ಕೆ ತೆಗೆದುಕೊಳ್ಳುವ ಅವಶ್ಯಕತೆಯಿಲ್ಲ. ಇಂದು 5 ಡಿಸ್ಟ್ರಿಕ್ಟುಗಳಲ್ಲಾಗಲೇ ಜಾರಿಗೆ ತಂದು ಬಹಳಮಟ್ಟಿಗೆ ಯಶಸ್ವಿಯಾಗಿದ್ದೀರಿ. ಹೀಗೆಯೇ ಪ್ರತಿಯೊಂದು ವರ್ಷವೂ ಮುಂದೆಹೋಗಿ ಎಲ್ಲಾ ಕಡೆಗಳಲ್ಲೂ ಜಾರಿಗೆ ತನ್ನಿ. ಖಂಡಿತವಾಗಿಯೂ ಅವಿದ್ಯಾವಂತರಿಂದ ತಿಳುವಳಿಕೆ ಇಲ್ಲದವರಿಂದ, ಬಡಜನರಿಂದ ದುಡ್ಡು ತೆಗೆದುಕೊಂಡು ರಾಜ್ಯಭಾರ ಮಾಡುವುದು ನಮಗೆ ಬೇಕಾಗಿಲ್ಲ. ಲಕ್ಷಾಂತರ ರೂಪಾಯಿಗಳನ್ನು ದುಡಿಯುವವರು ಶೇಂದಿ ಕಂಟ್ರಾಕ್ಟರುಗಳು ಏನೇ ಹೇಳಲಿ, ಇದನ್ನು ಕೈಬಿಡಬೇಡಿ. ಶೇಂದಿ ಹರಾಜುಮಾಡಿ ಹಣ ಸಂಪಾದನೆ ಮಾಡಬೇಕೆನ್ನುವುದಕ್ಕಿಂತ ಹೋಟಲುಗಳನ್ನು, ಸಿನಿಮಾಗಳನ್ನು ಹರಾಜುಮಾಡಿ, ಇನ್ನೂ ಬೇಕಾದಷ್ಟು ದುಡ್ಡು ಬರುತ್ತದೆ. ಹೆಚ್ಚಿಗೆ ದುಡ್ಡು ಸಂಪಾದನೆ ಮಾಡುವವರಿಂದ ದುಡ್ಡುತೆಗೆದುಕೊಳ್ಳುವುದನ್ನು ಯಾರೂ ಬೇಡವೆನ್ನುವುದಿಲ್ಲ. ಅದು ಬಿಟ್ಟು ಏನೂ ಅರಿಯದ ಬಡಜನರಿಂದ ಹೀಗೆ ಹಣ ಗಳಿಸುವುದು ಪಾಪಕರ. ದೇಶದಲ್ಲಿ ನೀತಿಯ ಮಟ್ಟ ಹೆಚ್ಚಬೇಕು. ಇಲ್ಲದಿದ್ದರೆ ದೇಶ ಮುಂದುವರಿಯುವುದಿಲ್ಲ. ಜನರೆಲ್ಲರೂ ನೀತಿ ಮಾರ್ಗವನ್ನು ಹಿಡಿಯುವಂತೆ ಮಾಡಬೇಕು. ಜನರು ವಿದ್ಯಾವಂತರಾಗಿ, ನೀತಿವಂತರಾಗಿ ಆರೋಗ್ಯವಂತರಾಗಿದ್ದರೇನೇ ದೇಶ ಮುಂದಕ್ಕೆ ಬರುವುದಕ್ಕೆ ಸಾಧ್ಯ. ಆದ್ದರಿಂದ ಹೆಚ್ಚಿಗೆ ಸಿಗಾ ಕೊಟ್ಟು ಇನ್ನೂ ಕೂಡ ವರ್ಷ ವರ್ಷವೂ ಎರಡೆರಡು ಡಿಸ್ಟ್ರಿಕ್ಟುಗಳಿಗೆ ಪಾನನಿರೋಧವನ್ನು ಮುಂದುವರಿಸುತ್ತೀರೆಂದು ನಂಬಿದ್ದೇನೆ.

ಶ್ರೀ ಟಿ. ಸಿ. ಹೊನ್ನಪ್ಪನವರು (ಮೈಸೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದಿರತಕ್ಕ ಬಡ್ಜೆಟ್ಟಿನ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರು ನಾನಾ ಅಂಕಿ ಅಂಶಗಳನ್ನು ವಿವರಿಸಿದ್ದಾರೆ. ನಾನೂ ಕೂಡ ನನಗಿರತಕ್ಕ 15 ನಿಮಿಷಗಳ ಅಲ್ಪ ಕಾಲವನ್ನು ಉಪಯೋಗಿಸಿಕೊಂಡು ಅಂಕಿ ಲೆಕ್ಕಗಳನ್ನು ಬಿಟ್ಟು ಕೆಲವು ವಿಚಾರಗಳನ್ನು ಮಾತ್ರ ಪ್ರಸ್ತಾಪಿಸಿ ಮುಗಿಸಲಿಚ್ಛಿಸುತ್ತೇನೆ.

ನಮ್ಮ ಮೈಸೂರು ದೇಶ ಸ್ವರಾಜ್ಯ ಬರುವುದಕ್ಕೆ ಮೊದಲು ಯಾವಸ್ಥಿತಿಯಲ್ಲಿತ್ತು ಮತ್ತು ಈಗ ಸ್ವರಾಜ್ಯ ಬಂದ ಮೇಲೆ ಏನಾಗಿದೆಯೆಂಬ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಮಾತ್ರ ಹೇಳುತ್ತೇನೆ. ನಮ್ಮ ಮೈಸೂರು ದೇಶಕ್ಕೆ ಎರಡನೆಯ ಗಾಂಧಿಯವರೆನಿಸಿಕೊಂಡಿದ್ದಂಥ ನಮ್ಮ ಮಾನ್ಯ ಹಣಕಾಸಿನ ಸಚಿವರು—ನಿಜವಾಗಿಯೂ ಹಿಂದೆ ಜನರೆಲ್ಲರೂ ಅವರನ್ನು ಹಾಗೆಯೇ ಹೊಗಳುತ್ತಿದ್ದರು—ಅಂಥಾ ಮಾನ್ಯ ಸಚಿವರು ತಯಾರು ಮಾಡಿದಂಥ ಈ ಬಡ್ಜೆಟ್ಟನ್ನು ನೋಡಿದರೆ ಇಂದು ಏನೆನಿಸುತ್ತದೆಯೆಂದರೆ, ದೇಶದ ಪ್ರಜೆಗಳ ಹಿತರಕ್ಷಣೆಯಲ್ಲಿ ಒಂದಾನೊಂದು ಕಾಲದಲ್ಲಿ ಮುಖ್ಯಪಾತ್ರವನ್ನು ವಹಿಸಿದಂಥ ಅವರು ಇಂದು ದಿನೇದಿನೇ ಹೆಚ್ಚಿನ ತೆರಿಗೆಯ ಹೊರೆಯನ್ನು ಅಧಿಕವಾಗಿ ಹೊರಿಸುವ ಮಸೂದೆಗಳನ್ನು ತಂದದ್ದಲ್ಲದೆ ಮಂತ್ರಿಮಂಡಳದ ಕಾರ್ಯ ಭಾಗಗಳಲ್ಲಿ ಸಂಬಂಧಿಸಿರುವವರಾಗಿಯೂ ಕೂಡ ತಮ್ಮ ಅನುಮೋದನೆಯನ್ನು ಕೊಟ್ಟರಲ್ಲಾ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಹೀಗೆಯೇ ಮುಂದುವರಿಯುತ್ತಾ ದೇಶದ ಹಣಕಾಸಿನ ವಿಚಕ್ಷಣೆಯನ್ನು ನೋಡುವುದಾದರೆ ತೆರಿಗೆಗಳೆನ್ನುವುದು ಪ್ರತಿವರ್ಷವೂ ಹೆಚ್ಚುತ್ತಲೇ ಹೋಗುತ್ತಿದೆ. ಅದೇ ರೀತಿ ಸಂಬಳ ಸಾರಿಗೆಗಳನ್ನು ಹೆಚ್ಚಿಸುವುದಕ್ಕೇನಾದರೂ ನಮ್ಮ ಸರ್ಕಾರದವರ ಮನಸ್ಸು ಬಂತೇ? ಹಿಂದೆ ಸಂಬಳಗಳ ವಿಚಾರದಲ್ಲಿ ಅವರೇನು ಹೇಳುತ್ತಿದ್ದರು? 500 ರೂಪಾಯಿಗಳಿಗೆ ಮೇಲ್ಪಟ್ಟು ಯಾವ ದಿವಾನರವರಿಗೇ ಆಗಲಿ, ಮಂತ್ರಿಗಳಿಗೇ ಆಗಲೀ ಇರಕೂಡದೆಂದು ಹೇಳುತ್ತಿದ್ದರು.

ಒಬ್ಬ ಸದಸ್ಯರು.—ಆಗಿನ 500 ರೂಪಾಯಿ !!

ಶ್ರೀ ಟಿ. ಸಿ. ಹೊನ್ನಪ್ಪನವರು.—ಆಗಿನ 500 ರೂಪಾಯಿಯಾದರೂ, ಅದನ್ನು ಈಗಿನ ಕಾಲಕ್ಕೆ ತಕ್ಕಂತೆ ಲೆಕ್ಕಹಾಕಿ, ಒಬ್ಬರ ಜೀವನಕ್ಕೆ 800 ರೂಪಾಯಿಗಳಿದ್ದರೆ ಸಾಕೆಂದು ಲೆಕ್ಕಹಾಕಿ ಮಾನ್ಯ ಮಂತ್ರಿಗಳೇನೋ 800 ರೂಪಾಯಿಗಳನ್ನೇ ತೆಗೆದುಕೊಂಡು ಆತ್ಮಶುದ್ಧಿ ಮಾಡಿಕೊಂಡಿರಿ; ಆದರೆ ದೇಶದ ಆಡಳಿತ ಜವಾಬ್ದಾರಿಯ ಕೆಲಸದಲ್ಲಿ ಮಾತ್ರ ತಮ್ಮ ನೀತಿಯನ್ನು ಕೈಬಿಟ್ಟಿರೆಂದು ನಾನು ಹೇಳುತ್ತೇನೆ.

ಈ ಹೊತ್ತು ನಮ್ಮ ದೇಶದಲ್ಲಿ ತಿಂಗಳಿಗೆ 15 ರೂಪಾಯಿ ಸಂಬಳದಿಂದ ಹಿಡಿದು 2,000 ರೂಪಾಯಿನವರೆಗೂ ಏತಕ್ಕೆ ಕೊಟ್ಟಿದ್ದಾರೆ? ಈಚೆಗೆ ಗ್ರೇಡುಗಳನ್ನು ಪುನರ್ವಿಮರ್ಶೆಮಾಡಿ ಅಲೋಕೇಟ್ ಮಾಡುವಾಗಲಾದರೂ ಈಗಿನ ಪರಿಸ್ಥಿತಿಯಲ್ಲಿ ಯಾವ ಯಾವ ಜನರಿಗೆ ಜೀವನಕ್ಕೆ ಎಷ್ಟೆಷ್ಟು ಬೇಕಾಗುತ್ತದೆಯೆಂಬುದನ್ನು ಯೋಚಿಸಿ ನೋಡಿ ಅಷ್ಟಷ್ಟು ಸಂಬಳಗಳನ್ನು ಕೊಡಬೇಕೆಂಬುದು ಏಕೆ ಸರ್ಕಾರದವರ ಮನಸ್ಸಿಗೆ ಬರಲಿಲ್ಲ? ಎಲ್ಲರನ್ನೂ ನಿರ್ಮಾಣಮಾಡಿರುವ ದೇವರು ಒಂದು ಪಾವಕ್ಕಿ ಮೇಲೆ ಯಾರೂ ತಿನ್ನಬಾರದೆಂದು ಗೊತ್ತುಮಾಡಿದ್ದಾನೆ. ಹೀಗಿದ್ದರೂ ಈ ಹೊತ್ತು ನಮ್ಮ ಸರ್ಕಾರ, ಶಾಸನ ಸಭೆ ಇದಕ್ಕೆ ವ್ಯತಿರಿಕ್ತವಾಗಿ ಹೋಗಿ ಒಬ್ಬರಿಗೆ ಎರಡು ಸಾವಿರ ರೂಪಾಯಿ ಸಂಬಳ, ಮತ್ತೊಬ್ಬರಿಗೆ ಕೇವಲ 15 ರೂಪಾಯಿ ಸಂಬಳ ಮಾಡಿರುವುದೇಕೆ?

ಶ್ರೀ ಕೆ. ಸಂಪಂಗಿರಾಮಯ್ಯನವರು.—I rise to a point of order, Sir; ದೇವರ ವಿಚಾರವನ್ನು ಸಭೆಯಲ್ಲಿ ತರಬಹುದೆ? (ನಗು!)

Sri M. L. NANJARAJ URS.—Does He come within the purview of this House? (ನಗು!)

ಶ್ರೀ ಟಿ. ಸಿ. ಹೊನ್ನಪ್ಪನವರು.—ಸ್ವಾಮಿ, ಹಿಂದೆ ನಮ್ಮ ದೇಶದಲ್ಲಿ ಜವಾಬ್ದಾರಿ ಸರ್ಕಾರವಿಲ್ಲ, ಅದಿದ್ದರೆ ಎಲ್ಲವೂ ಸರಿಹೋಗುತ್ತಿತ್ತು ಎಂದು ಹೇಳುತ್ತಿದ್ದರು. ಈ ಹೊತ್ತು ಜವಾಬ್ದಾರಿಯುತವಾದ ಪ್ರಜಾಸರ್ಕಾರ, ಪ್ರಜಾಮಂತ್ರಿಗಳು—ಎಲ್ಲಾ ಇದ್ದೂ ಕೂಡ ನಮ್ಮ ದೇಶದ ಪ್ರಜೆಗಳ ಕುಂದುಕೊರತೆಗಳನ್ನು ಯೋಚನೆ ಮಾಡಿ ನಿವಾರಣೆ ಮಾಡದಿದ್ದರೆ ಏನು ಪ್ರಯೋಜನ? ಗೆಜೆಟೆಡ್ ಮತ್ತು ನಾನ್‌ಗೆಜೆಟೆಡ್ ಆಫೀಸರುಗಳೆಂದು ಎರಡು ವಿಧವಾದ ಅಧಿಕಾರಿಗಳಿದ್ದಾರೆ. ಗೆಜೆಟೆಡ್ ಆಫೀಸರುಗಳಿಗೆ ಹೆಚ್ಚು ಸಂಬಳ ಕೊಡುವುದನ್ನು ತಗ್ಗಿಸಬಹುದು. ಆದರೆ ನಾನ್‌ಗೆಜೆಟೆಡ್ ಆಫೀಸರುಗಳ ಸ್ಥಿತಿ ಏನಾಗಿದೆಯೆಂಬುದನ್ನು ನೋಡಬೇಕು. ಅವರಿಗೆ ದೊರೆಯತಕ್ಕ ಸಂಬಳ ಈಗಿನ ಪರಿಸ್ಥಿತಿಯಲ್ಲಿ ಏನೂ ಸಾಲದು. ಗೆಜೆಟೆಟ್ ಆಫೀಸರುಗಳು ಎಷ್ಟು ಘಂಟೆಗಳ ಕಾಲ ಕೆಲಸ ಮಾಡುತ್ತಾರೋ ನಾನ್‌ಗೆಜೆಟೆಡ್ ಆಫೀಸರುಗಳೂ ಅಷ್ಟೆ ಘಂಟೆಗಳ ಕಾಲ ಕೆಲಸ ಮಾಡುತ್ತಾರೆ; ಏಕೆ! ಅವರಿಗಿಂತ ಹೆಚ್ಚುಕಾಲವೇ ಕೆಲಸಮಾಡುತ್ತಿದ್ದಾರೆ. ಈ ನಾನ್‌ಗೆಜೆಟೆಡ್ ನೌಕರರು ಮನೆಗಳಿಂದ ಕಚೇರಿಗಳಿಗೆ ಬರಬೇಕಾದರೆ ನಡೆದುಬರಬೇಕು ಅಥವ ಬೈಸಿಕಲ್ ಮೇಲೆ ಬರಬೇಕು. ಹೀಗೆ ಎಷ್ಟೋ ಕಷ್ಟಪಟ್ಟುಕೊಂಡು ಬಂದು ಕೆಲಸಮಾಡಬೇಕಾಗಿದೆ. ಗೆಜೆಟೆಡ್ ಅಧಿಕಾರಿಗಳಿಗೆ ಕಾರುಗಳಿರುತ್ತವೆ; ಮನೆಗಳಿಂದ ಕಚೇರಿಗಳಿಗೆ ಸುಲಭವಾಗಿ ಐದು ನಿಮಿಷದಲ್ಲಿ ಬಂದು ಹೋಗಬಹುದು. ನಾನ್‌ಗೆಜೆಟೆಡ್ ಅಧಿಕಾರಿಗಳಿಗಿರ

ತಕ್ಕ ಕುಂದುಕೊರತೆಗಳನ್ನು ಪರಿಶೀಲನೆಮಾಡಿ ನೋಡಿದರೆ ಅವರಿಗಿರುವ ಕಷ್ಟ ಎಷ್ಟೆಂಬುದು ಗೊತ್ತಾಗುತ್ತದೆ. ಈ ವಿಚಾರವನ್ನು ಸಹಾನುಭೂತಿಯಿಂದ ನೋಡಬೇಕೆಂದು ನಾನು ಒತ್ತಿ ಹೇಳಬೇಕಾಗಿದೆ. ನಾನ್‌ಗೆಜೆಟೆಡ್ ನೌಕರರಿಗೆ ಹೆಚ್ಚು ಕೊಡಬೇಕಾದರೆ ಹೆಚ್ಚು ಖರ್ಚಾಗುತ್ತದೆಂದು ಸರ್ಕಾರದವರು ಹೇಳಬಹುದು. ಆದರೆ ಈಗ ಅವರಿಗೆ ತಾವು ಕೊಡತಕ್ಕ ಸಂಬಳ ಸಾಕೆಂದು ಮಂತ್ರಿಗಳು ಒಪ್ಪುತ್ತಾರೆಯೇ ! ಗೆಜೆಟೆಡ್ ಅಧಿಕಾರಿಗಳ ಸಂಬಳಗಳನ್ನು ಕಡಿಮೆ ಮಾಡಲಿ ಬಿಡಲಿ ಆ ವಿಷಯ ಈಗ ನನಗೆ ಬೇಡಿ. ಈಗ ಸರ್ಕಾರದ ಹಣಕಾಸಿನ ಪರಿಸ್ಥಿತಿಯನ್ನು ಸರಿತೂಗಿಸುವುದು ಹೇಗೆಂದು ಕೇಳಬಹುದು. ಅದಕ್ಕೆ ನನ್ನ ಉತ್ತರವಿಷ್ಟೆ. ತಾವು ತಮ್ಮ ನೀತಿಯನ್ನು ಬದಲಾವಣೆ ಮಾಡಿದರೆ ಇದು ಸಾಧ್ಯವಾಗುತ್ತದೆಂದು ಭರವಸೆ ಕೊಡುತ್ತೇನೆ. ಪ್ರತಿ ವರ್ಷವೂ ನಿಮ್ಮಲ್ಲಿ ಗೆಜೆಟೆಡ್ ಅಧಿಕಾರಿಗಳನ್ನು ಹೆಚ್ಚಿಸಿಕೊಂಡು ಹೋಗುತ್ತಿರುವುದನ್ನು ತಡೆಗಟ್ಟಿದರೆ ನಿಮ್ಮಲ್ಲಿ ಎಷ್ಟು ಜನ ನೌಕರರಿದ್ದಾರೋ ಅವರಿಗೆ ಹೊಟ್ಟೆತುಂಬ ಅನ್ನಕ್ಕೆ ಸಾಕಾಗುವಷ್ಟು ಅವರ ಸಂಬಳಗಳನ್ನು ಹೆಚ್ಚಿಸಬಹುದು. ಸ್ವಾಮಿ, ಹಿಂದೆ ಅಠಾರ ಕಚೇರಿ ಎಂದಿತ್ತು. ಈಗ ನಮ್ಮ ಮುಂದಿರುವ ಡಿಮ್ಯಾಂಡುಗಳ ಪಟ್ಟಿ ನೋಡಿದರೆ 46 ಅಥವ 48 ಇಲಾಖೆಗಳಿವೆ ಒಟ್ಟಿನಲ್ಲಿ ಹೀಗೆ ಇಲಾಖೆಗಳನ್ನು ಹೆಚ್ಚಿಸಿಕೊಂಡು ಹೋದರೆ ಪ್ರಯೋಜನವೇನು ! ನಮ್ಮಲ್ಲಿರತಕ್ಕ ಕೆಲಸಗಾರರಿಗೆ ಜೀವನಕ್ಕೆ ಸಾಕಾಗುವಷ್ಟು ಸಂಬಳ ಕೊಡುತ್ತಿದ್ದೇವೆಯೇ ಎಂಬುದನ್ನು ನೋಡುವುದು ನಮ್ಮ ಕರ್ತವ್ಯ. ಪೋಲೀಸು ಇಲಾಖೆಯ ಕಾನ್‌ಸ್ಟೇಬಲ್‌ಗಳು, ಪ್ರೈಮರಿ ಸ್ಕೂಲು ಉಪಾಧ್ಯಾಯರುಗಳು ಮೊದಲುಗೊಂಡು ಎಲ್ಲ ನಾನ್‌ಗೆಜೆಟೆಡ್ ನೌಕರರಿಗೂ ನಾನು ಹೇಳುತ್ತಿರುವ ಮಾತುಗಳು ಅನ್ವಯಿಸುತ್ತವೆ. ಅವರ ಅದೃಷ್ಟದಿಂದಲೋ ಏನೋ ಅವರ ತುಟ್ಟಿಭತ್ಯವನ್ನು ಹೆಚ್ಚಿಸಬೇಕೆಂದು ಸೂಚಿಸಿ ಬಂದಿರುವ ನಿರ್ಣಯ ಬ್ಯಾಲೆಟ್‌ನಲ್ಲಿ ಮೊದಲನೆಯದಾಗಿ ಬಂದಿದೆ. ಅದನ್ನು ವಿಮರ್ಶೆ ಮಾಡುವಾಗ ಸಹಾನುಭೂತಿಯಿಂದ ಬೆಂಬಲ ಕೊಡುವುದಲ್ಲದೆ ಈ ನೌಕರರೆಲ್ಲರಿಗೂ ಅನುಕೂಲಮಾಡಿ ಕೊಡುತ್ತಾರೆಂದು ನನ್ನ ನಂಬಿಕೆ.

ಇನ್ನು ಆಹಾರದ ವಿಚಾರದಲ್ಲಿ, ನಾನು ಒಂದೇ ಮಾತಿನಲ್ಲಿ ಹೇಳುವುದಾದರೆ, ದೇಶದಲ್ಲಿ ಆಹಾರ ಪರಿಸ್ಥಿತಿ ಈ ಮಟ್ಟಕ್ಕೆ ಬರಲು ಕಾರಣವನ್ನು ಸರ್ಕಾರದವರು ಹುಡುಕಲಿಲ್ಲ. ಯೋಜನೆಗಳನ್ನು ಹಾಕುವುದಕ್ಕೆ ಹೊರಟರೇ ಹೊರತು ಮೂಲಕಾರಣವನ್ನು ಹುಡುಕಿ ಕಂಡು ಹಿಡಿಯಲಿಲ್ಲ. ಈ ಕಾರಣವನ್ನು ಯಾರಾದರೂ ಹೇಳಿದರೆ, ಅದನ್ನು ಕಾರ್ಯರೂಪಕ್ಕೆ ತರಬೇಕು. ಈ ಪರಿಸ್ಥಿತಿಗೆ ಮೂಲಕಾರಣ ಹತೋಟಿ. ಈ ಹತೋಟಿಯನ್ನು ಜಾರಿಗೆ ತಂದಿರತಕ್ಕ ಕ್ರಮ ಅಥವ ರೀತಿ ಹೇಗಿದೆಯೆಂಬುದನ್ನು ನೋಡೋಣ. ದೊಡ್ಡ ಪಟ್ಟಣಗಳಲ್ಲಿ ಸ್ಟ್ಯಾಚುಟರಿ ರೇಷನಿಂಗ್ ಎಂದು ಪೂರ್ತಿ ರೇಷನ್ ಕೊಡುವುದು, ಗ್ರಾಮಾಂತರಗಳಲ್ಲಿ ಶೇಕಡ 50ರಷ್ಟು, 60 ರಷ್ಟು ಕೂಡ ಕೊಡುತ್ತಿಲ್ಲ. ಇದರಿಂದ ಯಾರು ಸ್ವಂತ ಜಮೀನಿನಲ್ಲಿ ವ್ಯವಸಾಯ ಮಾಡುತ್ತಾರೋ ಅವರು ಹಳ್ಳಿಗಳಲ್ಲಿ ನಿಂತಿದ್ದಾರೆ, ಕೂಲಿ ಮಾಡುವವರೆಲ್ಲರೂ ಪಟ್ಟಣಗಳಿಗೆ ಬಂದು ಸೇರುತ್ತಿದ್ದಾರೆ. ಇದನ್ನು ತಡೆಗಟ್ಟಬೇಕು. ತಡೆಗಟ್ಟಲೇಬೇಕಾದರೆ ಗ್ರಾಮಾಂತರಗಳಲ್ಲಿಯೂ ಸರಿಯಾದ ರೇಷನಿಂಗ್ ಜಾರಿಮಾಡಿ; ಇಲ್ಲದಿದ್ದರೆ ರೇಷನಿಂಗನ್ನು ಎಲ್ಲಕಡೆಯೂ ವಜಾಮಾಡಿ. ಹಾಗೆ ಮಾಡದಿದ್ದರೆ ಯಾವ ಯೋಜನೆಯಿಂದಲೂ ಪ್ರಯೋಜನವಾಗುವುದಿಲ್ಲ. ಅಲ್ಲದೆ ಯಾವ ಯೋಜನೆಯನ್ನು ಮಾಡಬೇಕಾದರೂ ಒಂದು ಸರಿಯಾದ ಧೈರ್ಯವನ್ನಿಟ್ಟುಕೊಳ್ಳಬೇಕು. ಹೋದಸಾರಿಯೇ ನಾನು ಈ Grow more food scheme ಅಂದರೆ, ಹೆಚ್ಚು ಬೆಳೆ ಬೆಳೆಯುವ ಯೋಜನೆ ಸಂಪೂರ್ಣವಾಗಿ ಸೋಲಾಗುತ್ತದೆ ಎಂದು ಹೇಳಿದುದು ಮಂತ್ರಿಗಳ ಗಮನದಲ್ಲಿರಬಹುದು. ಅದರಂತೆ ಈಗ ಸಂಪೂರ್ಣ ಸೋಲಾಗಿದೆಯೆಂದು ಹೇಳುತ್ತೇನೆ. ಈ ಯೋಜನೆಯ ಪ್ರಕಾರ ರೈತನಿಗೆ ಕೊಡುತ್ತಿರುವ ಹಣ, ಗೊಬ್ಬರ ಮುಂತಾದವು ಅವನಿಗೆ ನ್ಯಾಯವಾಗಿ ದೊರೆಯುತ್ತಿಲ್ಲ. ವ್ಯವಸಾಯ ಮಾಡುವವರಿಗೆ ಸರಿಯಾದ ಕೂಲಿಯೂ ದೊರೆಯುತ್ತಿಲ್ಲ. ಆದಕಾರಣ ಸರ್ಕಾರವೇ ವ್ಯವಸಾಯ ಮಾಡುವುದಕ್ಕೆ ನಿಲ್ಲಬೇಕು. ಎಲ್ಲೆಲ್ಲಿ ಸರ್ಕಾರಿ ಜಮೀನಿದೆಯೋ ಅಲ್ಲೆಲ್ಲಾ ಬುಲ್‌ಡೋಜರುಗಳು ಟ್ರಾಕ್ಟರುಗಳನ್ನಿಟ್ಟು ಎರಡು ಮೂರು ಸಾವಿರ ಜನರು ಇರಬಹುದಾದ ಕಾಲೊನಿಗಳನ್ನು ಏರ್ಪಾಡುಮಾಡಿ ವ್ಯವಸಾಯ ಮಾಡಿಸಿ. ಇದರಿಂದ ಉತ್ಪತ್ತಿ ಹೆಚ್ಚುವುದಲ್ಲದೆ ಅಲ್ಲಿ ಕೆಲಸಮಾಡುವ ಜನರಿಗೆ ಕೆಲಸವೂ ಸಿಕ್ಕುತ್ತವೆ ಆಹಾರವೂ ಸಿಕ್ಕುತ್ತದೆ.

ಶ್ರೀ ಎಸ್. ರಂಗರಾಮಯ್ಯನವರು.—ಜನರು ಬರಬೇಕಲ್ಲ ಅಲ್ಲಿಗೆ !

ಶ್ರೀ ಟಿ. ಸಿ. ಹೊನ್ನಪ್ಪನವರು.—ನಿರಾಶ್ರಿತರನೇಕರು ಭಿಕ್ಷೆಗೆ ಬರುತ್ತಿದ್ದಾರೆ; ಜೈಲಿನಲ್ಲಿ ಎಷ್ಟೋ ಜನರಿದ್ದಾರೆ; ಮಿಲಿಟರಿಯಲ್ಲಿ ಎಷ್ಟೋ ಜನರು ಹೆಚ್ಚಾಗಿದ್ದಾರೆ. ಇವರೆಲ್ಲರನ್ನೂ ತೆಗೆದುಕೊಂಡು ಹೋಗಿ ಅಲ್ಲಿ ಹಾಕಿ; ಹೋಟೆಲುಗಳನ್ನು ತೆಗೆದುಹಾಕಿ ಅಲ್ಲಿಯ ಕೆಲಸಗಾರರನ್ನು ತೆಗೆದುಕೊಂಡು ಹೋಗಿ ಹಾಕಿ ಕೆಲಸ ಮಾಡಿಸಿ. ಹಾಗೆ ಮಾಡಿದರೆ ಆಹಾರ ಹೆಚ್ಚಾಗಿ ಉತ್ಪತ್ತಿಯಾಗುತ್ತದೆ. ಈಗ ಹೋಟೆಲುಗಳು ಎಲ್ಲೆಲ್ಲಿಯೂ ದಿನೇ ದಿನೇ ಹೆಚ್ಚುತ್ತಿವೆ. ಇವುಗಳಿಂದಲೇ ಮೊಧಲು ಕಾಳಸಂತೆ ಹೆಚ್ಚುವುದು. ಇವುಗಳನ್ನು ವಜಾ ಮಾಡಬೇಕು. ಅಂಕಿ ಅಂಶಗಳನ್ನು ನೋಡುವುದಾದರೆ, ಈ ಹೋಟೆಲುಗಳಲ್ಲಿ ಕೆಲಸಮಾಡುತ್ತಿರುವವರ ಪ್ರತ್ಯೇಕ ಸೆನ್ಸಸ್ ಲೆಕ್ಕ ತೆಗೆದುಕೊಂಡು ಇವರು ಎಷ್ಟು ವರ್ಷಗಳಿಂದ ಬೆಂಗಳೂರು ಮೈಸೂರುಗಳಲ್ಲಿ ವಾಸಮಾಡುತ್ತಿದ್ದಾರೆ, ಎಲ್ಲಿಂದ ಬಂದಿದ್ದಾರೆ ಎಂಬುದನ್ನೆಲ್ಲಾ ಪರೀಕ್ಷೆಮಾಡಿದರೆ, ಇವರಲ್ಲಿ ಪ್ರತಿಯೊಬ್ಬರೂ ಗ್ರಾಮಾಂತರಗಳಿಂದ ಬಂದಿರುವವರೇ ಎಂಬುದು ತಿಳಿಯುತ್ತದೆ. ಮೊದಲಿನಿಂದಲೂ ಸಿಟಿಗಳಲ್ಲೇ ವಾಸವಾಗಿದ್ದವರೇ ಇಷ್ಟು ಹೆಚ್ಚಿದ್ದಾರೆಂಬುದನ್ನು ನಂಬುವುದಕ್ಕಾಗುವುದಿಲ್ಲ. ನಗರಗಳಲ್ಲಿ ಜನ ಸಂಖ್ಯೆ ಇಷ್ಟು ಹೆಚ್ಚಿರಲು ಗ್ರಾಮಗಳಿಂದ ಬಂದಿರುವವರೇ ಕಾರಣ. ಇವರು ಹಳ್ಳಿಗಳಲ್ಲಿ ಹೋಗಿ ನೆಲಸಬೇಕಾದರೆ ಅವರಿಗೆ ಬೇಕಾದ ಅನುಕೂಲಗಳನ್ನು ಮೊದಲು ಹಳ್ಳಿಗಳಲ್ಲಿ ಒದಗಿಸಬೇಕು. ಈಗ ಹಳ್ಳಿಗಳಲ್ಲಿ ಅನ್ನ ಸಿಕ್ಕುವುದಿಲ್ಲ, ವಿದ್ಯೆ ಸಿಕ್ಕುವುದಿಲ್ಲ. ಇವುಗಳನ್ನು ಸರ್ಕಾರ ಒದಗಿಸದೇ ಹೋದರೆ ಇವರು ನಗರಗಳನ್ನು ಸೇರುವುದು ನ್ಯಾಯವೇ ಸರಿ. ಹಳ್ಳಿಯಲ್ಲಿಯೇ ಇದ್ದರೆ ಕಂಟ್ರೋಲಿನ ದೆಸೆಯಿಂದ ಆಹಾರವಿಲ್ಲದೆ ಇವರು ಸಾಯಬೇಕಾಗುತ್ತದೆ.

ವಿದ್ಯಾಭ್ಯಾಸಕ್ಕೆ ಸ್ಕೂಲುಗಳು ಬೇಕೆಂದು ಗ್ರಾಮಗಳವರು ಕೇಳಿದರೆ ಸರ್ಕಾರದವರು ಕಟ್ಟಡಗಳನ್ನೊದಗಿಸಿಕೊಡಿ ಎಂದು ಹೇಳುತ್ತಾರೆ. ಪ್ರೈಮರಿ ಸ್ಕೂಲುಗಳಿಗೆ ಹೋಗುವ ತಮ್ಮ ಮಕ್ಕಳಿಗೆ ಬಟ್ಟೆ ಪುಸ್ತಕಗಳನ್ನೊದಗಿಸಲು ಶಕ್ತಿಯಿಲ್ಲದ ಹಳ್ಳಿಯ ಜನರನ್ನು ಕಟ್ಟಡಗಳನ್ನು ಕೊಡಿ ಎಂದು ಕೇಳುವುದು ನ್ಯಾಯವೇ? ಕೊಡಲು ಅವರಿಗೆ ಸಾಧ್ಯವೆ ? ಅಡಲ್ಟ್ ಎಜ್ಯುಕೇಷನ್, ಅಂದರೆ, ವಯಸ್ಕರ ವಿದ್ಯಾಭ್ಯಾಸಕ್ಕೆಂದು ಐದುಲಕ್ಷ ರೂಪಾಯಿ ಕೊಟ್ಟಿದ್ದಾರೆ. ಇದರಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾ

(ಶ್ರೀ ಟಿ. ಸಿ. ಹೊನ್ನಪ್ಪನವರು).

ರೆಂದು ಹೇಳುವವರೆಲ್ಲರೂ ಪ್ರೈಮರಿ ಸ್ಕೂಲುಗಳಲ್ಲಿದ್ದು ಬಿಟ್ಟಿರುವವರೇ!! ಅವರನ್ನೆಲ್ಲಾ ಕರೆಸಿ ಹಿಂದೆ ಎಲ್ಲಿ ಓದಿದರೆಂದು ಯಾರಾದರೂ ವಿಚಾರಿಸಿ ನೋಡಿದ್ದಾರೆಯೆ? ಪ್ರೈಮರಿ ಸ್ಕೂಲುಗಳಲ್ಲಿ ಓದುವವರನ್ನು ತೆಗೆದುಕೊಂಡು ಬಂದು ಸೇರಿಸಿ ಲೆಕ್ಕಹಾಕಿ ತೋರಿಸುವುದಕ್ಕೆ ವರ್ಷವರ್ಷವೂ ಐದುಲಕ್ಷ ರೂಪಾಯಿ ಕೊಡುತ್ತಿದ್ದಾರೆ. ಈ ಹಣ ನ್ಯಾಯವಾಗಿ ವಿನಿಯೋಗವಾಗುತ್ತಿದೆಯೇ ಎಂಬುದನ್ನೂ ನೋಡಿಲ್ಲ. ವಯಸ್ಸಾದವರಲ್ಲಿ ಎಷ್ಟು ಜನರಿಗೆ ವಿದ್ಯೆ ಬಂದಿದೆ ಎಂಬುದನ್ನು ನೋಡಿಲ್ಲ......

ಶ್ರೀ ಎಸ್. ರಂಗರಾಯರು.—It is a serious allegation. ಕೊಟ್ಟಿರುವ ಅಂಕಿ ಅಂಶಗಳು ಸುಳ್ಳೆಂದು ಹೇಳುತ್ತಿದ್ದಾರೆ.

ಶ್ರೀ ಟಿ. ಸಿ. ಹೊನ್ನಪ್ಪನವರು.—ನನ್ನ ಜೊತೆಯಲ್ಲಿ ಬೇಕಾದರೆ ಬನ್ನಿ; ಉದಾಹರಣೆ ಕೊಟ್ಟು ತೋರಿಸುತ್ತೇನೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು (ಆರ್ಥಿಕ ಮತ್ತು ಕೈಗಾರಿಕಾ ಸಚಿವರು).—ಈ ಸಭೆಯ ಮಾನ್ಯ ಸದಸ್ಯರಲ್ಲೊಬ್ಬರಾಗಿರತಕ್ಕವರು ಆ ಸಮಿತಿಗೆ ಅಧ್ಯಕ್ಷರಾಗಿದ್ದಾರೆ. ಹಾಗೆ ಖಾಸಗೀ ಮನುಷ್ಯರುಗಳಿಂದಲೇ ಆ ಸಮಿತಿ ಆಡಳಿತ ನಡೆಸುತ್ತಿದೆ. ಅದನ್ನು ಸರ್ಕಾರ ನೇರವಾಗಿ ನಡೆಸುತ್ತಿಲ್ಲ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಅದು ಏನೇ ಇರಲಿ ಇದರ ಮೇಲೆ ಸರ್ಕಾರದವರ ಜವಾಬ್ದಾರಿಯೂ ಇದೆಯೆಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಈ ಸಮಿತಿಗಾಗಿ ತಾವು ಖರ್ಚು ಮಾಡುತ್ತಿರುವ 5 ಲಕ್ಷ ರೂಪಾಯಿಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿರುವ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಕಟ್ಟಡಗಳಿಗೆ ಅಥವ ಮತ್ತೆ ಯಾವುದಾದರೂ ಅಭಿವೃದ್ಧಿಗೆ ಉಪಯೋಗ ಮಾಡಿದರೆ ಅದರಿಂದ ಬಹಳ ಅನುಕೂಲವಾಗುತ್ತದೆ.

ಇನ್ನು ನಮ್ಮ ದೇಶದಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸ ಹೆಚ್ಚಾದಂತೆಲ್ಲ, ಪದವೀಧರರಾಗಿ ಹೊರಗಡೆ ಬರತಕ್ಕ ಜನರು ಬೇರೊಂದು ಉದ್ಯೋಗವನ್ನು ಕೈಗೊಳ್ಳಲು ಮನಸ್ಸಿಲ್ಲದೆ, ಅವರಿಗೆ ನೌಕರಿ ಸಿಕ್ಕದೆ ನಿರುತ್ಸಾಹಿಗಳಾಗಿ ತಿರುಗುತ್ತಿದ್ದಾರೆ. ಅವರು ತಮ್ಮ ಜೀವನೋಪಾಯವನ್ನೆಲ್ಲಾ ಕೇವಲ ಒಂದು ಗುಮಾಸ್ತಿಗಿರಿಯಲ್ಲಿ ನಡೆಸಬೇಕೇ ಶಿವಾಯಿ ತಮ್ಮ ಸ್ವಶಕ್ತಿಯಿಂದ ಜೀವನ ಮಾಡಿಕೊಳ್ಳುವಂಥ ಚೈತನ್ಯ ಅವರಿಗಿರುವುದಿಲ್ಲ. ನಮ್ಮ ದೇಶಕ್ಕೆ, ಮದ್ರಾಸಿಗೆ ಹೋಗಿ ಡಾ|| ಸಿ. ಆರ್. ರೆಡ್ಡಿಯವರನ್ನು ಕರೆದುಕೊಂಡು ಬಂದರು. ಏನೇನೋ ಮಾಡಿದರು. ಅದರೂ ನಮ್ಮ ಯೂನಿವರ್ಸಿಟಿ ವಿದ್ಯಾಭ್ಯಾಸದ ಬಗ್ಗೆ ಉಪಯುಕ್ತ ಬದಲಾವಣೆಗಳು ಮಾತ್ರ ಆಗಲಿಲ್ಲ. ಹೀಗೆ ಯಾರೇ ಬಂದರೂ ಅನ್ಯ ಭಾಷೆಗೆ ಗೌರವ ನೀಡಿ ನಮ್ಮ ದೇಶಭಾಷೆಯ, ಮಾತೃಭಾಷೆಯ ಬಳಕೆಯನ್ನೇ ಕೈಬಿಟ್ಟಿದ್ದಾರೆ! ಹೀಗೆ ಮಾಡತಕ್ಕದ್ದು ಖಂಡಿತ ನ್ಯಾಯವಲ್ಲ. ತಾವು ಇನ್ನಾದರೂ ನಮ್ಮ ಪಾಠಶಾಲೆಗಳ ಪ್ರತಿಯೊಂದು ಪಠ್ಯ ಪುಸ್ತಕಗಳನ್ನೂ ಮತ್ತು ಎಲ್ಲಾ ಶಾಸನ ನಿಬಂಧನೆಗಳನ್ನೂ ಕನ್ನಡದಲ್ಲೇ ಪ್ರಕಟಪಡಿಸಿ ದೇಶಾದ್ಯಾಂತವೂ ಇರತಕ್ಕ ಜನರಿಗೆಲ್ಲಾ ಸುಲಭವಾಗಿ ತಿಳುವಳಿಕೆ ಹೊಂದುವಂತೆ ಮಾಡಿದರೆ ಈ ದಿವಸ, ಜನರು ಬುದ್ಧಿವಂತರಾಗಿ, ಕೋರ್ಟು, ಕಚೇರಿಗಳಿಗೆ ಹೋಗಿ ಇಲ್ಲದ ವ್ಯವಹಾರಗಳನ್ನು ನಡೆಸುವುದು ತಪ್ಪಿಹೋಗಿ ದೇಶಕ್ಕೆ ಹೆಚ್ಚಿನ ಕ್ಷೇಮ ಉಂಟಾಗುತ್ತದೆಂದು ಹೇಳುತ್ತೇನೆ. ಯೂನಿವರ್ಸಿಟಿಯಲ್ಲಿ ಪರಭಾಷೆಯ ವಿದ್ಯಾಭ್ಯಾಸವನ್ನು ತಾವು ಮುಂದುವರಿಸುತ್ತಾ ಹೋದರೆ ದೇಶದಲ್ಲಿರತಕ್ಕ ಜನರು ಬಹುಬೇಗ ಹಾಳಾಗಿ ಹೋಗುತ್ತಾರೆ. ಆದುದರಿಂದ ತಾವು ಕೂಡಲೇ ಯೂನಿವರ್ಸಿಟಿ ವಿದ್ಯಾಭ್ಯಾಸವನ್ನು ಕೂಡ ಕನ್ನಡ ಮಾಡಿಯಂನಲ್ಲೇ ಕೊಡಬೇಕೆಂದು ಸೂಚಿಸುತ್ತೇನೆ. ಅದೇರೀತಿ ಈ ಶಾಸನ ಸಭೆಯ ಪ್ರತಿಯೊಂದು ನಡವಳಿಕೆಗಳನ್ನೂ ಸಹ ಕನ್ನಡದಲ್ಲೇ ಮಾಡುವಂತೆ ಮಾಡಬೇಕೆಂದು ಸೂಚಿಸುತ್ತೇನೆ.

(At 11-57 A.M. Mr. Speaker occupied the Chair).

ಶ್ರೀ ಕೆ. ಸುಬ್ಬರಾಯರು (ಬೆಂಗಳೂರು ಜಿಲ್ಲೆ).—ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನು ಸಮರ್ಪಿಸುತ್ತೇನೆ. ಆದರೆ ನನಗೆ ದೊರೆತಿರುವ ಕಾಲಾವಕಾಶ ತೀರ ಸ್ವಲ್ಪ. ಆದುದರಿಂದ ನಾನು ಹೆಚ್ಚು ವಿಷಯಗಳನ್ನು ಪ್ರಸ್ತಾಪಮಾಡದೆ ಒಂದೇ ಒಂದು ವಿಷಯದ ಮೇಲೆ ಮಾತ್ರ ಮಾತನಾಡಲು ಆಶಿಸುತ್ತೇನೆ.

ರೇಷ್ಮೆ ವಿಚಾರವಾಗಿ ಕೆಲವು ವಿಷಯಗಳನ್ನು ಈ ಸಭೆಯ ಮಾನ್ಯ ಸದಸ್ಯರುಗಳ ಮತ್ತು ಮಾನ್ಯ ಮಂತ್ರಿಗಳ ಗಮನಕ್ಕೆ ತರಲಿಚ್ಛಿಸುತ್ತೇನೆ. ಮೊಟ್ಟಮೊದಲನೆಯದಾಗಿ ಈ ಕೈಗಾರಿಕೆಗೆ ಎಷ್ಟು ಪ್ರಾಮುಖ್ಯತೆಯಿರುತ್ತದೆಂಬುದನ್ನು ಈ ಮಾನ್ಯ ಸಭೆ ಚೆನ್ನಾಗಿ ಅರಿತಿರುತ್ತದೆಂದು ನಾನು ನಂಬಿದ್ದೇನೆ. ಇಂದು ನಮ್ಮ ದೇಶದಲ್ಲಿ ಈ ರೇಷ್ಮೆ ಕೈಗಾರಿಕೆಯೂ ಒಂದು ಗೃಹ ಕೈಗಾರಿಕೆಯೋಪಾದಿಯಾಗಿದ್ದು, ಇದರಿಂದ ತಮ್ಮ ಜೀವನವನ್ನು ನಡೆಸಿಕೊಳ್ಳುತ್ತಿರುವಂಥ ಸಂಸಾರಗಳು ಸುಮಾರು 50 ಸಾವಿರವಿರುತ್ತವೆಂದು ನನಗೆ ತಿಳಿದುಬಂದಿದೆ. ಈ ಬಗ್ಗೆ ನನ್ನಲ್ಲಿ ಸಾಕಷ್ಟು ಅಂಕಿ ಅಂಶಗಳಿರುತ್ತವೆ. ಹೀಗೆ ಈ 50 ಸಾವಿರ ಸಂಸಾರಗಳೂ ಈ ದಿವಸ ಈ ಕೈಗಾರಿಕೆಯನ್ನು ಒಂದು ಮುಖ್ಯ ವೃತ್ತಿಯನ್ನಾಗಿಯೋ ಅಥವಾ ಒಂದು ಕುಟುಂಬದ ಉಪವೃತ್ತಿಯನ್ನಾಗಿಯೋ ಇಟ್ಟುಕೊಂಡು ತಮ್ಮ ಜೀವನವನ್ನು ನಡೆಸಿಕೊಂಡು ಬರುತ್ತಿವೆ. ಈ ಅಂಶವನ್ನು ಸಭೆಯು ಗಮನಿಸಬೇಕೆಂದು ನಾನು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಸಭೆಯಲ್ಲಿ ಕೆಲವು ಸದಸ್ಯರು 50 ಸಾವಿರ ಸಂಸಾರಗಳು ಎಂದು ಯಾವ ಆಧಾರದ ಮೇಲೆ ಹೇಳುತ್ತೀರಿ ಎಂದು ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಹಾಕಲಾರಂಭಿಸಿದರು.)

ನಮ್ಮ ಆಜೂಬಾಜೂ ತಾಲ್ಲೂಕುಗಳಲ್ಲಿ ಮತ್ತು ಎಲ್ಲೆಲ್ಲಿ ಈ ರೇಷ್ಮೆ ವ್ಯವಸಾಯ ನಡೆಯುತ್ತಿದೆಯೋ ಅದೆಲ್ಲಾ ಸುಮಾರು 80 ಸಾವಿರ ಎಕರೆಗಳಷ್ಟಿದ್ದು, ಆ 80 ಸಾವಿರ ಎಕರೆಗಳ ಪೈಕಿ, ಒಬ್ಬೊಬ್ಬ ರೈತರು ಒಂದೊಂದು ಎಕರೆಯಂತೆ ಈ ರೇಷ್ಮೆ ವ್ಯವಸಾಯಕ್ಕೆ ಉಪಯೋಗ ಮಾಡಿದ್ದರೂ 80 ಸಾವಿರ ಸಂಸಾರಗಳಾಗುತ್ತಿತ್ತು. ಆದರೆ ನಾನೀಗ ಹೇಳುತ್ತಿರುವುದೆಲ್ಲ ನನ್ನ ಅನುಭವದ ಮಾತು. ಸರ್ಕಾರದವರು, ಅಂದರೆ ಈಗ ಇರತಕ್ಕ ಹಾಲಿ ರೇಷ್ಮೆ ಇಲಾಖೆಯವರು ಒದಗಿಸಿರತಕ್ಕ ಅಂಕಿ ಅಂಶಗಳ ಆಧಾರದಿಂದಲೇ ಇಂದು 50 ಸಾವಿರ ಸಂಸಾರಗಳು ಈ ಒಂದು ಉಪಕಸುಬಿನಿಂದ ತಮ್ಮ ಜೀವನ ನಡೆಸುತ್ತಿವೆಂದು ಧಾರಾಳವಾಗಿ ಹೇಳಬಹುದು. ಆದರೆ ಇಂಥಾ ಕೈಗಾರಿಕೆಗೆ ಉತ್ತೇಜನ ಕೊಡತಕ್ಕ ಬಗ್ಗೆ ಸರ್ಕಾರದವರು ಒದಗಿಸಿರುವ ಹಣ ಬಹಳ ಕಡಿಮೆಯಾಗಿದೆಯೆಂದು ನಾನು ಬಹಳ ವಿಷಾದದಿಂದ ಅರಿಕೆ ಮಾಡಿಕೊಳ್ಳುತ್ತೇನೆ. ತಾವು ಆಹಾರೋತ್ಪತ್ತಿ ಬಗ್ಗೆ 4–5 ಕೋಟಿ ರೂಪಾಯಿಗಳಷ್ಟು ಹಣ

ವನ್ನು ಖರ್ಚು ಮಾಡಿದ್ದೀರಿ. ಆದರೆ ಈ ದಿವಸ ಅದೆಲ್ಲಾ ಲುಕ್ಸಾನಾಗಿ ತಾವು ಇಂದಿಗೂ ಆಹಾರ ಧಾನ್ಯಗಳನ್ನು ಹೊರಗಡೆಯಿಂದಲೇ ತರಿಸುತ್ತಿದ್ದೀರಿ. ಹಾಗೆ ಆ ಬಾಬಿಗೆ ತಾವು ಅಷ್ಟು ಹಣ ಹಾಕಿದ್ದಾಗ್ಯೂ ಅವರು ಎಷ್ಟು ಉತ್ಪತ್ತಿಯನ್ನು ತೋರಿಸಿದ್ದಾರೆ?

ಇದೇ ರೀತಿ ತಾವು ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೂ 4-6 ಕೋಟಿ ರೂಪಾಯಿಗಳನ್ನು ಒದಗಿಸಿದ್ದೀರಿ. ಆದರೆ ಆ ಕಬ್ಬಿಣದ ಕಾರ್ಖಾನೆಯಿಂದ ಬರತಕ್ಕ ಉತ್ಪತ್ತಿಯೇನು! ಅದೇ, ರೇಷ್ಮೆ ಬಾಬಿನಿಂದ ತಮಗೆ ಬರತಕ್ಕ ಉತ್ಪತ್ತಿ ಏನು! ರೇಷ್ಮೆ ಉದ್ಯಮಕ್ಕೆ ಒದಗಿಸಿರುವುದರ 5 ರಷ್ಟನ್ನು ತಾವು ಕಬ್ಬಿಣದ ಕಾರ್ಖಾನೆಗೆ ಒದಗಿಸಿದ್ದೀರಿ. ಆದರೆ ಕಬ್ಬಿಣದ ಕಾರ್ಖಾನೆಯಿಂದ 5 ವರ್ಷಗಳಲ್ಲಿ ತಮಗೆ ಬರುವಂಥ ಉತ್ಪತ್ತಿ, ಈ ರೇಷ್ಮೆ ಬಾಬಿನಲ್ಲಿ ಒಂದೇ ವರ್ಷಕ್ಕೆ ಬರುತ್ತದೆ. ಆದರೆ ತಾವು ಇದಕ್ಕೆ ಸಾಕಾದಷ್ಟು ಉತ್ತೇಜನವನ್ನು ಮಾತ್ರ ಕೊಡಲಿಲ್ಲ. ಇದು ಬಹಳ ವಿಷಾದಕರವಾದ ಸಂಗತಿಯೆಂಬುದನ್ನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಗೆ ನಾನು ನಮ್ರತೆಯಿಂದ ಹೇಳಬೇಕಾಗಿದೆ.

ಇನ್ನು ಗೊಬ್ಬರವನ್ನು ಕೊಡತಕ್ಕ ವಿಚಾರದಲ್ಲಿ, ತಾವು ಹೆಚ್ಚಿಗೆ ಪ್ರಮಾಣದ ಗೊಬ್ಬರವನ್ನು ಆಹಾರ ಧಾನ್ಯಗಳ ಬೆಳೆಗೆ ಕೊಡುತ್ತಿದ್ದೀರಿ. ಆದರೆ ಅದರಿಂದುಂಟಾಗಿರುವ ಕ್ಷೇಮವಾದರೂ ಏನು? ನೀವು ಇಂದು ರೈತನಿಗೆ ಒದಗಿಸುತ್ತಿರುವ ಗೊಬ್ಬರ ನಿಮ್ಮ ಎಲ್ಲಾ ಖರ್ಚುಗಳನ್ನು ಅದರ ಮೇಲೆ ಹಾಕಿ ಮಾರಾಟ ಮಾಡಿದಾಗ್ಯೂ ಅದು ರೈತನಿಗೆ ಬಹಳ ಅಗ್ಗದ ದರದಲ್ಲೇ ಸಿಕ್ಕಿದಂತೆ ಭಾವಿಸಬೇಕು. ತಾವು ಹೀಗೆ ರೈತರಿಗೆ open market ನಲ್ಲಿ 180 ರೂಪಾಯಿಗಳಿಗೆ ಕೊಡತಕ್ಕದ್ದಕ್ಕೆ ಬ್ಲಾಕ್ ಮಾರ್ಕೆಟ್ಟನಲ್ಲಿ 300 ರೂಪಾಯಿ ಕೊಡಬೇಕಾಗಿರುತ್ತೆ. ಹೀಗೆ ಬ್ಲಾಕ್ ಮಾರ್ಕೆಟ್‌ನಲ್ಲಿ ರೈತ 300 ರೂಪಾಯಿ ಕೊಟ್ಟು ಗೊಬ್ಬರ ಹಾಕಬೇಕಾದರೆ ತೊಂದರೆ ಎಷ್ಟಾಯಿತೆಂಬುದನ್ನು ಸರ್ಕಾರದವರು ಗಮನಿಸಬೇಕು. ಈ ಗೊಬ್ಬರ ಕೊಡತಕ್ಕ ಬಗ್ಗೆ ಅಂದರೆ ರೇಷ್ಮೆ ವ್ಯವಸಾಯಗಾರರಿಗೆ ಗೊಬ್ಬರ ಕೊಡತಕ್ಕ ಬಗ್ಗೆ ತಾವು ಯಾವ ರಿಯಾಯಿತಿಗಳನ್ನೂ ತೋರಿಸಬೇಕೆಂದು ನಾನು ಕೇಳಿಕೊಳ್ಳುತ್ತಿಲ್ಲ. ತಾವು ಈ ದಿವಸ 1,000 ಟನ್ ಗೊಬ್ಬರ ದಾಸ್ತಾನುಮಾಡಿ. ನಾವು ಅದಕ್ಕೇ ಹಣಕೊಟ್ಟು ಕೊಡುತ್ತೇವೆ. ಸಕಾಲದಲ್ಲಿ ನಮಗೆ ಬ್ಲಾಕ್ ಮಾರ್ಕೆಟ್ಟಿಗೆ ಹೋಗದಂತೆ ತಾವು ಸರಬರಾಯಿ ಮಾಡಿದರೆ ಸಾಕು. ಆಹಾರದ ಬೆಳೆಗೆ ತಾವು ರಿಯಾಯಿತಿ ತೋರಿಸಿದ್ದೀರಿ. ಇದು ಲಾಭದಾಯಕ ಬೆಳೆಯಾದ್ದರಿಂದ ಇದರ ಬಗ್ಗೆ ತಾವು ಅಂಥಾ ರಿಯಾಯಿತಿಗಳನ್ನೇನೂ ತೋರಿಸಬೇಕಾಗಿಲ್ಲ. ಆದುದರಿಂದ ತಾವು ಈ ರೇಷ್ಮೆ ವ್ಯವಸಾಯಗಾರರಿಗೆ ಖಂಡಿತ ಸಾಕಷ್ಟು ಹಣವನ್ನು ಮುಡುಪಾಗಿಟ್ಟು ಅದಕ್ಕೆ ಗೊಬ್ಬರವನ್ನು ತರಿಸಿ ಅವರಿಗೆ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಬೀಳಬಹುದಾದ ವಿಶಿಷ್ಟ ಇತರೇ ಖರ್ಚುಗಳನ್ನೂ ಅವರೇ ವಹಿಸಿಕೊಳ್ಳಲು ಸಿದ್ಧರಿದ್ದಾರೆ.

ಮತ್ತೊಂದು ಅಂಶವೇನೆಂದರೆ, ವಿಷಯ ಸಣ್ಣದಾದರೂ ಅದು ಪರ್ವತದೋಪಾದಿಯಲ್ಲಿರುತ್ತದೆ. ಅದೇನೆಂದರೆ, ಈ ರೋಗರಹಿತವಾದ ಮೊಟ್ಟೆಗಳನ್ನು ಸಾಕತಕ್ಕ ರೈತರಿಗೆ ತಾವು ಒದಗಿಸಬೇಕು. ರೇಷ್ಮೆ ಗೂಡುಗಳ ಮಾರಾಟದ ಮೇಲೆ ಶೆರಿಗೆ ಹಾಕುತ್ತಿದ್ದಾರೆ. ಇದನ್ನು ಖಂಡಿತ ತಾವು ಮನ್ನಾಮಾಡಬೇಕು. ಈಗಾಗಲೇ ಮಾನ್ಯ ಮಂತ್ರಿಗಳಲ್ಲಿ ಇದನ್ನು ಮನ್ನಾ ಮಾಡಬೇಕೆಂದು ಅನೇಕಾವರ್ತಿ ಅರಿಕೆ ಮಾಡಿಕೊಂಡೆವು. ರೈತನ ಮೇಲೆ ಈಗಾಗಲೇ ಬೇಕಾದಷ್ಟು ಹೊರೆ ಬಿದ್ದಿದೆ. ಅದೇ ಹೆಚ್ಚಾಯಿತೆಂದು ಹೇಳುತ್ತಿರುವಾಗ ಈ ಟ್ಯಾಕ್ಸ್ ಹಾಕುವುದು ನ್ಯಾಯವಲ್ಲ ಎಂದು ಕೇಳಿಕೊಂಡೆವು. ಆದರೆ ನಮ್ಮ ಮಾತುಗಳಿಗೆ ಮಾನ್ಯತೆ ಬಂದಂತೆ ಕಾಣಲಿಲ್ಲ. ನಮ್ಮ ಮಾನ್ಯ ಮಂತ್ರಿಗಳ ದೃಷ್ಟಿ ಹೇಗಿರಬೇಕೆಂದರೆ—ಗಾದೆಯಲ್ಲಿ ಹೇಳುವಂತೆ 'ವ್ರತಾ ಕೆಟ್ಟರೂ, ಸುಖ ಇರಬೇಕು' ಎಂಬಂತೆ ಸರ್ಕಾರಕ್ಕೆ ಈ ಬಾಬಿನಿಂದ ಬರುವುದಾದರೂ ಕೇವಲ ಸ್ವಲ್ಪ ಹಣ; 20-25 ಸಾವಿರ ಇದ್ದರೆ ಹೆಚ್ಚಾಯಿತು. ಸರ್ಕಾರಕ್ಕೆ ಇದರಿಂದ ಆಗತಕ್ಕ ಫಾಯಿದೆಯೂ ಅಷ್ಟರಲ್ಲೇ ಇದೆ.

ರೇಷ್ಮೆ ಬಿತ್ತನೆ ಹುಳಗಳನ್ನು ಸಾಕುವವರಿಗೆ ಅನುಭವ ಚೆನ್ನಾಗಿದೆ. ಈ ಮೊಟ್ಟೆಗಳನ್ನು ತಯಾರು ಮಾಡುವವರಿಗೆ ಸಾಕಾದಷ್ಟು ಸಲಕರಣೆಯಿರಬೇಕು. ಸರ್ಕಾರದವರೇನೋ ಏಡೆಡ್ ಗ್ರೈನೇಜ್‌ಗಳನ್ನಿಟ್ಟಿದ್ದಾರೆ. ಅದರಿಂದ ಸಹಾಯವಾಗುತ್ತಿದೆ. ಆದರೆ ಕೆಲವು ಕಾಲದಲ್ಲಿ ಕೊಂಡುಕೊಳ್ಳುವುದಕ್ಕೆ ತಕ್ಕ ಗಿರಾಕಿಗಳಿಲ್ಲದೆ ನಿಧಾನವಾಗುವುದರಿಂದ ಮೊಟ್ಟೆ ಒಡೆದು ಮರಿಗಳಾಗಿ ಎಲ್ಲವೂ ಹಾಳಾಗುತ್ತದೆ. ಅದಕ್ಕೆ ಪರಿಹಾರಬೇಕು, ಹಾಗೆ ಆಗುವುದನ್ನು ತಪ್ಪಿಸಬೇಕಾದರೆ ಜಪಾನಿನಲ್ಲಿರುವ ಹಾಗೆ ರೋಗರಹಿತವಾದ ಮೊಟ್ಟೆಗಳನ್ನು ತಯಾರುಮಾಡುವುದಕ್ಕೂ ಅದನ್ನು ಇಡುವುದಕ್ಕೂ ಏರ್ಪಾಡು ಮಾಡಬೇಕು. ಹೊರಗಿನವರು ಸರಿಯಾದ ಮೊಟ್ಟೆ ಇದರ ರೋಗದಿಂದ ಕೂಡಿರುವುದನ್ನು ಇಟ್ಟಿದ್ದರೆ ಅದರಿಂದ ತೊಂದರೆ. ಆದ್ದರಿಂದ ರೋಗರಹಿತವಾದ ಮೊಟ್ಟೆಗಳನ್ನೇ ಕಾಪಾಡುವುದಕ್ಕೆ ಪ್ರೋತ್ಸಾಹ ನೀಡಬೇಕು. ಆ ಮೇಲೆ 30 ದಿವಸಕ್ಕೆ ಬರುವುದನ್ನು ಇನ್ನೂ ಮುಂಚೆ ಬರುವಂತೆ ಉಪಯೋಗಿಸಿಕೊಳ್ಳುವುದಕ್ಕೂ ಮತ್ತು ನಿಧಾನವಾಗಿ ಉಪಯೋಗ ಮಾಡಿಕೊಳ್ಳುವುದಕ್ಕೂ ತಕ್ಕ ಶಿಕ್ಷಣ ಅಗತ್ಯ. ಅದಕ್ಕೆ ತೀವ್ರ ಗಮನ ಕೊಡಬೇಕು ಎಂಬುದೇ ನನ್ನ ಆಶಯ. ಇದನ್ನು ಮಾನ್ಯ ಮಂತ್ರಿಗಳು ಸರಿಪಡಿಸುತ್ತಾರೆಂದು ನಂಬಿದ್ದೇನೆ. ಇದೇ ಸಂದರ್ಭದಲ್ಲಿ ಮತ್ತೊಂದು ಅಂಶವನ್ನು ಹೆಚ್ಚಾಗಿ ಹೇಳಬೇಕಾಗಿದೆ. ಈಗ ಹೊಸದಾಗಿ ಒಂದು ಸಾಧನವನ್ನು ಕಂಡುಹಿಡಿದಿದ್ದಾರೆ. ಅದರ ಪ್ರಕಾರ ಯಾವಾಗಬೇಕೋ ಆಗ ಮರಿ ಮಾಡುವುದಕ್ಕೆ ಅವಕಾಶವಿದೆ. ರೆಫ್ರಿಜರೇಟರಿನಲ್ಲಿಟ್ಟು 5 ದಿವಸಗಳಲ್ಲಿ ಅಥವ ಒಂದು ವಾರದಲ್ಲಿ ಅಥವಾ ಯಾವಾಗಬೇಕೋ ಆಗ ಮರಿ ಮಾಡಲು ಅನುಕೂಲಮಾಡಿದ್ದಾರೆ. ಈ ಸೌಕರ್ಯವು ಕೆಲವುಕಡೆ ಇದೆ. ಆ ಸಾಧನದ ಸಹಾಯ ಸಿಕ್ಕಿದರೆ ಬಹಳ ಅನುಕೂಲವಾಗುತ್ತದೆ. ಎಲ್ಲರೂ ರೆಫ್ರಿಜರೇಟರ್ ಇಟ್ಟುಕೊಳ್ಳಲು ಸಾಧ್ಯವಿಲ್ಲ. ಹೋದ ವರ್ಷವೂ ಈ ವಿಚಾರವನ್ನು ಹೇಳಿದೆ. ಆದ್ದರಿಂದ ಈ ಸಾಧನದ ಉಪಯೋಗಪಡೆಯಲು ಅವಕಾಶ ಮಾಡಿಕೊಟ್ಟರೆ ಒಳ್ಳೆಯ ಆರೋಗ್ಯವಾದ ಸ್ಥಿತಿಯಲ್ಲಿರುವ ಮೊಟ್ಟೆಗಳನ್ನು ಪಡೆಯುವುದಕ್ಕೂ ಮತ್ತು ಸಾಕಷ್ಟು ಕಾಲ ಮೊಟ್ಟೆಗಳನ್ನು ಮರಿಗಳಾದಂತೆ ಇಟ್ಟುಕೊಂಡು ಹಂಚುವುದಕ್ಕೂ ಅನುಕೂಲವಾಗುತ್ತದೆ. ಮೊದಲು 500-600 ರೂಪಾಯಿಗಳಿಗೆ ಬರುತ್ತಿದ್ದ ರೆಫ್ರಿಜರೇಟರಿಗೆ ಈಗ 1,800 ರೂಪಾಯಿಗಳ ಬೆಲೆಯಾಗಿದೆ. ಏಡೆಡ್ ಗ್ರೈನೇಜುಗಳಿಂದ ಇದುವರೆಗೆ ಕೆಲವರು ಸಹಾಯ ಪಡೆದಿರಬಹುದು. ಈ ಕಸುಬಿಗೆ ಸಂಬಂಧಪಟ್ಟಂತೆ ಸುಮಾರು 148 ಜನರಿದ್ದಾರೆ. ಅವರಲ್ಲಿ ಅರ್ಧಭಾಗದವರು ಆಗಲೆ ಸಹಾಯ ಪಡೆದಿರಬಹುದು. ಇನ್ನುಳಿದ ಅರ್ಧ ಜನರಿಗೆ ಸಹಾಯ ನೀಡಬೇಕು. ರೇಷ್ಮೆಯಿಂದ ಸುಮಾರು 4-5 ಕೋಟಿ ರೂಪಾಯಿಗಳವರೆಗೆ

(ಶ್ರೀ ಕೆ. ಸುಬ್ಬರಾಯರು).

ಜನರಿಗೆ ಉತ್ತೇಜನ ಬರುತ್ತದೆ. ಆದ್ದರಿಂದ ಇಂಥ ಒಂದು ಗೃಹಕೈಗಾರಿಕೆಗೆ ಅಥವ ಉಪಕಸಬಿಗೆ ಬಹಳವಾಗಿ ಉತ್ತೇಜನ ಕೊಡಬೇಕಾದ್ದು ಅಗತ್ಯ. ಮೊದಲು ಭೂಮಿಯಲ್ಲಿ ರೈತನು ಉತ್ತಮವಾದ ಬೆಳೆ ತೆಗೆಯಲು ಒಳ್ಳೆಯ ಬಿತ್ತನೆ ಮತ್ತು ಗೊಬ್ಬರ ಕೊಡಬೇಕೆಂದು ಮಾನ್ಯ ಮಂತ್ರಿಗಳು ಭಾಷಣಮಾಡಿ ಅನೇಕಕಡೆ ಹೇಳುತ್ತಿದ್ದರು. ಅದೇ ಮೂಲ ತತ್ವವನ್ನು ಮನಸಿನಲ್ಲಿಟ್ಟು ರೋಗರಹಿತವಾದ ಮೊಟ್ಟೆಗಳನ್ನು ತಯಾರುಮಾಡಲು ಉತ್ತೇಜನವೀಯಬೇಕು. ಇಲ್ಲದಿದ್ದರೆ ಯಾರೋ ಒಬ್ಬರು ರೋಗದ ಮೊಟ್ಟೆಯನ್ನಿಟ್ಟುಕೊಂಡಿದ್ದರೂ ಆ ಕಸಬಿಗೆ ಧಕ್ಕೆ ಬರುತ್ತದೆ. ಆದರಿಂದ ಸಾಕಾದಷ್ಟು ಪ್ರಯೋಜನವಾಗುವುದಿಲ್ಲ. ಸರಿಯಾಗಿ ಒಳ್ಳೆಯ ಮೊಟ್ಟೆ ಸಿಕ್ಕದಿದ್ದರೆ "water water every—where but not a drop to drink" ಎಂದು ಕೋಲರಿಡ್ಜ್ ಹೇಳಿದ ಹಾಗಾಗುತ್ತದೆ. ಆದ್ದರಿಂದ ಈಗ ಸರ್ಕಾರದವರು ಇದನ್ನು ಬಹಳ ತೀವ್ರವಾಗಿ ಪರ್ಯಾಲೋಚಿಸಬೇಕಾಗಿದೆ. ಈ ಇಲಾಖೆಯಲ್ಲಿ ಸ್ವಲ್ಪ ಹಣ ಮಾತ್ರ ಇದೆ ಎಂದು ಹೇಳುವುದಾದರೆ ಕಡಮೆ ಬಡ್ಡಿಯಲ್ಲಿ ದೀರ್ಘಕಾಲದ ಸಾಲದ ರೂಪವಾಗಿಯಾದರೂ ಹಣಕೊಟ್ಟು ವಾಪಸು ತೆಗೆದುಕೊಳ್ಳಿ. ಅಂತೂ ಹಣ ಸಹಾಯ ನೀಡದಿದ್ದರೆ ಪ್ರಯೋಜನವಿಲ್ಲ. ಅನೇಕಸಲ ಇಲಾಖೆಯನ್ನು ಕೇಳಿದರೆ ಹಣವಿಲ್ಲವೆಂದು ಹೇಳುತ್ತಾರೆ. ಬಹಳ ಜನರಿಗೆ ಬೇರೆ ಕೆಲಸವಿರುವುದರಿಂದ ಅವರು ರೇಷ್ಮೆ ತಯಾರು ಮಾಡುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಬೆಳೆಯುವ ರೈತನ ಹಿತದೃಷ್ಟಿಯಿಂದ ಈ ಎರಡು ಮೂರು ಸೌಕರ್ಯಗಳನ್ನು ಮಾಡಿಕೊಡಬೇಕು. ಭಾರತ ಸರ್ಕಾರದವರೂ ರಕ್ಷಣೆ ಕೊಟ್ಟಿದ್ದಾರೆ. ಈ ಇಲಾಖೆಯಲ್ಲಿ ಸಾಕಾದಷ್ಟು ಸಿಬ್ಬಂದಿಯಿದೆ. ಹಾಗಿದ್ದರೂ ಬೇಕಾದಷ್ಟು ದೂರುಗಳು ಬರುತ್ತಿವೆ. ಕಾರಣ ಸಿಬ್ಬಂದಿಗೆ ತಕ್ಕ ಪ್ರೋತ್ಸಾಹವಿಲ್ಲ. ಕೆಲವು ಇಲಾಖೆಗಳಲ್ಲಿ ಟೆಕ್ನಿಕಲ್ ಟ್ರೈನಿಂಗ್ ವಗೈರೆ ಶಿಕ್ಷಣ ಪಡೆದಿರುವವರಿಗೆ ಕೊಡುತ್ತಿರುವಷ್ಟು ಸಂಬಳಸಾರಿಗೆ ಈ ಇಲಾಖೆಯವರಿಗೆ ಕೊಡುತ್ತಿಲ್ಲ ಎಂಬ ದೂರಿದೆ. ಈ ಬಗ್ಗೆ ಮನವಿಗಳು ಸಹ ಬಂದಿವೆ. ಇದನ್ನು ಗಮನದಲ್ಲಿಟ್ಟು ಈ ಇಲಾಖೆಗೂ ಇತರ ಇಲಾಖೆಯವರಿಗೆ ಕೊಡುವ ಮಟ್ಟದಲ್ಲೇ ಸಂಬಳಸಾರಿಗೆ ಕೊಡಬೇಕು. ಹಾಗೆ ಮಾಡಿದರೆ ಬಹುಶಃ ಅವರು ಮಾಡುವ ಸೇವೆ ನೇರವಾಗಿ ರೈತನಿಗೆ ಮುಟ್ಟುತ್ತದೆ. ಇತರ ಇಲಾಖೆಗಳಲ್ಲಿ ಅಪ್ರತ್ಯಕ್ಷವಾಗಿ ಸೇವೆ ಸಲ್ಲಿಸಿದರೆ ಈ ಇಲಾಖೆಯಲ್ಲಿ ಪ್ರತ್ಯಕ್ಷವಾಗಿ ಸೇವೆ ಸಲ್ಲುತ್ತದೆ. ಆದ್ದರಿಂದ ಇಂಥವರ ವಿಚಾರದಲ್ಲಿ ಕೂಡಲೇ ಗಮನಕೊಡಬೇಕು. ಮತ್ತು ಈ ರೀತಿಯಾಗಿ ಈ ಇಲಾಖೆಗೆ ಸಂಬಂಧಪಟ್ಟ ನಾಲ್ಕಾರು ವಿಧವಾದ ಕೆಲಸಗಳಿಗೆ ಹಣ ಸಹಾಯ ಮಾಡಬೇಕು.

The Hon'ble Sri H. C. DASAPPA.—You must try the Co-operative movement.

ಶ್ರೀ ಕೆ. ಸುಬ್ಬರಾಯರು.—ಸಹಕಾರ ಸಂಘಗಳನ್ನೂ ಸ್ಥಾಪನೆ ಮಾಡಿದ್ದೇವೆ. ಆದರೆ ಗೊಬ್ಬರ ಬೇಕೆಂದು ಕೇಳಿದರೆ ಹೊರಗಡೆ ಮಾರ್ಕೆಟ್ಟಿನಲ್ಲಿ ಕೊಳ್ಳಬೇಕೆಂದು ಅವರು ಹೇಳುತ್ತಾರೆ. ರೇಷ್ಮೆಯು ಭೋಗ್ಯ ವಸ್ತುವೆಂಬುದನ್ನು ಒಪ್ಪೋಣ. ಆದರೆ ಇದಕ್ಕೆ ಸಮನಾದ ಗ್ರಾಮಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಖಂಡಿತ ಸಾಧ್ಯವಿಲ್ಲ. ಆದ್ದರಿಂದ ಇದಕ್ಕೆ ಚೆನ್ನಾಗಿ ಸಹಾಯ ಮಾಡಬೇಕು. ಶ್ರೀ ಮಾದಯ್ಯನವರು ಹರಿಜನರಿಗೆ ಕೋಳಿ ಸಾಕುವುದಕ್ಕೆ ಸಹಾಯ ಮಾಡಬೇಕೆಂದು ಹೇಳಿದರು. ಹಾಗೆ ಮಾಡುವುದಕ್ಕೆ ಬದಲು ಹತ್ತು ಗುಂಟೆ ಜಮೀನಿನಲ್ಲಿ ರೇಷ್ಮೆ ತೆಗೆಯುವುದಕ್ಕೆ ಉತ್ತೇಜನ ಕೊಟ್ಟರೆ ನಿಜವಾಗಿಯೂ ವರ್ಷಕ್ಕೆ 500 ರೂಪಾಯಿಗಳನ್ನು ಸಂಪಾದನೆ ಮಾಡಬಹುದು ಎಂಬುದು ನನ್ನ ಸ್ವತಃ ಅನುಭವ. ಒಂದು ಎಕರೆಯಲ್ಲಿ ಬೆಳೆ ಮಾಡಿದ್ದಕ್ಕೆ ಮೊನ್ನೆ ಒಬ್ಬರಿಗೆ 700 ರೂಪಾಯಿಗಳು ಒಂದು ಬೆಳೆಗೆ ಬಂದಿವೆ. ಆದ್ದರಿಂದ ನಿಜವಾಗಿಯೂ ರೇಷ್ಮೆ ಬೆಳೆಯುವ ರೈತನಿಗೆ ಸಹಾಯ ಮಾಡಬೇಕು. ಹಾಗೆ ಉತ್ತೇಜನ ಕೊಟ್ಟು ರೈತನು ಹಣಸಂಪಾದನೆ ಮಾಡಿದರೆ ತಮ್ಮ ಮೇಲೆ ಬೀಳುವುದು ಕಡಮೆಯಾಗುತ್ತದೆ. ಆದ್ದರಿಂದ ರೇಷ್ಮೆ ವ್ಯವಸಾಯಗಾರರಿಗೆ ಇರುವ ತೊಂದರೆಯನ್ನು ನಿವಾರಣೆ ಮಾಡಿ ಎಲ್ಲಾ ವಿಧವಾದ ನೆರವನ್ನು ಕೊಡಬೇಕೆಂಬುದೇ ನನ್ನ ಆಶಯ.

ಇನ್ನು ಉಗಾದಿ ಹಬ್ಬದ ವಿಚಾರದಲ್ಲಿ ಒಂದು ಮಾತು. ನಾಳೆ ಉಗಾದಿ ಬರುತ್ತದೆ. ಆ ಸಂದರ್ಭದಲ್ಲಿ ಜನರಿಗೆ ಬಟ್ಟೆ ಮತ್ತು ಒಬ್ಬಟ್ಟಿಗೆ ಗೋಧಿ ಬೇಕು. ಇಲ್ಲದಿದ್ದರೆ ಆರೋಪ ಬರುತ್ತದೆ. ಈ ಎರಡೂ ಸಿಕ್ಕುವುದಿಲ್ಲವೆಂದು ಜನರಲ್ಲಿ ಈಗಾಗಲೇ ಕಳವಳವುಂಟಾಗುತ್ತಿದೆ. ಈಗ ಒಂದು ಪ್ರೆಸ್‌ನೋಟನ್ನು ಹೊರಡಿಸಿ ಬಟ್ಟೆ ಬಂದಿದೆಯೆಂದು ತಿಳಿಸಿರುವುದನ್ನು ನೋಡಿ ಸಂತೋಷವಾಯಿತು. ಆದರೆ ಇನ್ನೊಂದು ವಿಚಾರ ಜ್ಞಾಪಕದಲ್ಲಿಡಬೇಕು. ದೇವರು ವರಕೊಟ್ಟರೂ ಪೂಜಾರಿ ವರಕೊಡ ಎಂದು ಹೇಳುವ ಹಾಗೆ ಹಂಚಿಕೆ ವಿಧಾನದಲ್ಲಿ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಅದನ್ನು ಸರಿಯಾಗಿ ಯೋಚನೆಮಾಡಿ ಪ್ರತಿಯೊಂದು ಊರಿನಲ್ಲೂ ಅಮಲ್ದಾರರ ಮುಖಾಂತರ ಅಥವಾ ಊರಿನ ಮುಖಂಡರ ಅಥವಾ ಈ ಮಾನ್ಯ ಸಭೆಯ ಸದಸ್ಯರ ಮೂಲಕ ಹಂಚಿಕೆ ಮಾಡುವುದಕ್ಕೆ ತಕ್ಕ ಏರ್ಪಾಡು ಮಾಡದಿದ್ದರೆ ಸಹಾಯವಾಗುವುದಿಲ್ಲ ಮತ್ತು ನಿಮಗೆ ಆರೋಪಣೆಯೂ ತಪ್ಪುವುದಿಲ್ಲ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಾವು ಕೊಟ್ಟಿರುವ ಸಲಹೆ ಪತ್ರಿಕಾ ಪ್ರಕಟನೆಯಲ್ಲಿ ಅಡಕವಾಗಿದೆ.

ಶ್ರೀ ಕೆ. ಸುಬ್ಬರಾಯರು.—ತಾವು ಆ ರೀತಿ ಹಂಚಿಕೆ ಮಾಡಲು ಪ್ರಯತ್ನಿಸಿರುವುದಕ್ಕೆ ಸಂತೋಷ. ಹಂಚುವುದನ್ನು ಚೆನ್ನಾಗಿ ಹಂಚಿಕೆ ಮಾಡಿದರೆ ಮತ್ತೂ ಅತಿಶಯವಾದ ಅಭಿನಂದನೆ ಸಲ್ಲಿಸುತ್ತೇನೆ. ಭಾಷಣ ಮಾಡಿದವರನೇಕರು ಹಳ್ಳಿಗಾಡಿನಲ್ಲಿ ಹೆಚ್ಚು ಆಹಾರ ಬೆಳೆ ಬೆಳೆಯಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ನನ್ನ ವಿನಂತಿಯೇನೆಂದರೆ ಈಗ ವಿದ್ಯುಚ್ಛಕ್ತಿಯಿಂದ ಪಂಪುಗಳನ್ನು ಹಾಕಿಕೊಳ್ಳಲು ನೂರಾರು, ಸಾವಿರಾರು ಅರ್ಜಿಗಳು ಬಂದು ಮಾನ್ಯ ಮಂತ್ರಿಗಳ ಬಳಿ ತೀರ್ಮಾನಕ್ಕೆ ಇವೆ. ಆಹಾರ ಬೆಳೆಯುವುದಕ್ಕೆ ಮತ್ತಾವ ಯೋಜನೆಗಳಿಗಿಂತಲೂ, ತಕ್ಷಣ ಪ್ರತಿಫಲ ಕೊಡತಕ್ಕ ಯೋಜನೆಯೆಂದರೆ ಯಾವುದಿದೆಯೋ ಅದಕ್ಕೆ ವಿದ್ಯುಚ್ಛಕ್ತಿ ಒದಗಿಸಬೇಕು. ಈಗ ತಾವು ಪಟ್ಟಣಗಳಿಗೆ ಒದಗಿಸಲು ಹೆಚ್ಚು ಅವಕಾಶ ಮಾಡಿದ್ದೀರಿ. ನಾನು ಪಟ್ಟಣಗಳಿಗೆ ಕೊಡಬೇಡಿ ಎಂದು ಹೇಳುವುದಿಲ್ಲ. ಹಳ್ಳಿಗಾಡುಗಳಲ್ಲಿ ಯಾವ ಗ್ರಾಮದಲ್ಲಿ ವಿದ್ಯುಚ್ಛಕ್ತಿಯ ಪಂಪನ್ನು ಹಾಕಿ ವ್ಯವಸಾಯ ಮಾಡುತ್ತೇವೆ ಎಂದು ಮುಂದೆ ಬರುತ್ತಾರೋ ಅವರಿಗೆ ತಾವು ಜಾಗ್ರತೆ ಹೆಚ್ಚು ಹೆಚ್ಚು ಅವಕಾಶ ಕಲ್ಪಿಸಿಕೊಟ್ಟರೆ ಹೆಚ್ಚು ಆಹಾರ ಬೆಳೆಯಲು ಅನುಕೂಲವಾಗುತ್ತದೆ. ಸರ್ಕಾರದವರೇನೋ ಒಳ್ಳೆಯ ಮಾತಿನಲ್ಲಿ ಹೇಳುತ್ತಾರೆ. ಆದರೆ ಈಗ ಆದರಿಂದ ಆಗತಕ್ಕ ಫಲ ಎಷ್ಟು? ಭಾಷಣ ಮಾಡುವಾಗ ಹಸನ್ಮುಖದಿಂದ ಬೆಣ್ಣೆಯಲ್ಲಿ ಕೂದಲು ತೆಗೆದಹಾಗೆ ಯಾವ ರೀತಿ

ಹೇಳುತ್ತಾರೆಯೋ ಅದೇರೀತಿ ಅನುಕೂಲ ಕಲ್ಪಿಸಿಕೊಟ್ಟರೆ ಬಹಳ ಸಂತೋಷ.

ಇನ್ನು ಒಂದೇ ಒಂದು ವಿನಂತಿ ಏನೆಂದರೆ, ಪಾನನಿರೋಧದಲ್ಲಿ ಒಂದು ದೋಷವಿದೆ. ಅದನ್ನು ಗಮನಿಸಬೇಕು. ಎಲ್ಲಿ ಪಾನನಿರೋಧವನ್ನು ಆಚರಣೆಗೆ ತಂದಿದ್ದೀರೋ ಅಲ್ಲಿ ಮಾರ ಕಟ್ಟುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಕ್ಲೋಸ್‌ಪೇಟೆ, ಚೆನ್ನಪಟ್ಟಣ— ಈ ಕಡೆಗಳಲ್ಲಿ ಪಾರಕಟ್ಟುವುದರಿಂದ ಅಲ್ಲೆಲ್ಲಾ ಚಿಕ್ಕ ಚಿಕ್ಕ ಹೆಂಡದ ಅಂಗಡಿಗಳು ಆಗಿ ಬೇಕಾದಷ್ಟು ಅನ್ಯಾಯವಾಗುತ್ತಾ ಇದೆ. ಅದನ್ನು ಸರಿಪಡಿಸಬೇಕು.

ಕೊನೆಯದಾಗಿ ಇನ್ನೊಂದು ಅಂಶವನ್ನು ಸರ್ಕಾರದವರ ಗಮನಕ್ಕೆ ತಂದು ನನ್ನ ಭಾಷಣವನ್ನು ಮುಗಿಸುತ್ತೇನೆ. ಬೆಂಗಳೂರು, ಮೈಸೂರಿನಿಂದ ಕೊಆಪರೇಟೀವ್ ಸೊಸೈಟಿಗಳಿಗೆ ವ್ಯಾಪಾರಕ್ಕಾಗಿ ಬತ್ತ ರಾಗಿ ಮುಂತಾದುವನ್ನು ಒದಗಿಸತಕ್ಕ ಕಾಲದಲ್ಲಿ, ಸರಿಯಾದ ಅಳತೆ ಕೊಡಬೇಕು. ಪ್ರತಿಯೊಂದು ಡಿಪೋನಲ್ಲೂ ಸಹ ಪ್ರತಿಚೀಲದಲ್ಲೂ ಕಡಿಮೆ ಬರುತ್ತಾ ಇದೆ. ನಾನು ಮಲ್ಟಿಪರ್‌ಪಸ್ ಕೋಆಪರೇಟೀವ ಸೊಸೈಟಿಯ ಒಬ್ಬ ಸದಸ್ಯನಾಗಿ, ನನ್ನ ಅನುಭವದಿಂದ ಹೇಳುತ್ತಿದ್ದೇನೆ. ಕಾರ್ಕಾರ್‌ಹಳ್ಳಿಯಲ್ಲಿ ಒಂದು ಸೊಸೈಟಿ ಇದೆ. ಅಲ್ಲೊಂದೇ ಕಡೆಯಲ್ಲಿ ಅಲ್ಲ, ಪ್ರತಿ ತಾಲ್ಲೂಕಿನಿಂದಲೂ ಸಹ ದೂರುಗಳು ಬಂದಿವೆ. ಡೆಪ್ಯೂಟಿ ಕಮೀಷನರ್‌ರವರಿಗೂ ಮತ್ತು ಮಾನ್ಯ ಮಂತ್ರಿಗಳಿಗೂ ಸಹ ಕಾಗದ ಬರೆದಿದ್ದಾರೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಳೆದುಕೊಡಬೇಕು ಹಾಗೇ ಕೊಡಕೂಡದು ಎಂದು ತಿಳುವಳಿಕೆ ಕೊಟ್ಟಿದ್ದೇವೆ.

ಶ್ರೀ ಕೆ. ಸುಬ್ಬರಾಯರು.— ಸಣ್ಣಪುಟ್ಟ ನೌಕರರ ಕಷ್ಟ ಏನೆಂದರೆ, ಆ ರೀತಿ ಕಡಿಮೆಬಂದರೆ ಕಂಪ್ಲೇಂಟ್ ಮಾಡಕೂಡದು ಎಂಬುದಾಗಿ ಇನ್‌ಸ್ಟ್ರಕ್ಷನ್ ಇದೆ ಎಂದು ಹೇಳುತ್ತಾರೆ. ಆಗ 3-4 ಸೇರು ಕಮ್ಮಿ ಬರುವುದನ್ನು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಿ ಸರಿಪಡಿಸಬೇಕು. ಇಲ್ಲದಿದ್ದರೆ ಕೊಡುವವರಿಗೆ ಕಮ್ಮಿ ಮಾಡಬೇಕು. ಈ ರೀತಿ ಪ್ರತಿಯೊಂದು ಡಿಪೋನಲ್ಲೂ ಖಂಡಿತ ನಡೆಯುತ್ತದೆ. ಬೆಂಗಳೂರಿನಲ್ಲಿ ಯಾವ ರೀತಿ ಇದೆಯೋ ಹೇಳಲಾರೆ. ನಾನು ನೋಡಿರುವ ವಿಚಾರ ಹೇಳಿದ್ದೇನೆ. ಹೀಗಾಗಿ ಸೊಸೈಟಿಗಳವರಂತೂ ಸಾವಿರಾರು ರೂಪಾಯಿ ನಷ್ಟ ಹೊಂದಿದ್ದಾರೆ. ರಾಮನಗರ, ಕಾರ್ಕಾರ್‌ಹಳ್ಳಿ ಸೊಸೈಟಿಗಳಲ್ಲಿ ಸಾವಿರಾರು ರೂಪಾಯಿ ಹೋಗುತ್ತಾ ಇದೆ. ಆದ್ದರಿಂದ ಈ ದೋಷಗಳನ್ನೆಲ್ಲಾ ಸರಿಪಡಿಸಬೇಕೆಂದು ವಿನಂತಿ ಮಾಡಿಕೊಂಡು ರೇಷ್ಮೆ ಕಸಬಿಗೆ ಹೆಚ್ಚು ಉತ್ತೇಜನ ಕೊಡಬೇಕೆಂದು ಮತ್ತೊಮ್ಮೆ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Financial Business.

Voting of Demands for Supplementary and Additional Grants for 1950-51.

Mr. SPEAKER (The Hon'ble Sri V. Venkatappa).—Voting of Demands for Supplementary and Additional Grants for the year 1950-51 will be taken up now.

Demand No. 1—Land Revenue.

The Hon'ble Sri H. SIDDAIYA (Minister for Revenue and Excise).—Sir, on the recommendation of His Highness the Maharaja, I beg to move:

"That a supplementary sum not exceeding Rs. 4,97,000 be granted to the Government to defray the charges which will come in course of payment during the year ending 31st day of March 1951 in respect of 'Land Revenue'."

In the Supplementary Estimates under Demand No. 1, Land Revenue, Explanatory Note makes the matter clear and this amount is required because of the disbursement of arrears of pay consequent on the general revision of the scales of pay and a lower provision was made. Therefore this amount is needed. This may be sanctioned.

Mr. SPEAKER.—The question is:

"That a supplementary sum not exceeding Rs. 4,97,000 be granted to the Government to defray the charges which will come in course of payment during the year ending 31st day of March 1951 in respect of 'Land Revenue'."

The motion was adopted.

Demand No. 7—General Administration

The Hon'ble Sri H. C. DASAPPA (Minister for Finance and Industries).—Sir, on the recommendation of His Highness the Maharaja, I beg to move:

"That a supplementary sum not exceeding Rs. 17,000 be granted to the Government to defray the charges which will come in course of payment during the year ending 31st day of March 1951 in respect of 'General Administration'."

Details for which this demand has been placed before this House are given in the Supplementary Estimates. Consequent on the appointment of Examiner for Local Fund Audit, expenditure had to be incurred on salaries, establishment and so on and it comes to Rs. 14,000. This is of course a matter which the House will welcome and the other Rs. 3,000 is for Efficiency Audit for the purpose of meeting the increased expenditure which had to be incurred towards petrol and incidental charges.